# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 6 ಸೋಮವಾರ 2023

ಸಂಪುಟ: 43 | ಸಂಚಿಕೆ: 289 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



# ಚಾಮುಂಡೇಶ್ವರಿಯಲ್ಲಿ ಜಿಟಿಡಿ ಮಹಾ ಶಕ್ತಿ ಪ್ರದರ್ಶನ

● ಭಾರೀ ಜನಸಾಗರದ ನಡುವೆ ನಿಖಿಲ್ ಕುಮಾರಸ್ವಾಮಿ, ಹರೀಶ್‌ಗೌಡರ ಹುಟ್ಟುಹಬ್ಬ ಅಂಗವಾಗಿ ರೋಡ್ ಶೋ ● ಕಾರ್ಯಕರ್ತರಿಂದ ಬೈಕ್ ರ್ಯಾಲಿ ● ಹಾದಿಯುದ್ದಕ್ಕೂ ವಿವಿಧ ಹಾರಲಂಕಾರ





**ಮೈಸೂರು, ಫೆ.5(ಎಂಕೆ, ಎಸ್‌ಬಿಡಿ)– ಜೆಡಿಎಸ್ ಯುವ ನಾಯಕರ ಜನ್ಮದಿನೋತ್ಸವದ ಅದ್ಧೂರಿ ಆಚರಣೆ ಮೂಲಕ ಭಾನುವಾರ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಪಕ್ಷದ ಮಹಾಶಕ್ತಿ ಪ್ರದರ್ಶಿಸಲಾಯಿತು. ಇದರೊಂದಿಗೆ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರ ವಿರುದ್ಧ ಹರಿಹಾಯ್ದು ಸವಾಲೆಸೆದಿದ್ದವರಿಗೆ ಖಡಕ್ ಪ್ರತ್ಯುತ್ತರ ನೀಡಿದಂತಿತ್ತು.**

ಜೆಡಿಎಸ್ ಯುವ ನಾಯಕರಾದ ನಿಖಿಲ್ ಕುಮಾರಸ್ವಾಮಿ ಹಾಗೂ ಜಿ.ಡಿ.ಹರೀಶ್‌ಗೌಡರು ಇತ್ತೀಚೆಗೆ ಹುಟ್ಟುಹಬ್ಬ ಆಚರಿಸಿಕೊಂಡಿದ್ದು, ಈ ಹಿನ್ನೆಲೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಜೆಡಿಎಸ್ ಕಾರ್ಯಕರ್ತರು ಮೈಸೂರು–ಹೆಚ್.ಡಿ.ಕೋಟೆ ರಸ್ತೆ, ಜಯಪುರ ಬಳಿಯ ದಾರಿಪುರದಲ್ಲಿ ಇಂದು ಆಯೋಜಿಸಿದ್ದ ಬೃಹತ್ ಕಾರ್ಯಕ್ರಮದಲ್ಲಿ ಜನಸ್ತೋಮವೇ ನೆರೆದಿದ್ದಿತು. ಮಧ್ಯಾಹ್ನ 12 ಗಂಟೆಯಿಂದಲೂ ಕ್ಷೇತ್ರದ ಮೂಲೆ ಮೂಲೆಗಳಿಂದ ಜನ ಆಗಮಿಸಿದ್ದರು.

ಕಾರ್ಯಕರ್ತರ ಬೈಕ್ ರ್ಯಾಲಿಯೊಂದಿಗೆ ತೆರೆದ ವಾಹನದಲ್ಲಿ ರೋಡ್ ಶೋ ನಡೆಸಿದ ಯುವ ನಾಯಕರು, ದಾರಿಯುದ್ದಕ್ಕೂ ಪ್ರೀತಿಯ ಅಭಿನಂದನೆಯನ್ನು ಸ್ವೀಕರಿಸಿ ವೇದಿಕೆಗೆ ಆಗಮಿಸುವುದು ಸಂಜೆಯಾದರೂ ಕೂಡ ಕಾರ್ಯಕರ್ತರು ಕದಲದೆ ಕುಳಿತಿದ್ದರು. ಕಾರ್ಯಕ್ರಮದ ಕೊನೆವರೆಗೂ ಜೆಡಿಎಸ್ ವರಿಷ್ಠರಾದ ಹೆಚ್.ಡಿ.ದೇವೇಗೌಡರು, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಜಿ.ಟಿ.ದೇವೇಗೌಡರು, ನಿಖಿಲ್, ಹರೀಶ್‌ಗೌಡರಿಗೆ ಜೈಕಾರ, ಹರ್ಷೋದ್ಗಾರ ಮಾರ್ಧನಿಸಿತು.

ಕಣ್ಣು ಹಾಯಿಸಿದಲ್ಲೆಲ್ಲಾ ಜೆಡಿಎಸ್ ಬಾವುಟಗಳು ರಾರಾಜಿಸುತ್ತಿದ್ದವು. ಯುವ ನಾಯಕರ ಜನ್ಮದಿನೋತ್ಸವವಾಗಿದ್ದರೂ ಬೃಹತ್ ರಾಜಕೀಯ ಸಮಾವೇಶದಂತೆ ಕಂಡು ಬಂದಿತು. ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಕಾರ್ಯಕರ್ತರ ಒಗ್ಗಟ್ಟಿಗೆ ಸಾಕ್ಷಿಯಾಗಿತ್ತು. ▶ 8ನೇ ಪುಟಕ್ಕೆ

❝ ಜಿ.ಟಿ.ದೇವೇಗೌಡರಿಗೆ ಸವಾಲು ಹಾಕಿದ್ದವರಿಗೆ ಈ ಬೃಹತ್ ಸಮಾವೇಶದ ಮೂಲಕ ಪ್ರತಿ ಸವಾಲು ಹಾಕಿದ್ದೇವೆ. ಇವರ ಬಗ್ಗೆ ಮಾತನಾಡುವುದಕ್ಕೂ ಮುನ್ನ ವಾಸ್ತವ ತಿಳಿದುಕೊಳ್ಳಬೇಕು. ಈ ಕಾರ್ಯಕ್ರಮ ನನಗೆ 2018ರ 'ಕುಮಾರ ಪರ್ವ' ಕಾರ್ಯಕ್ರಮವನ್ನು ನೆನಪಿಸುತ್ತದೆ. **–ನಿಖಿಲ್ ಕುಮಾರಸ್ವಾಮಿ**


❝ ಜಿ.ಟಿ.ದೇವೇಗೌಡರು ಐದು ದಶಕಗಳಿಂದ ಚಾಮುಂಡೇಶ್ವರಿ ಕ್ಷೇತ್ರದ ಜನರ ಸೇವೆ ಮಾಡಿದ್ದಾರೆ. ಇವರು ಶಾಸಕರಾದ ಬಳಿಕ ಕ್ಷೇತ್ರದಲ್ಲಾಗಿರುವ ಅಭಿವೃದ್ಧಿಯನ್ನು ಜನ ಗಮನಿಸಿದ್ದಾರೆ. ಜಿಟಿಡಿ ಅವರ ಬಗ್ಗೆ ಜನರಲ್ಲಿರುವ ನಂಬಿಕೆ, ವಿಶ್ವಾಸವನ್ನು ಘಾಸಿಗೊಳಿಸಲು ಸಾಧ್ಯವಿಲ್ಲ. **–ಜಿ.ಡಿ.ಹರೀಶ್‌ಗೌಡ**

### ❝ ನಿಖಿಲ್ ಕುಮಾರಸ್ವಾಮಿ–ಹರೀಶ್‌ಗೌಡ ರಾಮಲಕ್ಷ್ಮಣರಂತೆ...

ಇಂದಿನ ಕಾರ್ಯಕ್ರಮದಲ್ಲಿ ಹಲವು ಹಳ್ಳಿಗಳ ಮುಖಂಡರು ಕಾಂಗ್ರೆಸ್ ತೊರೆದು ಪಕ್ಷ ಸೇರ್ಪಡೆಯಾಗಲು ಮುಂದಾಗಿದ್ದರು. ಆದರೆ ನಾವೇ ತಮ್ಮ ಗ್ರಾಮಕ್ಕೆ ಬಂದು ಪಕ್ಷಕ್ಕೆ ಸ್ವಾಗತಿಸುವುದಾಗಿ ತಿಳಿಸಿದ್ದೇನೆ. ಸದ್ಯ ಯರಗನಹಳ್ಳಿ ರಘು, ಇಲವಾಲದಲ್ಲಿ ಭೈರೇಗೌಡರು ಸೇರಿದಂತೆ ಅನೇಕರು ಕಾಂಗ್ರೆಸ್ ತೊರೆದು ಜೆಡಿಎಸ್ ಸೇರಿದ್ದಾರೆ. ಕುಮಾರಸ್ವಾಮಿ ಅವರನ್ನು ಮತ್ತೊಮ್ಮೆ ಮುಖ್ಯಮಂತ್ರಿ ಮಾಡಬೇಕೆಂಬುದು ಇವರೆಲ್ಲರ ಆಶಯ. ಯುವ ನಾಯಕ ನಿಖಿಲ್ ಕುಮಾರಸ್ವಾಮಿ ಮುಂದಿನ ದಿನಗಳಲ್ಲಿ ದೊಡ್ಡ ನಾಯಕರಾಗಿ ಮುನ್ನಡೆಯುತ್ತಾರೆ. ಹುಣಸೂರು ಕ್ಷೇತ್ರದಲ್ಲಿ ಜಿ.ಡಿ.ಹರೀಶ್‌ಗೌಡ ಗೆದ್ದೇ ಗೆಲ್ಲುತ್ತಾರೆ. ನಿಖಿಲ್ ಹಾಗೂ ಹರೀಶ್‌ಗೌಡ ನನ್ನ ಕಣ್ಣುಗಳಂತೆ. ಇವರಿಬ್ಬರೂ ಲವ–ಕುಶ, ರಾಮ–ಲಕ್ಷ್ಮಣರಂತೆ. ಇನ್ನೂ ಐದಾರು ದಶಕಗಳ ಕಾಲ ಜನಸೇವೆ ಮಾಡುವ ಶಕ್ತಿ ಅವರಿಗಿದೆ. **–ಜಿ.ಟಿ.ದೇವೇಗೌಡ, ಶಾಸಕರು, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ.**

## ಸಿಎಂ ದೆಹಲಿಗೆ

### ವರಿಷ್ಠರ ಭೇಟಿ




**ಬೆಂಗಳೂರು:** ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಂದು (ಭಾನುವಾರ) ದೆಹಲಿ ಪ್ರವಾಸ ಕೈಗೊಂಡಿದ್ದು ದೆಹಲಿಯಲ್ಲಿ ವರಿಷ್ಠರನ್ನು ಭೇಟಿ ಮಾಡಿ ಹಲವು ವಿಷಯಗಳ ಕುರಿತು ಚರ್ಚಿಸಿದರು. ಇಂದು ಮಧ್ಯಾಹ್ನ 2.30ಕ್ಕೆ ಸಿಎಂ ಬೊಮ್ಮಾಯಿಯವರು ಬೆಂಗಳೂರಿನಿಂದ ವಿಶೇಷ ವಿಮಾನದಲ್ಲಿ ದೆಹಲಿಗೆ ತೆರಳಿದರು. ಅಲ್ಲಿ ಪಕ್ಷದ ನಾಯಕರನ್ನು ಭೇಟಿ ಮಾಡಿ ಮೊನ್ನೆಯ ಬಜೆಟ್‌ನಲ್ಲಿ ಭದ್ರಾ ಮೇಲ್ದಂಡೆ ಯೋಜನೆಗೆ ನೀಡಿರುವ ಅನುದಾನ ಮತ್ತು ಕರ್ನಾಟಕಕ್ಕೆ ಬೇರೆ ಯೋಜನೆಗಳಿಗೆ ಕೇಂದ್ರದ ನೆರವಿಗೆ ಮುಖ್ಯಮಂತ್ರಿಗಳು ವರಿಷ್ಠರಿಗೆ ಧನ್ಯವಾದ ಹೇಳಿದರು. ಅದರ ಜೊತೆಗೆ ಮುಂಬರುವ ವಿಧಾನಸಭೆ ಚುನಾವಣೆ ಸೇರಿದಂತೆ ಹಲವು ವಿಷಯಗಳ ಕುರಿತು ಚರ್ಚೆ ನಡೆಸಿದರು ಎಂದು ತಿಳಿದು ಬಂದಿದೆ.

## ಬಿಜೆಪಿ ಅಧಿಕಾರಕ್ಕೆ ಬಂದರೆ ಪ್ರಹ್ಲಾದ್ ಜೋಶಿ ಸಿಎಂ

### ಹೆಚ್.ಡಿ.ಕುಮಾರಸ್ವಾಮಿ ಹೊಸ ಬಾಂಬ್

ಬೆಂಗಳೂರು,ಫೆ.5–2023ರ ಮಹಾ ಸಮರದ ಹೊಸ್ತಿಲಲ್ಲಿ ದಳಪತಿ ಹೆಚ್.ಡಿ ಕುಮಾರಸ್ವಾಮಿ ಹೊಸ ಬಾಂಬ್ ಸಿಡಿಸಿದ್ದಾರೆ.



ಕೇಂದ್ರ ಸಚಿವ ಪ್ರಹ್ಲಾದ್ ಜೋಶಿಯನ್ನು ಇದೀಗ ಹೆಚ್‌ಡಿಕೆ ಟಾರ್ಗೆಟ್ ಮಾಡಿದ್ದಾರೆ. ಬಿಜೆಪಿ ಅಧಿಕಾರಕ್ಕೆ ಬಂದರೆ ಬ್ರಾಹ್ಮಣರಿಗೇ ಮುಖ್ಯಮಂತ್ರಿ ಪಟ್ಟ ನೀಡಲಾಗುತ್ತದೆ. ಪ್ರಹ್ಲಾದ್ ಜೋಶಿಗೆ ಪಟ್ಟ ಕಟ್ಟಲು ಸಂಘ ಪರಿವಾರ ಪ್ಲಾನ್ ಮಾಡಿದೆ ಎಂಬ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಹೇಳಿಕೆ ಇದೀಗ ಭಾರೀ ಚರ್ಚೆಗೆ ಕಾರಣವಾಗಿದೆ.

**ಹೆಚ್‌ಡಿಕೆ ಹೇಳಿದ್ದು ಯಾಕೆ..?:** ಕೇಂದ್ರ ಸಚಿವ ಪ್ರಹ್ಲಾದ್ ಜೋಶಿಯವರು ಜೆಡಿಎಸ್ ಪಂಚರತ್ನ ಯಾತ್ರೆಯನ್ನು ಟೀಕಿಸಿದ್ದರು. ಇದು ಪಂಚರತ್ನ ಅಲ್ಲ, ನವಗ್ರಹ ಯಾತ್ರೆ ಎಂದಿದ್ದರು. ಜೋಶಿ ಹೇಳಿಕೆಯಿಂದ ಸಿಡಿದೆದ್ದ ಕುಮಾರಸ್ವಾಮಿ ಇದೀಗ ವಾಗ್ದಾಳಿ ನಡೆಸಿದ್ದಾರೆ ಈ ಬಾರಿ ಬಿಜೆಪಿ ಅಧಿಕಾರಕ್ಕೆ ಬಂದರೆ ಬ್ರಾಹ್ಮಣರಿಗೆ ಸಿಎಂ ಪಟ್ಟ ಆರ್‌ಎಸ್‌ಎಸ್ ಸಭೆಯಲ್ಲಿ ಪ್ರಹ್ಲಾದ್ ಜೋಶಿ ಹೆಸರು ಪ್ರಸ್ತಾಪವಾಗಿದೆ ಎಂಬುದಾಗಿ ಹೇಳಿದ್ದಾರೆ.

**ಹೆಚ್‌ಡಿಕೆ ಕಿಡಿ:** ಬ್ರಾಹ್ಮಣರಲ್ಲಿ ಎರಡು ಮೂರು ವಿಧಗಳಿವೆ. ಪ್ರಹ್ಲಾದ್ ಜೋಶಿ ನಮ್ಮ ಹಳೆಯ ಬ್ರಾಹ್ಮಣರಲ್ಲ. ಅವರು ದೇಶ ಒಡೆಯುವವರು, ▶ 8ನೇ ಪುಟಕ್ಕೆ

## ಇಂದು ಬೆಂಗಳೂರಿಗೆ ಮೋದಿ



ಬೆಂಗಳೂರು,ಫೆ.5–ಪ್ರಧಾನಿ ನರೇಂದ್ರ ಮೋದಿ ಅವರು ಫೆ.6ರಂದು ಕರ್ನಾಟಕಕ್ಕೆ ಆಗಮಿಸುತ್ತಿದ್ದು, ಬೆಂಗಳೂರಿನಲ್ಲಿ ಇಂಡಿಯಾ ಎನರ್ಜಿ ವೀಕ್ 2023ಕ್ಕೆ ಚಾಲನೆ ನೀಡಲಿದ್ದಾರೆ. ಇದರ ಜೊತೆಗೆ E20 ಇಂಧನ ಲೋಕಾರ್ಪಣೆ, ಗ್ರೀನ್‌ಮೊಬಿಲಿಟಿ ರ್ಯಾಲಿಗೆ ಚಾಲನೆ ಸೇರಿ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ.

ರ್ಯಾಲಿ ಹಿನ್ನೆಲೆಯಲ್ಲಿ 1000–1,500 ವಿದ್ಯಾರ್ಥಿಗಳ ರವಾನಿಸುವಂತೆ ನಗರದ 6 ವಿಶ್ವವಿದ್ಯಾಲಯಗಳಿಗೆ ಉನ್ನತ ಶಿಕ್ಷಣ ಇಲಾಖೆ ಮನವಿ ಮಾಡಿಕೊಂಡಿದೆ ಎಂದು ತಿಳಿದುಬಂದಿದೆ. ನಾಳೆ ಬೆಂಗಳೂರಿಗೆ ಆಗಮಿಸಲಿರುವ ಮೋದಿಯವರು ಗ್ರೀನ್ ಮೊಬಿಲಿಟಿ ರ್ಯಾಲಿಗೆ ಚಾಲನೆ ನೀಡಲಿದ್ದಾರೆ. ಈ ರ್ಯಾಲಿಯು ಹಸಿರು ಇಂಧನ ಮೂಲಗಳ ಮೇಲೆ ಚಲಿಸುವ ವಾಹನಗಳ ಭಾಗವಹಿಸುವಿಕೆಗೆ ಸಾಕ್ಷಿಯಾಗಲಿದೆ ಮತ್ತು ಹಸಿರು ಇಂಧನಗಳ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಸಹಾಯ ಮಾಡುತ್ತದೆ. ರ್ಯಾಲಿಯು 42 ಕಿ.ಮೀ. ರಸ್ತೆಯವರೆಗೂ ನಡೆಯಲಿದ್ದು, ರ್ಯಾಲಿಗೆ 1,000–1,5000 ವಿದ್ಯಾರ್ಥಿಗಳನ್ನು ಕಳುಹಿಸುವಂತೆ ವಿವಿಗಳಿಗೆ ಶಿಕ್ಷಣ ಇಲಾಖೆ ಮನವಿ ಮಾಡಿಕೊಂಡಿದೆ ಎಂದು ವರದಿಗಳು ತಿಳಿಸಿವೆ. ರ್ಯಾಲಿಯು ಬೆಂಗಳೂರಿನ ಅಂತಾರಾಷ್ಟ್ರೀಯ ವಸ್ತುಪ್ರದರ್ಶನ ಕೇಂದ್ರದಿಂದ ಆರಂಭಗೊಂಡು ನೀಲಕಂಠ ಪಾರ್ಕಿಂಗ್ ಮೈದಾನ/ಮಾದಾವರ ಮೈದಾನದಲ್ಲಿ ಕೊನೆಗೊಳ್ಳಲಿದೆ. ಈ ಕಾರ್ಯಕ್ರಮಕ್ಕೆ ವಿದ್ಯಾರ್ಥಿಗಳನ್ನು ಕಳುಹಿಸಲು ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಕೇಂದ್ರ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯಗಳು, ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ, ನೃಪತುಂಗ ವಿವಿ ಮತ್ತು ಯುವಿಸಿಇಗೆ ಸೂಚಿಸಿದೆ ಎಂದು ತಿಳಿದುಬಂದಿದೆ.

## ಪಾಕಿಸ್ತಾನದ ಮಾಜಿ ಅಧ್ಯಕ್ಷ ಪರ್ವೇಜ್ ಮುಷರಫ್ ನಿಧನ



ಇಸ್ಲಾಮಾಬಾದ್,ಫೆ.5–ಪಾಕಿಸ್ತಾನದ ಮಾಜಿ ಅಧ್ಯಕ್ಷ ಪರ್ವೇಜ್ ಮುಷರಫ್ ಅವರು ಭಾನುವಾರ ದುಬೈನ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ. ದುಬೈನ ಅಮೆರಿಕನ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಜನರಲ್ (ನಿವೃತ್ತ) ಮುಷರಫ್(73) ಅವರು ನಿಧನರಾಗಿರುವುದಾಗಿ ಅವರ ಕುಟುಂಬದ ಹೇಳಿಕೆಯನ್ನು ಉಲ್ಲೇಖಿಸಿ ಜಿಯೋ ನ್ಯೂಸ್ ವರದಿ ಮಾಡಿದೆ. 2016ರಿಂದ ದುಬೈನಲ್ಲಿ ಮುಷರಫ್ ವಾಸಿಸುತ್ತಿದ್ದರು. ಕಾರ್ಗಿಲ್‌ನಲ್ಲಿ ವಿಫಲವಾದ ದುಸ್ಸಾಹಸದ ನಂತರ, ಮುಷರಫ್ 1999ರಲ್ಲಿ ರಕ್ತರಹಿತ ದಂಗೆಯಲ್ಲಿ ಆಗಿನ ಪ್ರಧಾನಿ ಷರೀಫ್ ಅವರನ್ನು ಪದಚ್ಯುತಗೊಳಿಸಿದರು ಮತ್ತು 1999ರಿಂದ 2008ರವರೆಗೆ ವಿವಿಧ ಹುದ್ದೆಗಳಲ್ಲಿ ಮೊದಲು ಪಾಕಿಸ್ತಾನದ ಮುಖ್ಯ ಕಾರ್ಯನಿರ್ವಾಹಕರಾಗಿ ಮತ್ತು ನಂತರ ಅಧ್ಯಕ್ಷರಾಗಿ ಪಾಕಿಸ್ತಾನವನ್ನು ಆಳಿದರು. 2007ರ ನ.3 ಸಂವಿಧಾನವನ್ನು ಅಮಾನತುಗೊಳಿಸಿದ್ದಕ್ಕಾಗಿ 2014ರ ಮಾರ್ಚ್‌ನಲ್ಲಿ ಮುಷರಫ್ ಅವರ ವಿರುದ್ಧ ದೋಷಾರೋಪಣೆ ಮಾಡಲಾಯಿತು. 2019ರ ಡಿಸೆಂಬರ್‌ನಲ್ಲಿ ವಿಶೇಷ ನ್ಯಾಯಾಲಯವು ಮುಷರಫ್ ಅವರ ವಿರುದ್ಧದ ದೇಶದ್ರೋಹದ ಪ್ರಕರಣದಲ್ಲಿ ಮರಣದಂಡನೆ ವಿಧಿಸಿತು. 2016ರ ಮಾರ್ಚ್ ತಿಂಗಳಲ್ಲಿ ವೈದ್ಯಕೀಯ ಚಿಕಿತ್ಸೆ ಪಡೆಯಲು ದುಬೈಗೆ ತೆರಳಿದ್ದರು.



# ಮೈಸೂರಲ್ಲಿ ಮತ್ತೆರಡು ಸರ್ಕಾರಿ ಆಸ್ಪತ್ರೆಗಳಲ್ಲಿ ಇಂದಿನಿಂದ ಆರೋಗ್ಯ ಸೇವೆ ಆರಂಭ

● ಕೆಆರ್‌ಎಸ್ ರಸ್ತೆಯಲ್ಲಿರುವ 'ರಾಜಕುಮಾರಿ ಕೃಷ್ಣಾಜಮ್ಮಣ್ಣಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ' ಓಪಿಡಿ ಸೇವೆ
● 'ಟ್ರಾಮಾ ಕೇರ್ ಸೆಂಟರ್'ನಲ್ಲಿ ಶಸ್ತ್ರಚಿಕಿತ್ಸೆ, ಒಳರೋಗಿ ಸೇವೆ



● ಎಂ.ಟಿ.ಯೋಗೇಶ್‌ಕುಮಾರ್

ಮೈಸೂರು,ಫೆ.5– ಮೈಸೂರಿನ ಜನರಿಗೆ ಉತ್ತಮ ಆರೋಗ್ಯ ಸೇವೆ ಒದಗಿಸುವ ನಿಟ್ಟಿನಲ್ಲಿ ಸೋಮವಾರ (ಫೆ.6)ದಿಂದ ಎರಡು ನೂತನ ಆಸ್ಪತ್ರೆಗಳು ಆರೋಗ್ಯ ಸೇವೆ ಆರಂಭಿಸಲಿದ್ದು, ಕೆ.ಆರ್.ಎಸ್ ರಸ್ತೆಯಲ್ಲಿರುವ ರಾಜಕುಮಾರಿ ಕೃಷ್ಣಾಜಮ್ಮಣ್ಣಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಓಪಿಡಿ ಸೇವೆ ಹಾಗೂ ಟ್ರಾಮಾ ಕೇರ್ ಸೆಂಟರ್‌ನಲ್ಲಿ ಆಪರೇಷನ್ ಮತ್ತು ಒಳರೋಗಿ ಸೇವೆ ಆರಂಭಿಸಲಾಗುತ್ತಿದೆ. ಮೈಸೂರಿನ ಕೆ.ಆರ್.ಆಸ್ಪತ್ರೆಯ ದುರಸ್ತಿ ಕಾಮಗಾರಿ ಕೆಲವೇ ಕೆಲವು ದಿನಗಳಲ್ಲಿ ಆರಂಭವಾಗಲಿದ್ದು, ಅದಕ್ಕಾಗಿ ಕೆ.ಆರ್.ಆಸ್ಪತ್ರೆಯ ಕೆಲವು ವಿಭಾಗಗಳ ಮೇಲೆ ಉಂಟಾಗುತ್ತಿರುವ ಒತ್ತಡ ನಿವಾರಿಸಲು ಹಾಗೂ ತಪಾಸಣೆಗೆ ಬರುವ ರೋಗಿಗಳಿಗೆ ಆರೋಗ್ಯ ಸೇವೆ ಒದಗಿಸಲು ▶ 8ನೇ ಪುಟಕ್ಕೆ

### ಹಂತ ಹಂತವಾಗಿ ಸೇವೆ ವಿಸ್ತಾರ



❝ ಸೂಪರ್ ಸ್ಪೆಷಾಲಿಟಿ ಹಾಗೂ ಟ್ರಾಮಾ ಕೇರ್ ಸೆಂಟರ್ ಈ ಎರಡೂ ಹೊಸ ಆಸ್ಪತ್ರೆಗಳಲ್ಲಿ ಹಂತ–ಹಂತವಾಗಿ ಸೇವೆ ವಿಸ್ತರಿಸಲಾಗುವುದು. ಕೆ.ಆರ್.ಆಸ್ಪತ್ರೆ ಕಟ್ಟಡದ ದುರಸ್ತಿ ಕಾಮಗಾರಿ ಆರಂಭವಾಗುತ್ತಿರುವ ಹಿನ್ನೆಲೆಯಲ್ಲಿ ಹೊಸ ಆಸ್ಪತ್ರೆಗಳಲ್ಲಿ ಓಪಿಡಿ, ಓಟಿ, ಒಳರೋಗಿ ಸೇವೆ ಆರಂಭಿಸುತ್ತಿರುವುದು ಉಪಯುಕ್ತವಾಗಿದೆ. ರೋಗಿಗಳಿಗೆ ಆರೋಗ್ಯ ಸೇವೆಯಲ್ಲಿ ಕೊರತೆಯಾಗದಂತೆ ನೋಡಿಕೊಳ್ಳಲು ಕೆ.ಆರ್.ಆಸ್ಪತ್ರೆಯಿಂದ ಸಿಬ್ಬಂದಿಗಳನ್ನು ಡೆಪ್ಯೂಟ್ ಮಾಡಲಾಗಿದೆ. ಹೊಸ ಆಸ್ಪತ್ರೆಗಳಲ್ಲಿ ವೆಂಟಿಲೇಟರ್ ಸೇರಿದಂತೆ ಎಲ್ಲಾ ಅಗತ್ಯ ವ್ಯವಸ್ಥೆಗಳನ್ನು ಮಾಡಿದ್ದೇವೆ. ಇನ್ನೂ ಕೆಲವು ಉಪಕರಣಗಳು ಬರಲಿವೆ. ಈಗಿರುವ ವೈದ್ಯರು ಹಾಗೂ ಸಿಬ್ಬಂದಿಯನ್ನು ಸಹ ನಿಯೋಜಿಸಲಾಗಿದೆ. ಅಲ್ಲದೆ, ಹೊಸ ತಂತ್ರಜ್ಞರು ಮತ್ತು ವೈದ್ಯಾಧಿಕಾರಿಗಳ ನೇಮಕಕ್ಕೆ ಟೆಂಡರ್ ಕರೆಯಲಾಗಿದೆ.
**–ಡಾ.ಕೆ.ಆರ್.ದಾಕ್ಷಾಯಿಣಿ, ಡೀನ್ ಮತ್ತು ನಿರ್ದೇಶಕರು, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ**



## ಇಂದು ಶ್ರೀ ಸಿದ್ಧೇಶ್ವರ ಶ್ರೀಗೆ ನುಡಿ-ನಮನ



ಮೈಸೂರು, ಫೆ.5- ಮೈಸೂರು ವಿಶ್ವವಿದ್ಯಾನಿಲಯದ ಡಾ.ಎಸ್.ರಾಧಾಕೃಷ್ಣನ್ ತತ್ವಶಾಸ್ತ್ರ ಮತ್ತು ಭಾರತೀಯ ಸಂಸ್ಕೃತಿ ಕೇಂದ್ರವು ಫೆ.6ರಂದು ಸಂಜೆ 4.30ಕ್ಕೆ ಶ್ರೀ ಸಿದ್ದೇಶ್ವರ ಸ್ವಾಮಿಗಳವರ ನುಡಿ-ನಮನ ಕಾರ್ಯಕ್ರಮವನ್ನು ಮಾನಸಗಂಗೋತ್ರಿಯಲ್ಲಿರುವ ವಿಜ್ಞಾನ ಭವನದಲ್ಲಿ ಹಮ್ಮಿಕೊಂಡಿದೆ. 'ಗೃಹ ಬಳಕೆಯ ವಸ್ತುಗಳು: ಬದುಕಿಗೊಂದು ಆಧ್ಯಾತ್ಮಿಕ ನೋಟ' ಗ್ರಂಥವನ್ನು ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದಿಂದ ಹೊರತರಲಾಗಿದ್ದು, ಈ ಕೃತಿಯನ್ನು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಬಿಡುಗಡೆ ಮಾಡುವರು. ಮೈಸೂರು ವಿವಿ ಪ್ರಭಾರ ಕುಲಪತಿ ಪ್ರೊ.ಹೆಚ್.ರಾಜಶೇಖರ್ ಅಧ್ಯಕ್ಷತೆ ವಹಿಸುವರು. ಕೃತಿ ಕುರಿತು ಡಾ.ಎಸ್.ರಾಧಾಕೃಷ್ಣನ್ ಕೇಂದ್ರದ ಡಾ.ಸಿ.ಪಿ. ರಾಮಶೇಷ್ ಮಾತನಾಡಲಿದ್ದು, ತುಮಕೂರಿನ ಶ್ರೀ ರಾಮಕೃಷ್ಣ ವಿವೇಕಾನಂದಾಶ್ರಮದ ಅಧ್ಯಕ್ಷ ವೀರೇಶಾನಂದ ಸರಸ್ವತೀ ಸ್ವಾಮೀಜಿ, ಮೈವಿವಿ ವಿಶ್ರಾಂತ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ ಉಪಸ್ಥಿತರಿರುವರು ಎಂದು ಪ್ರಕಟಣೆ ತಿಳಿಸಿದೆ.

**ನಾಳೆ ಶ್ರೀಗಳಿಗೆ ನುಡಿ ನಮನ:** ಮೈಸೂರಿನ ಡಾ.ರಾಜ್‌ಕುಮಾರ್ ರಸ್ತೆಗೆ ಹೊಂದಿಕೊಂಡಂತೆ ಇರುವ ಅಖಿಲ ಭಾರತ ವೀರಶೈವ ಲಿಂಗಾಯತರಿಗೆ ಸೇರಿದ ಸಿ.ಎ. ನಿವೇಶನದಲ್ಲಿ ಫೆ.7ರಂದು ಬೆಳಗ್ಗೆ 11 ಗಂಟೆಗೆ ಸಿದ್ದೇಶ್ವರ ಸ್ವಾಮೀಜಿ ಅವರಿಗೆ ನುಡಿನಮನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ, ವೀರಶೈವ ಲಿಂಗಾಯತ ಸಂಘ-ಸಂಸ್ಥೆಗಳು ಹಾಗೂ ಬಸವ ಬಳಗಗಳ ಒಕ್ಕೂಟದಿಂದ ಫೆ.7ರಂದು ಸಿದ್ದೇಶ್ವರ ಸ್ವಾಮೀಜಿ ಅವರಿಗೆ ನುಡಿನಮನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಹಲ್ಯಾಳದ ಶ್ರೀಗುರುದೇವಾಶ್ರಮದ ಹರ್ಷಾನಂದ ಸ್ವಾಮೀಜಿ ಸಮ್ಮುಖದಲ್ಲಿ ಮಹಾರಾಷ್ಟ್ರದ ಬಲಗಾಂವ ಶ್ರೀಗುರುದೇವಾಶ್ರಮದ ಶ್ರೀ ಅಮೃತಾನಂದ ಸ್ವಾಮೀಜಿ, ರಮಣಶ್ರೀ ಸಮೂಹ ಸಂಸ್ಥೆಗಳ ಅಧ್ಯಕ್ಷ ಎಸ್.ಷಡಕ್ಷರಿ, ಚಿಂತಕ ಕೆ.ಸಿ.ಶಿವಪ್ಪ ನುಡಿನಮನ ಸಲ್ಲಿಸಲಿದ್ದಾರೆ. ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಉಪಾಧ್ಯಕ್ಷ ದಕ್ಷಿಣಮೂರ್ತಿ ಅಧ್ಯಕ್ಷತೆ ವಹಿಸಲಿದ್ದಾರೆ. ಇದೇ ವೇಳೆ ಕಾರ್ಯಕ್ರಮಕ್ಕೆ ಬರುವವರಿಗೆ ಸಿದ್ದೇಶ್ವರ ಸ್ವಾಮೀಜಿ ಅವರು ಬರೆದಿರುವ ಪುಸ್ತಕಗಳನ್ನು ನೀಡಲಾಗುವುದು. ಅಲ್ಲದೇ ಸಿದ್ದೇಶ್ವರ ಸ್ವಾಮೀಜಿ ಭಾವಚಿತ್ರ ಇರುವ ಕ್ಯಾಲೆಂಡರ್ ನೀಡಲಾಗುವುದು ಎಂದರು.



ಮೈಸೂರಿನ ಶ್ರೀ ಮಹಾಗಣಪತಿ ಸೇವಾ ಟ್ರಸ್ಟ್ ವತಿಯಿಂದ ಶ್ರೀ ಮಹಾಗಣಪತಿ ದೇವಸ್ಥಾನ ಮುಖ್ಯ ಪ್ರವೇಶ ದ್ವಾರದ ಸ್ವಾಗತ ಕಮಾನು ನಿರ್ಮಾಣ, ನೆಲಮಾಳಿಗೆ ಹಾಗೂ ಇತರೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಎಲ್.ನಾಗೇಂದ್ರ ಗುದ್ದಲಿಪೂಜೆ ನೆರವೇರಿಸಿದರು. ಈ ಸಂದರ್ಭ ವಾರ್ಡ್ ನಂ.7ರ ಕಾರ್ಪೋರೇಟರ್ ರಮೇಶ್, ದೇವಸ್ಥಾನದ ಅಧ್ಯಕ್ಷ ಪಾಪಣ್ಣ, ಗೌರವಾಧ್ಯಕ್ಷ ಎಂ.ಜಿ.ಚಂದ್ರಶೇಖರ್, ಕಾರ್ಯದರ್ಶಿ ರಾಮಲಿಂಗು, ಖಜಾಂಚಿ ಶ್ರೀನಿವಾಸ್, ಇಂಜಿನಿಯರ್ ರಾಜೇಶ್, ಶ್ರೀಮತಿ ಪುಟ್ಟಮ್ಮ ಹಾಗೂ ಸಮಿತಿ ಸದಸ್ಯರು, ಭಕ್ತಾದಿಗಳು ಉಪಸ್ಥಿತರಿದ್ದರು.

## ಫೆ.21, ಬೃಹತ್ ಉದ್ಯೋಗ ಮೇಳ

ಮೈಸೂರು, ಫೆ.5- ಇದೇ ಫೆ.21ರಂದು ಕರ್ನಾಟಕ ವಸ್ತುಪ್ರದರ್ಶನ ಆವರಣದಲ್ಲಿ ಬೃಹತ್ ಉದ್ಯೋಗ ಮೇಳವನ್ನು ಆಯೋಜಿಸಲಾಗಿದೆ ಎಂದು ಕೃಷ್ಣರಾಜ ಕ್ಷೇತ್ರದ ಶಾಸಕ ಎಸ್.ಎ.ರಾಮದಾಸ್ ತಿಳಿಸಿದರು.



ತಮ್ಮ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಬೃಹತ್ ಉದ್ಯೋಗ ಮೇಳ ಆಯೋಜನೆ ಕುರಿತ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಉದ್ಯೋಗ ಮೇಳದಲ್ಲಿ ವಿವಿಧ ಕ್ಷೇತ್ರಗಳ ಉದ್ಯೋಗ ಅವಕಾಶಗಳ ಬಗ್ಗೆ ಸ್ಟಾಲ್‌ಗಳನ್ನು ನಿರ್ಮಿಸಿ ಮಾಹಿತಿ ನೀಡಲಾಗುವುದು. ಕೌಶಲ್ಯ ಮಾಹಿತಿ ಮತ್ತು ಪ್ಲೇಸ್‌ಮೆಂಟ್ ಮೇಳದಲ್ಲಿ ಎಸ್‌ಎಸ್‌ಎಲ್‌ಸಿ ಉತ್ತೀರ್ಣ, ಅನುತ್ತೀರ್ಣರಾದವರಿಂದ ಹಿಡಿದು ಉನ್ನತ ವ್ಯಾಸಂಗ ಮಾಡಿದವರು ಹಾಗೂ ಇಂಜಿನಿಯರಿಂಗ್ ವ್ಯಾಸಂಗ ಮಾಡಿರುವವರು ಭಾಗವಹಿಸಬಹುದಾಗಿದೆ ಎಂದರು.

ಕೌಶಲ್ಯಾಭಿವೃದ್ಧಿ ಇಲಾಖೆ ವತಿಯಿಂದ ವೆಬ್‌ಸೈಟ್ ಸೃಜನೆ ಮಾಡಿದ್ದು, ವೆಬ್‌ಸೈಟ್ ಮೂಲಕ ಆಸಕ್ತ ಅಭ್ಯರ್ಥಿಗಳು ತಮ್ಮ ಕೌಶಲ್ಯಕ್ಕೆ ಅನುಗುಣವಾಗಿ ಉದ್ಯೋಗಗಳಿಗೆ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಚೀನಾ ದೇಶದಲ್ಲಿ ಇಂಗ್ಲಿಷ್ ಶಿಕ್ಷಕರು ಹಾಗೂ ಯೋಗ ತರಬೇತಿದಾರರಿಗೆ ಹೆಚ್ಚಿನ ಬೇಡಿಕೆಯಿದೆ ಎಂದರು. ಉನ್ನತ ವಿದ್ಯಾಭ್ಯಾಸ ಮತ್ತು ವಿದೇಶಗಳಿಗೆ ಹೋಗುವವರಿಗೆ ಕೇಂದ್ರ ಸರ್ಕಾರದ ವತಿಯಿಂದ ತರಬೇತಿ ಮತ್ತು ಸೌಲಭ್ಯ ನೀಡಲಾಗುವುದು. ಈ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ಇಲ್ಲ. ವಿದ್ಯಾರ್ಥಿಗಳಿಗೆ ಕೇಂದ್ರ ಸರ್ಕಾರದ ವತಿಯಿಂದಲೇ ವಿದೇಶಕ್ಕೆ ತೆರಳಲು ವೀಸಾ ಸೌಲಭ್ಯ ಮಾಡಿಸಿಕೊಡಲಾಗುತ್ತದೆ ಎಂದು ಮಾಹಿತಿ ನೀಡಿದರು. ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ 4470 ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿದ್ದು, ಅವರ ಪೋಷಕರನ್ನು ಕರೆದು ಸಭೆ ನಡೆಸಲಾಗಿದೆ. ಈ ಬಾರಿ ಶೇ.100ರಷ್ಟು ಫಲಿತಾಂಶ ಬರುವ ಗುರಿ ಹೊಂದಿದ್ದೇವೆ ಎಂದರು. ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಬ್ಯಾಂಕ್‌ನ ಅಧಿಕಾರಿಗಳು ಸಭೆಯಲ್ಲಿದ್ದರು.



ಮೈಸೂರು ಕೋ-ಆಪರೇಟಿವ್ ಬ್ಯಾಂಕಿನ ನೂತನ ಉಪಾಧ್ಯಕ್ಷರೂ ಆದ ಬಿಜೆಪಿ ಮುಖಂಡ ಹೆಚ್.ಹರೀಶ್‌ಕುಮಾರ್ ಅವರನ್ನು ಸನ್ಮಾನಿಸಲಾಯಿತು. ಚಾಮರಾಜ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಕೆ.ಸೋಮಶೇಖರರಾಜು, ಪಾಲಿಕೆ ಸದಸ್ಯ ಚಿಕ್ಕವೆಂಕಟು, ನಿರ್ದೇಶಕರಾದ ಪಡುವಾರಹಳ್ಳಿ ಎಂ.ರಾಮಕೃಷ್ಣ, ದಿ ಸಿಟಿ ಕೋ ಆಪರೇಟಿವ್ ಬ್ಯಾಂಕ್ ಮಾಜಿ ಅಧ್ಯಕ್ಷ ಎಸ್.ಬಿ.ಶಿವು, ನಿರ್ದೇಶಕರಾದ ಕುರುಬಾರಹಳ್ಳಿ ಪ್ರಕಾಶ್, ಚಲಪತಿ, ಡಿ.ಎಸ್.ಸಿಂಧೆ ಎಸ್.ಎನ್. ಪ್ರಶಾಂತ್, ಆಶ್ರಯ ಸಮಿತಿ ಸದಸ್ಯ ಅನುಜ್, ಪಂಕಜ್, ಸುರೇಂದ್ರಕುಮಾರ್ ಇದ್ದರು.



ಮೈಸೂರು ನರಸಿಂಹರಾಜ ಕ್ಷೇತ್ರದ 15ನೇ ವಾರ್ಡಿನಲ್ಲಿ ಬಿಜೆಪಿ ವಿಜಯ್ ಸಂಕಲ್ಪ ಅಭಿಯಾನ ಹಾಗೂ ಸದಸ್ಯತ್ವ ನೋಂದಣಿ ನಡೆಸಲಾಯಿತು. ಈ ವೇಳೆ ಕ್ಷೇತ್ರದ ಮುಖಂಡ ಸಂದೇಶ್ ಸ್ವಾಮಿ, ವಾರ್ಡ್ ಅಧ್ಯಕ್ಷ ನಂಜುಂಡಸ್ವಾಮಿ, ಮಾಜಿ ಅಧ್ಯಕ್ಷ ಸು.ಮುರುಳಿ, ಪ್ರಧಾನ ಕಾರ್ಯದರ್ಶಿ ವೇಲು, ಎಸ್‌ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ವಿನೋದ್‌ಕುಮಾರ್, ಸತೀಶ್, ಸಂತು, ಕುಮಾರ್ ಇನ್ನಿತರರಿದ್ದರು.



ಮೈಸೂರಿನ ವಾರ್ಡ್ ನಂ.9ರಲ್ಲಿ ಸಮೀ ಅಜ್ಜು ಬ್ರದರ್ಸ್ ನೇತೃತ್ವದಲ್ಲಿ ಡಾ.ಅಗರ್‌ವಾಲ್ ಕಣ್ಣಿನ ಆಸ್ಪತ್ರೆ ವತಿಯಿಂದ ನಾಯ್ಡುನಗರದ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಉಚಿತ ಕಣ್ಣಿನ ತಪಾಸಣೆ ಶಿಬಿರ ನಡೆಯಿತು. ಈ ವೇಳೆ ಉಚಿತ ಕನ್ನಡಕವನ್ನು ವಿತರಿಸಿದರು. ಈ ಸಂದರ್ಭ ನಾಗಣ್ಣ, ಮಹದೇವಣ್ಣ, ಸಿದ್ದಿಕ್ ಹಾಗೂ ಸ್ನೇಹಿತರು ಉಪಸ್ಥಿತರಿದ್ದರು.

# ಫೆ.10ರಂದು ಮಹತ್ವದ ಸ್ವಚ್ಛ ಮಂದಿರ ಅಭಿಯಾನ ಜಾರಿ

- ಗಂಜಾಂನ ನಿಮಿಷಾಂಬ ದೇವಸ್ಥಾನದಲ್ಲಿ ಯೋಜನೆಗೆ ಚಾಲನೆ
- ದೇವಾಲಯಗಳಲ್ಲಿ ನಿರ್ಮಲ ವಾತಾವರಣ ಕಲ್ಪಿಸುವ ಯೋಜನೆ
- ಪ್ರಾರಂಭಿಕವಾಗಿ ರಾಜ್ಯದಲ್ಲಿ 12 ದೇವಾಲಯಗಳಲ್ಲಿ ಯೋಜನೆ ಅನುಷ್ಠಾನ

ಬೆಂಗಳೂರು, ಫೆ.5(ಕೆಎಂಶಿ)- ಭಕ್ತಾದಿಗಳಿಗೆ ದೇವಾಲಯಗಳಲ್ಲಿ ನೈರ್ಮಲ್ಯದ ವಾತಾವರಣ ಮತ್ತು ಸ್ವಚ್ಛ ಪರಿಸರವನ್ನು ನೀಡುವ ಉದ್ದೇಶವನ್ನು ಹೊಂದಿರುವ ರಾಜ್ಯ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿ ಇಲಾಖೆಯ ಮಹತ್ವಾಕಾಂಕ್ಷಿ ಯೋಜನೆಯಾದ "ಸ್ವಚ್ಛ ಮಂದಿರ ಅಭಿಯಾನ"ಕ್ಕೆ ದಿನಗಣನೆ ಆರಂಭವಾಗಿದೆ.

ಮುಜರಾಯಿ, ಹಜ್ ಮತ್ತು ವಕ್ಫ್ ಸಚಿವೆ ಶ್ರೀಮತಿ ಶಶಿಕಲಾ ಜೊಲ್ಲೆ ಅವರ ಆಶಯದ ಯೋಜನೆ ಚಾಲನೆಗೆ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದ್ದು, ಫೆಬ್ರವರಿ 10ರಂದು ನಿಮಿಷಾಂಭ ದೇವಸ್ಥಾನದಲ್ಲಿ ಉದ್ಘಾಟನೆಗೊಳ್ಳಲಿದೆ ಎಂದು ರಾಜ್ಯ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿ ಇಲಾಖೆ ಆಯುಕ್ತರಾದ ಶ್ರೀಮತಿ ರೋಹಿಣಿ ಸಿಂಧೂರಿ ತಿಳಿಸಿದ್ದಾರೆ.

ಈ ಬಗ್ಗೆ ಮಾಧ್ಯಮ ಪ್ರಕಟಣೆಯನ್ನು ನೀಡಿರುವ ಅವರು, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿ ಇಲಾಖೆಯು ತನ್ನ ವ್ಯಾಪ್ತಿಯಲ್ಲಿನ ದೇವಸ್ಥಾನಗಳಲ್ಲಿ ನಿರಂತರವಾಗಿ ಹೆಚ್ಚುತ್ತಿರುವ ಘನ ತ್ಯಾಜ್ಯ ನಿರ್ವಹಣೆಯ ಸಮಸ್ಯೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಹೊಸ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ. ಸಚಿವೆ ಶಶಿಕಲಾ ಜೊಲ್ಲೆ ಅವರು ದೇವಸ್ಥಾನಗಳಲ್ಲಿ ಸ್ವಚ್ಛ ಪರಿಸರವಿಲ್ಲದೆ ಭಕ್ತಾದಿಗಳು ಪಡುತ್ತಿರುವ ತೊಂದರೆಯನ್ನು ನಿವಾರಿಸುವ ನಿಟ್ಟಿನಲ್ಲಿ ಈ ಯೋಜನೆಯನ್ನು ಪ್ರಾರಂಭಿಸಲು ಸೂಚನೆ ನೀಡಿದ್ದರು. ಈ ಹಿನ್ನೆಲೆಯಲ್ಲಿ ಮೊದಲ ಹಂತದಲ್ಲಿ ಮುಜರಾಯಿ ಇಲಾಖೆಯ ವ್ಯಾಪ್ತಿಯಲ್ಲಿನ ರಾಜ್ಯದ ಪ್ರಮುಖ 12 ದೇವಾಲಯಗಳಲ್ಲಿ ಸಮಗ್ರ ತ್ಯಾಜ್ಯ ನಿರ್ವಹಣೆಯ ಸ್ವಚ್ಛ ಮಂದಿರ ಅಭಿಯಾನದ ಅಡಿಯಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದು, ಫೆ.10ರಂದು ಶಶಿಕಲಾ ಜೊಲ್ಲೆ, ಮಂಡ್ಯ ಜಿಲ್ಲೆಯ ಶ್ರೀರಂಗ ಪಟ್ಟಣದ ನಿಮಿಷಾಂಬ ದೇವಸ್ಥಾನದಲ್ಲಿ ತ್ಯಾಜ್ಯ ನಿರ್ವಹಣೆ ಘಟಕವನ್ನು ಉದ್ಘಾಟಿಸಿ ನಂತರ ವೀಡಿಯೋ ಕಾನ್ಫರೆನ್ಸ್ ಮೂಲಕ ಉಳಿದ 11 ದೇವಸ್ಥಾನಗಳ ಘಟಕಗಳಿಗೆ ಚಾಲನೆ ನೀಡಲಿದ್ದಾರೆ ಎಂದು ತಿಳಿಸಿದ್ದಾರೆ.




ಪ್ರಧಾನಿ ನರೇಂದ್ರ ಮೋದಿ ಅವರ ಸ್ವಚ್ಛ ಮಂದಿರ ಪರಿಕಲ್ಪನೆಯನ್ನು ರಾಜ್ಯದಲ್ಲಿ ಅಳವಡಿಸಿಕೊಳ್ಳಬೇಕು ಎನ್ನುವ ಉದ್ದೇಶದಿಂದ "ಸ್ವಚ್ಛ ಮಂದಿರ ಅಭಿಯಾನ" ಪ್ರಾರಂಭಿಸಲಾಗಿದೆ. ಮೊದಲ ಹಂತದಲ್ಲಿ 12 ದೇವಸ್ಥಾನಗಳಲ್ಲಿ ತ್ಯಾಜ್ಯ ನಿರ್ವಹಣಾ ಘಟಕಗಳನ್ನು ಪ್ರಾರಂಭಿಸಲಾಗಿದ್ದು, ಮುಂದಿನ ದಿನಗಳಲ್ಲಿ ಇನ್ನು ಹೆಚ್ಚಿನ ದೇವಸ್ಥಾನಗಳಲ್ಲಿ ಅಳವಡಿಸಲಾಗುವುದು. ಈ ಸೌಲಭ್ಯದಿಂದಾಗಿ ಪ್ರತಿದಿನ ಈ ದೇವಸ್ಥಾನಗಳಲ್ಲಿ ಉತ್ಪತ್ತಿಯಾಗುವ ಸುಮಾರು 3500 ರಿಂದ 12 ಸಾವಿರ ಕೆಜಿಗಳಷ್ಟು ತ್ಯಾಜ್ಯವನ್ನು ಸಮರ್ಪಕವಾಗಿ ನಿರ್ವಹಿಸಲು ಸಾಧ್ಯವಾಗಲಿದೆ. ಭಕ್ತಾದಿಗಳಿಗೆ ಸ್ವಚ್ಛ, ಸುಂದರ ಹಾಗೂ ನೈರ್ಮಲ್ಯದ ವಾತಾವರಣ ಒದಗಿಸುವುದು ನಮ್ಮ ಪ್ರಮುಖ ಉದ್ದೇಶವಾಗಿದೆ.

> "ಸ್ವಚ್ಛ ಮಂದಿರ ಅಭಿಯಾನದ ಮೂಲಕ ದೇವಸ್ಥಾನಗಳಲ್ಲಿ ಹಾಗೂ ದೇವಸ್ಥಾನದ ಆವರಣದಲ್ಲಿ ಉತ್ಪತ್ತಿಯಾಗುವ ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆ ಸಮಸ್ಯೆಗಳಿಗೆ ಸಂಬಂಧಿಸಿದಂತಹ ಸವಾಲುಗಳಿಗೆ ವೈಜ್ಞಾನಿಕ ರೀತಿಯಲ್ಲಿ ಪರಿಹಾರಗಳನ್ನು ಒದಗಿಸಲಾಗುವುದು. ತ್ಯಾಜ್ಯ ಉತ್ಪಾದನೆಯನ್ನು ಕಡಿಮೆ ಮಾಡಲು ವ್ಯವಸ್ಥಿತ ಕ್ರಮಗಳನ್ನು ಕೈಗೊಳ್ಳುವುದು. ದೇವಾಲಯಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ಸಂಗ್ರಹ ಸಾಗಿಸುವುದು, ಸಂಸ್ಕರಿಸುವುದು ಮತ್ತು ವಿಲೇವಾರಿ ಮಾಡಲು ಅಗತ್ಯವಾದ ವ್ಯವಸ್ಥೆಗಳೊಂದಿಗೆ ಮೂಲದಲ್ಲಿ ತ್ಯಾಜ್ಯವನ್ನು ಪ್ರತ್ಯೇಕಿಸುವುದು. ತ್ಯಾಜ್ಯವನ್ನು ಜವಾಬ್ದಾರಿಯುತವಾಗಿ ನಿರ್ವಹಿಸಲು ಸೌಲಭ್ಯಗಳನ್ನು ಕಲ್ಪಿಸುವ ಮೂಲಕ ದೇವಸ್ಥಾನವನ್ನು ಸುಸ್ಥಿರ ಸಂಸ್ಥೆ ಮತ್ತು ಶೂನ್ಯ ತ್ಯಾಜ್ಯ ಆವರಣವನ್ನಾಗಿ ಮಾಡುವ ಗುರಿಯನ್ನು ಈ ಯೋಜನೆ ಹೊಂದಿದೆ.
>
> -ರೋಹಿಣಿ ಸಿಂಧೂರಿ.

ಮೊದಲ ಹಂತದಲ್ಲಿ ಶ್ರೀ ನಿಮಿಷಾಂಭ ದೇವಾಲಯ, ಗಂಜಾಂ, ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ, ಶ್ರೀ ಬನಶಂಕರಿ ದೇವಾಲಯ, ಕರಿಯಪ್ಪ ರಸ್ತೆ, ಬೆಂಗಳೂರು ನಗರ ಜಿಲ್ಲೆ, ಶ್ರೀ ಘಾಟಿ ಸುಬ್ರಹ್ಮಣ್ಯ ಸ್ವಾಮಿ ದೇವಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಶ್ರೀ ರೇವಣ ಸಿದ್ದೇಶ್ವರ ದೇವಾಲಯ, ರಾಮ ನಗರ ತಾಲೂಕು, ರಾಮನಗರ ಜಿಲ್ಲೆ, ಶ್ರೀ ಕಬ್ಬಾಳಮ್ಮ ದೇವಾಲಯ, ಕನಕಪುರ ತಾಲೂಕು, ರಾಮನಗರ ಜಿಲ್ಲೆ, ಶ್ರೀ ಕೆಂಗಲ್ ಆಂಜನೇಯಸ್ವಾಮಿ ದೇವಾಲಯ, ರಾಮನಗರ ಜಿಲ್ಲೆ, ಶ್ರೀ ರಂಗನಾಥಸ್ವಾಮಿ ದೇವಾಲಯ, ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ, ಶ್ರೀ ಚೆನ್ನಕೇಶವಸ್ವಾಮಿ ದೇವಾಲಯ, ಬೇಲೂರು ತಾಲೂಕು, ಹಾಸನ ಜಿಲ್ಲೆ, ಶ್ರೀ ದುರ್ಗಾಪರಮೇಶ್ವರಿ ದೇವಾಲಯ, ಮಂದಾರ್ತಿ, ದಕ್ಷಿಣ ಕನ್ನಡ ಜಿಲ್ಲೆ, ಶ್ರೀ ಗುರು ತಿಪ್ಪೇರುದ್ರ ಸ್ವಾಮಿ ದೇವಾಲಯ, ನಾಯಕನಹಟ್ಟಿ, ಚಳ್ಳಕೆರೆ, ಚಿತ್ರದುರ್ಗ ಜಿಲ್ಲೆ, ಶ್ರೀ ಲಕ್ಷ್ಮಿನರಸಿಂಹಸ್ವಾಮಿ ದೇವಾಲಯ, ದೇವರಾಯನ ದುರ್ಗ, ತುಮಕೂರು ಜಿಲ್ಲೆ, ಶ್ರೀ ಪೊಳಲಿ ರಾಜರಾಜೇಶ್ವರಿ ದೇವಾಲಯ, ದಕ್ಷಿಣ ಕನ್ನಡ ಜಿಲ್ಲೆ.

## ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಬಿಜೆಪಿ ಸಂಘಟನೆ ಗಟ್ಟಿಯಾಗಿದೆ

### ವಿಜಯ ಸಂಕಲ್ಪ ಅಭಿಯಾನದಲ್ಲಿ ಅರುಣ್‌ಕುಮಾರ್‌ಗೌಡ ವಿಶ್ವಾಸ

ಮೈಸೂರು,ಫೆ.5(ಎಸ್‌ಬಿಡಿ)- ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಪ್ರತಿ ಬೂತ್ ಮಟ್ಟದಲ್ಲೂ ಬಿಜೆಪಿ ಗಟ್ಟಿಯಾಗಿದೆ ಎಂದು ಯುವ ಮುಖಂಡ ಎನ್. ಅರುಣ್‌ಕುಮಾರ್‌ಗೌಡ ತಿಳಿಸಿದರು.



ಕ್ಷೇತ್ರದ ಶಾದನಹಳ್ಳಿ ಗ್ರಾಮದ ಚಾಮುಂಡೇಶ್ವರಿ ರೈಲ್ವೆ ಬಡಾವಣೆಯಲ್ಲಿ ನಡೆದ ವಿಜಯ ಸಂಕಲ್ಪ ಅಭಿಯಾನದಲ್ಲಿ ಮಾತನಾಡಿದ ಅವರು, ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಬಿಜೆಪಿ ಸಂಘಟನೆ ಬಲಿಷ್ಠವಾಗಿದೆ. ಪ್ರತಿಯೊಂದು ಬೂತ್ ಮಟ್ಟದಲ್ಲೂ ಕಾರ್ಯಕರ್ತರನ್ನು ಸಂಘಟಿಸುವ ಕೆಲಸ ಮಾಡಿದ್ದೇವೆ. ಮತದಾರರಲ್ಲೂ ಬಿಜೆಪಿ ಮೇಲಿನ ಒಲವು ಮತ್ತಷ್ಟು ಗಟ್ಟಿಯಾಗಿದೆ ಎಂದು ಹೇಳಿದರು.

ರಾಜಕೀಯ ವ್ಯತ್ಯಾಸಗಳಿಂದಾಗಿ ಕಳೆದೆರಡು ಚುನಾವಣೆಗಳಲ್ಲಿ ಬಿಜೆಪಿಗೆ ಗೆಲುವಾಗಲಿಲ್ಲ. ಆದರೆ ಹಲವು ಚುನಾವಣೆಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಉತ್ತಮ ಸ್ಪರ್ಧೆ ನೀಡಿ ಎರಡನೇ ಸ್ಥಾನ ಪಡೆದಿದ್ದಾರೆ. ಆದರೆ ಪ್ರಸ್ತುತ ಸ್ಥಿತಿಯೇ ಬೇರೆ. ಪಕ್ಷದ ಮುಖಂಡರು, ಕಾರ್ಯಕರ್ತರ ನಿರಂತರ ಪರಿಶ್ರಮದ ಪರಿಣಾಮ ಸಂಘಟನೆ ಉತ್ತಮವಾಗಿದೆ. ಮುಂದಿನ ಚುನಾವಣೆಯಲ್ಲಿ ಯಾವುದೇ ರೀತಿಯ ಒಳ ಒಪ್ಪಂದ ಅಥವಾ ಮೈತ್ರಿಗೆ ಅವಕಾಶವಿಲ್ಲ ಎಂದು ಪಕ್ಷದ ರಾಷ್ಟ್ರೀಯ ನಾಯಕರೂ ಹೇಳಿರುವುದರಿಂದ ಯಾವುದೇ ಗೊಂದಲಕ್ಕೆ ಅವಕಾಶವಿಲ್ಲ ಎಂದರು.

ಪ್ರತಿಪಕ್ಷಗಳ ನಾಯಕರು ಏನೆಲ್ಲಾ ಟೀಕೆ ಮಾಡಿದರೂ ಬಿಜೆಪಿ ಆಡಳಿತವನ್ನು ಜನ ಮೆಚ್ಚಿದ್ದಾರೆ. ಎಲ್ಲಾ ಕಾಲದಲ್ಲೂ ಸಹಜವಾದ ಬೆಲೆ ಏರಿಕೆ ವಿಚಾರವನ್ನು ಪದೇ ಪದೆ ಪ್ರಸ್ತಾಪಿಸಿ ಜನರ ಮನಸೆಳೆಯುವ ಪ್ರಯತ್ನ ಫಲಿಸುವುದಿಲ್ಲ. ರಾಜ್ಯ, ದೇಶದ ಆಡಳಿತವನ್ನಷ್ಟೇ ಅಲ್ಲದೆ ಜಾಗತಿಕ ಬೆಳವಣಿಗೆ ಬಗ್ಗೆಯೂ ಗಮನಹರಿಸುವ ಜನರಿಗೆ ವಾಸ್ತವ ತಿಳಿದಿದೆ. ಹಾಗಾಗಿ ಮತ್ತೆ ಬಿಜೆಪಿಯನ್ನು ಬೆಂಬಲಿಸಲಿದ್ದಾರೆ. ಚಾಮುಂಡೇಶ್ವರಿ ಕ್ಷೇತ್ರದಲ್ಲೂ ಈ ಬಾರಿ ಬಿಜೆಪಿಗೆ ಅವಕಾಶ ನೀಡಲು ನಿರ್ಣಯಿಸಿದ್ದಾರೆ. ಈ ಸಂದರ್ಭದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜನಪರ ಕಾರ್ಯಕ್ರಮಗಳನ್ನು ಮನೆ ಮನೆಗೆ ತಲುಪಿಸುವ ನಿಟ್ಟಿನಲ್ಲಿ ನಾವೆಲ್ಲಾ ಶ್ರಮಿಸಬೇಕಿದೆ ಎಂದು ಕಾರ್ಯಕರ್ತರಲ್ಲಿ ಮನವಿ ಮಾಡಿದರು. ಈ ವೇಳೆ ಬಿಜೆಪಿ ಮುಖಂಡರಾದ ಎಸ್.ಡಿ.ಮಹೇಂದ್ರ, ಎಸ್.ಆರ್.ಗೋಪಾಲ್‌ರಾವ್, ಜಗದೀಶ್‌ಗೌಡ, ಪೈಲ್ವಾನ್ ರವಿ, ಲೋಹಿತ್ ಕಾಮನಕೆರೆಹುಂಡಿ, ಸಿದ್ದಲಿಂಗಪುರ ರಮೇಶ್, ಕೃಷ್ಣ ಕಳಸ್ತವಾಡಿ, ಸಿಂಗೇಗೌಡ, ಪುಟ್ಟಸ್ವಾಮಿಗೌಡ, ಮಂಜು, ಬೂತ್ ಮಟ್ಟದ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

## ಇಂದು ಶಿವಯೋಗಿ ಸಿದ್ದರಾಮೇಶ್ವರ ಜಯಂತಿ

ಮೈಸೂರು,ಫೆ.5-ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಫೆ.6ರಂದು ಬೆಳಗ್ಗೆ 11.30ಕ್ಕೆ ಕರ್ನಾಟಕ ಕಲಾಮಂದಿರದಲ್ಲಿ ಶ್ರೀ ಶಿವಯೋಗಿ ಸಿದ್ದರಾಮೇಶ್ವರ ಜಯಂತಿಯನ್ನು ಹಮ್ಮಿಕೊಳ್ಳಲಾಗಿದೆ. ಭೋವಿ ಗುರುಪೀಠ ಚಿತ್ರದುರ್ಗ ಹಾಗೂ ಬಾಗಲಕೋಟೆಯ ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮಿಗಳ ದಿವ್ಯ ಸಾನ್ನಿಧ್ಯದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಕಾರ್ಯಕ್ರಮ ಉದ್ಘಾಟಿಸುವರು.

ಅಧ್ಯಕ್ಷತೆಯನ್ನು ಶಾಸಕ ಎಲ್.ನಾಗೇಂದ್ರ ವಹಿಸುವರು. ಮುಖ್ಯ ಅತಿಥಿಗಳಾಗಿ ಮೇಯರ್ ಶಿವಕುಮಾರ್, ಸಂಸದರಾದ ಪ್ರತಾಪ್ ಸಿಂಹ, ಶ್ರೀನಿವಾಸಪ್ರಸಾದ್ ಹಾಗೂ ಸುಮಲತಾ ಅಂಬರೀಶ್ ಭಾಗವಹಿಸುವರು. ಅತಿಥಿಗಳಾಗಿ ಶಾಸಕರಾದ ತನ್ವೀರ್ ಸೇಠ್, ಸಾರಾಮಹೇಶ್, ಜಿ.ಟಿ.ದೇವೇಗೌಡ, ಕೆ.ಮಹದೇವ್, ಹರ್ಷವರ್ಧನ್, ಅಶ್ವಿನ್ ಕುಮಾರ್, ಹೆಚ್.ಪಿ.ಮಂಜುನಾಥ್, ಎಸ್.ಎ.ರಾಮದಾಸ್, ಡಾ.ಯತೀಂದ್ರ, ಅನಿಲ್‌ಕುಮಾರ್ ಹಾಗೂ ವಿಧಾನಪರಿಷತ್ತಿನ ಶಾಸಕರಾದ ಡಾ.ಡಿ.ತಿಮ್ಮಯ್ಯ, ಮರಿತಿಬ್ಬೇಗೌಡ, ಸಿ.ಎನ್. ಮಂಜೇಗೌಡ, ಎಚ್.ವಿಶ್ವನಾಥ್ ಹಾಗೂ ಮಧು ಜಿ.ಮಾದೇಗೌಡ ಒಳಗೊಂಡಂತೆ ವಿವಿಧ ನಿಗಮ ಮಂಡಳಿಗಳ ಅಧ್ಯಕ್ಷರು ಉಪಸ್ಥಿತರಿರುವರು ಎಂದು ಪ್ರಕಟಣೆ ತಿಳಿಸಿದೆ.



ವಿಶ್ವ ಕ್ಯಾನ್ಸರ್ ದಿನದ ಅಂಗವಾಗಿ ಲೇಡಿಸ್ ಸರ್ಕಲ್ ಇಂಡಿಯಾದ ವಲಯ-13ರ ವತಿಯಿಂದ ಮೈಸೂರಿನ ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಸಹಯೋಗದೊಂದಿಗೆ ಕ್ಯಾನ್ಸರ್ ರೋಗಿಗಳಿಗೆ ವಿಗ್‌ಗಳನ್ನು ದಾನವಾಗಿ ವಿತರಿಸಲಾಯಿತು. ವಲಯ-13ರ ಅಧ್ಯಕ್ಷೆ ನಂದಿತಾ, ಅನುಷಾ, ಪ್ರಿಯಾಂಕ, ವಲಯ ಪ್ರಾಜೆಕ್ಟ್ ಕನ್ವಿನರ್‌ಗಳು, ಪದಾಧಿಕಾರಿಗಳು ಚಿತ್ರದಲ್ಲಿದ್ದಾರೆ.





ಭಾನುವಾರ ಹುಟ್ಟುಹಬ್ಬ ಆಚರಿಸಿಕೊಂಡ ಯುವ ಮುಖಂಡ ಎಂ.ಆರ್.ರವಿಕುಮಾರ್ (ಡೆಲ್ಲಿ) ಅವರ ಹುಟ್ಟುಹಬ್ಬವನ್ನು ರವಿ ಸ್ನೇಹ ಬಳಗ ಟ್ರಸ್ಟ್ ವತಿಯಿಂದ ವಿವಿಧ ಸೇವಾ ಕಾರ್ಯಗಳ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಯಿತು. 1ನೇ ತರಗತಿಯಿಂದ 7ನೇ ತರಗತಿಯ ಬಡ ವಿದ್ಯಾರ್ಥಿಗಳಿಗೆ ಉಚಿತವಾಗಿ ಪಠ್ಯಪುಸ್ತಕ ನೀಡಲಾಯಿತು. ನಂತರ ವೃದ್ಧರಿಗೆ ಊರುಗೋಲುಗಳನ್ನು ವಿತರಿಸಲಾಯಿತು. ಮಹಿಳೆಯರಿಗೆ ಹೊಲಿಗೆ ಯಂತ್ರ ನೀಡಲಾಯಿತು. ಈ ಸಂದರ್ಭದಲ್ಲಿ ಚಾಮರಾಜ ಕ್ಷೇತ್ರದ ಕಾಂಗ್ರೆಸ್ ಮುಖಂಡರಾದ ಕೆ.ಹರೀಶ್‌ಗೌಡ, ಮೂರ್ತಿ ಯೋಗೇಶ್, ಮಂಜು, ಮನು, ಚೇತನ್, ಪ್ರಿನ್ಸಿಪಾಲ್ ಗೋಪಾಲ್ ಇನ್ನಿತರರು ಉಪಸ್ಥಿತರಿದ್ದರು.

## ವಿವಿಧ ಜಯಂತಿ ಆಚರಣೆ: ನಾಳೆ ಪೂರ್ವಭಾವಿ ಸಭೆ

ಮೈಸೂರು,ಫೆ.5-ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಫೆ.7ರಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬೆಳಗ್ಗೆ 11 ಗಂಟೆಗೆ ಸಂತ ಸೇವಾಲಾಲ್ ಜಯಂತಿ, ಬೆಳಗ್ಗೆ 11.20ಕ್ಕೆ ಛತ್ರಪತಿ ಶಿವಾಜಿ ಜಯಂತಿ ಹಾಗೂ ಬೆಳಗ್ಗೆ 11.40ಕ್ಕೆ ಸಂತ ಕವಿ ಸರ್ವಜ್ಞ ಜಯಂತಿ ಆಚರಣೆಗಳ ಕುರಿತು ಪೂರ್ವಭಾವಿ ಸಭೆಯನ್ನು ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎಂ.ಡಿ. ಸುದರ್ಶನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮೈಸೂರು ಹಾಗೂ ಸುತ್ತಮುತ್ತ ಇಂದು...



### ಇಂದಿನ ಪಂಚಾಂಗ

6.2.2023 ಸೋಮವಾರ, ಮಳೆ ನಕ್ಷತ್ರ: ಧನಿಷ್ಠ, 6.02.2023ರಿಂದ 18.02.2023 ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಹೇಮಂತ ಋತು, ಮಾಘ ಮಾಸ, ಶುಕ್ಲ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಆಶ್ಲೇಷ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

### ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ: ಆಡಿ. ಆನಂದಕುಮಾರ್, 6.15 ಗೀತಾರಾಧನ, 6.35 ಹಾಗೂ ಸಂಜೆ 5ಕ್ಕೆ: ನೃತ್ಯ ಶಿಲ್ಪ ಯಾತ್ರೆ: ಲೇಖನ ಮತ್ತು ಪ್ರಸ್ತುತಿ-ಡಾ.ಬಿ.ಎನ್.ಮನೋರಮ, 6.40 ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ- ನಿತಿನ್ ರಾಜಾರಾಂ ಶಾಸ್ತ್ರಿ, ಅಂಬಯ್ಯನುಲಿ, ವ್ಯಾಖ್ಯಾನ- ಡಾ.ಹೆಚ್.ಎನ್. ಮಂಜುರಾಜ್, 7.25 ಭಾವಗೀತೆ, 8.30 'ಬದುಕು ಅಕ್ಷಯವಾಗಲಿ' ಪ್ರಾಯೋಜಿತ ಕಾರ್ಯಕ್ರಮ, 9.00 ನೆನಪಿನಂಗಳ: ಹಿರಿಯ ವಿಜ್ಞಾನ ಬರಹಗಾರರಾದ ಜೆ.ಆರ್.ಲಕ್ಷ್ಮಣರಾವ್ ಅವರೊಂದಿಗೆ ಡಾ. ಹಾ.ಮಾ.ನಾಯಕ್ ಅವರು ನಡೆಸಿದ್ದ ಸಂವಾದ, 10.00 ಲಯ ಸಂಭ್ರಮ: ಮೃದಂಗ ಹಾಗೂ ಮದ್ದಳೆಯ ನಡುವಿನ ವ್ಯತ್ಯಸ ಹಾಗೂ ಮದ್ದಳೆಯ ಇತಿಹಾಸ ತಿಳಿಸಿಕೊಡುತ್ತಾರೆ ಅನಂತ ಪದ್ಮನಾಭ ಪಾಠಕ್, ಪ್ರಸ್ತುತಿ- ಹೆಚ್.ಎಲ್.ಶಿವಶಂಕರ ಸ್ವಾಮಿ. **ಮಧ್ಯಾಹ್ನ:** 12.30 ದೇವರನಾಮ- ವೃಂದಗಾನ, 1.20 ಭಾವಗೀತೆ, 3.00 ಎನ್.ವಿ.ಸತ್ಯನಾರಾಯಣ-ವೇಣುವಾದನ. **ಸಂಜೆ:** 4.00 ಮಹಿಳಾರಂಗ: ಮಕ್ಕಳಲ್ಲಿ ಕುತೂಹಲ ಪ್ರವೃತ್ತಿ ಕುರಿತು ಮಾತನಾಡುತ್ತಾರೆ ಎನ್.ವಿಜಯಾ ನಂಜುಂಡಯ್ಯ, 2. ಗರ್ಭಕೋಶದ ಗೆಡ್ಡೆಗಳು ಕುರಿತು ಡಾ.ಉಷಾಗೌಡ ಅವರಿಂದ ಮಾಹಿತಿ, 4.30 ಝೇಂಕಾರ: ಮಕ್ಕಳ ಗೀತ ಗಾಯನ ಕಲಿಕಾ ಕಾರ್ಯಕ್ರಮ, 6.50 ಕೃಷಿರಂಗ: ಕಿಸಾನ್‌ವಾಣಿ: ಕಲ್ಲಂಗಡಿ ಬೆಳೆಯ ಸೂಕ್ತ ಬೇಸಾಯ ಕ್ರಮಗಳು ಕುರಿತು ಡಾ.ವ್ಯಾ ಬಿ.ಅವರೊಂದಿಗೆ ಸಂದರ್ಶನ. **ರಾತ್ರಿ:** 9.30 ಹಳ್ಳಿಹಾಡು.

■ **ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕ್ಯಾಡೆಮಿ:** ಹದಿಮೂರನೆಯ ಘಟಿಕೋತ್ಸವ, ದಿವ್ಯ ಸಾನ್ನಿಧ್ಯ: ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು, ಘಟಿಕೋತ್ಸವ ಭಾಷಣ: ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸಹ ಕಾರ್ಯವಾಹ (ಪ್ರಧಾನ ಕಾರ್ಯದರ್ಶಿಗಳು) ದತ್ತಾತ್ರೇಯ ಹೊಸಬಾಳೆ, ಉಪಸ್ಥಿತರು: ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ, ಸಮ ಕುಲಾಧಿಪತಿ ಡಾ.ಬಿ.ಸುರೇಶ್, ಸ್ಥಳ: ಶ್ರೀ ರಾಜೇಂದ್ರ ಸಭಾಂಗಣ, ಬೆಳಗ್ಗೆ 11 ಗಂಟೆಗೆ.

■ **ಮೈಸೂರು ವಿಶ್ವವಿದ್ಯಾನಿಲಯ, ಡಾ. ಎಸ್.ರಾಧಾಕೃಷ್ಣನ್ ತತ್ವಶಾಸ್ತ್ರ ಮತ್ತು ಭಾರತೀಯ ಸಂಸ್ಕೃತಿ ಕೇಂದ್ರ :** ಶ್ರೀ ಸಿದ್ದೇಶ್ವರ ಮಹಾಸ್ವಾಮಿಗಳವರ ನುಡಿ-ನಮನ, ಶ್ರೀಗಳ ಸನ್ನಿಧಿಯಲ್ಲಿ ಜರುಗಿದ ಚಿಂತನ-ಮಂಥನದಿಂದ ಸಂಗ್ರಹಿಸಿದ ಕೃತಿ 'ಗೃಹ ಬಳಕೆಯ ವಸ್ತುಗಳು: ಬದುಕಿಗೊಂದು ಆಧ್ಯಾತ್ಮಿಕ ನೋಟ' ಕೃತಿ ಲೋಕಾರ್ಪಣೆ, ದಿವ್ಯ ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು, ಮುಖ್ಯ ಅತಿಥಿಗಳು: ತುಮಕೂರು ಶ್ರೀ ರಾಮಕೃಷ್ಣ-ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ಶ್ರೀ ವೀರೇಶಾನಂದ ಸರಸ್ವತಿ ಮಹಾಸ್ವಾಮಿಗಳು, ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಜಿ.ಹೇಮಂತಕುಮಾರ್, ಅಧ್ಯಕ್ಷತೆ: ಕುಲಪತಿ ಪ್ರೊ.ಹೆಚ್.ರಾಜಶೇಖರ್, ಗ್ರಂಥ ಕುರಿತು ವಿಶ್ರಾಂತ ಗ್ರಂಥಪಾಲಕರಾದ ಡಾ.ಸಿ.ಪಿ.ರಾಮಶೇಷ ಮಾತನಾಡುವರು, ಸ್ಥಳ: ವಿಜ್ಞಾನ ಭವನ, ಮಾನಸಗಂಗೋತ್ರಿ, ಸಂಜೆ 4.30ಕ್ಕೆ.

■ **ಶ್ರೀ ಚಿಕ್ಕಲಿಂಗೇಶ್ವರ ಸ್ವಾಮಿ ದೇವಸ್ಥಾನ:** ಶ್ರೀ ಚಿಕ್ಕಲಿಂಗಣ್ಣ ಸ್ವಾಮಿಗಳವರ 86ನೇ ವರ್ಷದ ಆರಾಧನಾ ಮಹೋತ್ಸವ, ಶ್ರೀ ವಿಷ್ಣು ಸಹಸ್ರನಾಮ ಪಾರಾಯಣ, ಕೆ.ಪ್ರತಾಪ್ ಅವರಿಂದ 'ಕುಂತಿ ಸ್ತುತಿ' ಕುರಿತು ಪ್ರವಚನ, ಸ್ಥಳ: ದೇವಸ್ಥಾನ ಆವರಣ, ಸಂಜೆ 5.30ರಿಂದ.

■ **ಶ್ರೀ ಎಲ್ಲಮ್ಮ ತಾಯಿ ಅಮ್ಮನವರ ದೇವಸ್ಥಾನ:** 19ನೇ ವರ್ಷದ ಪೂಜಾ ಮಹೋತ್ಸವ, ವಿಶೇಷ ಪೂಜೆ, ಪ್ರಸಾದ ವಿನಿಯೋಗ, ಸ್ಥಳ: 822, ಶ್ರೀ ರಾಜರಾಜೇಶ್ವರಿ ನಿಲಯ, ಕೆ.ಆರ್.ಮೊಹಲ್ಲಾ, ಸಂಜೆ 6 ಗಂಟೆಗೆ.

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್:** ಫೆಬ್ರವರಿ ತಿಂಗಳ ಕಾರ್ಯಕ್ರಮಗಳು, ಸಂಜೆ 6ರಿಂದ 7.15ರವರೆಗೆ ವಿದ್ವಾನ್ ನಿತ್ಯಶ್ರೀ ಮತ್ತು 7.15ರಿಂದ 8.30ರವರೆಗೆ ವಿದ್ವಾನ್ ಎಸ್.ಎಂ. ಶ್ರೀದೇವಿ ಅವರಿಂದ ಗಾಯನ, ಪಿಟೀಲು: ವಿ। ಪೃಥ್ವೀ ಭಾಸ್ಕರ್, ಮೃದಂಗ: ವಿ। ವಿಕ್ರಮ್ ಭಾರದ್ವಾಜ್, ಸ್ಥಳ: ಶ್ರೀ ವಿನಾಯಕ ದೇವಸ್ಥಾನ, ಕೃಷ್ಣದೇವರಾಯ ವೃತ್ತದ ಬಳಿ, 2ನೇ ಹಂತ ವಿಜಯನಗರ.

■ **ಶ್ರೀ ಎಲ್ಲಮ್ಮಾಂಬ ಚಂದ್ರಗುಪ್ತಾಂಬ ಧರ್ಮ ಸಂಸ್ಥೆ ಟ್ರಸ್ಟ್:** 76ನೇ ಜಾತ್ರೋತ್ಸವ, ಬೆಳಗ್ಗೆ ಶ್ರೀ ಗಣಪತಿ ನವಗ್ರಹ, ಶ್ರೀ ಪರಶುರಾಮ, ಪಂಚಾಮೃತಾಭಿಷೇಕ, ವಸ್ತ್ರಾಲಂಕಾರ, ಶ್ರೀ ಗಣಪತಿಗೆ ನವನೀತಲಂಕಾರ, ಅಷ್ಟೋತ್ತರ, ಮಹಾ ಮಂಗಳಾರತಿ, ಪ್ರಸಾದ ವಿನಿಯೋಗ, ಅನ್ನಸಂತರ್ಪಣೆ, ಸಂಜೆ 6ಕ್ಕೆ ಶ್ರೀದೇವಿ ಉತ್ಸವ, ರಾತ್ರಿ 8.30ಕ್ಕೆ ಉಯ್ಯಾಲೋತ್ಸವ, ಮಹಾ ಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಎಲ್ಲಮ್ಮಾಂಬ ಚಂದ್ರಗುಪ್ತಾಂಬ ಧರ್ಮ ಸಂಸ್ಥೆ ಟ್ರಸ್ಟ್ ಆವರಣ, ಮಂಡಿ ಮೊಹಲ್ಲಾ.

■ **ಮೈಸೂರು ವಿಶ್ವವಿದ್ಯಾನಿಲಯ ರಾಷ್ಟ್ರೀಯ ಸೇವಾ ಯೋಜನೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ:** ರಾಷ್ಟ್ರೀಯ ಏಕೀಕರಣ ಶಿಬಿರ, ಬೆಳಗ್ಗೆ 6.30ಕ್ಕೆ ಧ್ವಜಾರೋಹಣ, 9.30ಕ್ಕೆ ಶ್ರಮದಾನ, ಬೆಳಗ್ಗೆ 11.30ಕ್ಕೆ ಮೈಮುಲ್ ವ್ಯವಸ್ಥಾಪಕ ನಿರ್ದೇಶಕ ವಿಜಯಕುಮಾರ್ ಅವರಿಂದ ಅಪೌಷ್ಟಿಕತೆ ಕುರಿತು ಉಪನ್ಯಾಸ, ಮಧ್ಯಾಹ್ನ 2ರಿಂದ ಸ್ವಾಮಿ ವೀರೇಶಾನಂದ ಸರಸ್ವತಿ ಮಹಾರಾಜ್ ಅವರಿಂದ ಯುವಕರು ಮತ್ತು ಸ್ವಾಮಿ ವಿವೇಕಾನಂದ ಕುರಿತು ಉಪನ್ಯಾಸ, ಸಂಜೆ 5.30ಕ್ಕೆ ಕ್ರೀಡೆ, 6.30ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮ, ಸ್ಥಳ: ಎನ್‌ಎಸ್‌ಎಸ್ ಭವನ, ಸರಸ್ವತಿಪುರಂ.

■ **ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ :** ಮಹಾ ಶಿವರಾತ್ರಿ ಪ್ರಯುಕ್ತ ದ್ವಾದಶ ಜ್ಯೋತಿರ್ಲಿಂಗಗಳ ಪುಣ್ಯ ದರ್ಶನ, ಬೆಳಗ್ಗೆ 11 ಗಂಟೆಯಿಂದ, ಸಾಂಸ್ಕೃತಿಕ ಕಾರ್ಯಕ್ರಮ: ಬಿ.ಕೆ. ಶಿವಲೀಲ ಅವರಿಂದ 'ಮನೋ ನಿಯಂತ್ರಣಕ್ಕಾಗಿ ಆತ್ಮಜ್ಞಾನ' ಕುರಿತು ಉಪನ್ಯಾಸ, ಸ್ಥಳ: ಸುಮಿತ್ರ ಸ್ಟೀಲ್ ಎದುರು ಇರುವ ಖಾಲಿ ನಿವೇಶನ, ಚದುರಂಗ ರಸ್ತೆ, ರಾಮಕೃಷ್ಣನಗರ 'ಐ' ಬ್ಲಾಕ್, ಸಂಜೆ 7 ಗಂಟೆಗೆ.

■ **ಧಾರ್ಮಿಕ ದತ್ತಿ ಇಲಾಖೆ :** ಶ್ರೀ ತ್ರಿಣೇಶ್ವರ ಸ್ವಾಮಿಯ ಬ್ರಹ್ಮೋತ್ಸವ, ರಾತ್ರಿ-ಹಗಲು ಪೂಜೆ, ಬಲಿ ಪ್ರಧಾನ ಉತ್ಸವ, ಸಂದಾನ ಸೇವೆ ಪುರಣಾ, ಸ್ಥಳ: ಶ್ರೀ ತ್ರಿಣೇಶ್ವರ ಸ್ವಾಮಿ ದೇವಸ್ಥಾನ, ಮೈಸೂರು ಅರಮನೆ ಆವರಣ.

# ಕ್ಯಾನ್ಸರ್ ಬಗ್ಗೆ ತಪ್ಪು ಕಲ್ಪನೆ ಬೇಡ: ಡಾ. ಅವಿನಾಶ್




ಮೈಸೂರು, ಫೆ.5– ಕ್ಯಾನ್ಸರ್ ರೋಗದ ಕುರಿತು ಜಾಗ್ರತೆ ವಹಿಸಬೇಕು. ಅದರ ಮಾಹಿತಿ ಹೊಂದಬೇಕು. ಆದರೆ, ತಪ್ಪು ಕಲ್ಪನೆಗಳನ್ನು ಇಟ್ಟುಕೊಳ್ಳಬಾರದು ಎಂದು ವಿಜಯನಗರದ ಕ್ಲಿಯರ್‌ಮೆಡಿ ರೇಡಿಯಂಟ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಸೀನಿಯರ್ ಕನ್ಸಲ್ಟೆಂಟ್ ಮೆಡಿಕಲ್ ಆಂಕಾಲಜಿಸ್ಟ್ ಡಾ.ಅವಿನಾಶ್ ಸಿ.ಬಿ. ತಿಳಿಸಿದರು.

'ಪ್ರಜಾವಾಣಿ' ಅಮೃತ ಮಹೋತ್ಸವ ಹಾಗೂ ವಿಶ್ವ ಕ್ಯಾನ್ಸರ್ ದಿನದ ಅಂಗವಾಗಿ ಕ್ಲಿಯರ್‌ಮೆಡಿ ರೇಡಿಯಂಟ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಸಹಯೋಗದಲ್ಲಿ ನಗರದ ಅರಮನೆ ಉತ್ತರ ದ್ವಾರದ ಕೋಟೆ ಆಂಜನೇಯ ದೇವಸ್ಥಾನದ ಆವರಣದಲ್ಲಿ ಶನಿವಾರ ಆಯೋಜಿಸಿದ್ದ ರಸ್ತೆ ಓಟದ ಸ್ಪರ್ಧೆಯಲ್ಲಿ ವಿಜೇತರಿಗೆ ಬಹುಮಾನ ವಿತರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕ್ಯಾನ್ಸರ್ ತಡೆಗಟ್ಟಬಹುದು ಎನ್ನುವ ಸಂದೇಶವನ್ನು ಎಲ್ಲೆಡೆಯೂ ಪಸರಿಸಬೇಕು ಎಂದರು. ತಂಬಾಕು ಮತ್ತು ಮದ್ಯಪಾನದಿಂದ ದೂರವಿರುವುದು, ನಿಯಮಿತವಾಗಿ ವ್ಯಾಯಾಮ ಮಾಡುವುದು, ಹಣ್ಣು–ತರಕಾರಿಗಳನ್ನು ಹೆಚ್ಚಾಗಿ ಸೇವಿಸುವುದು ಮತ್ತು ಆರೋಗ್ಯಕರ ಜೀವನ ಶೈಲಿಯಿಂದ ಕ್ಯಾನ್ಸರ್‌ನಿಂದ ದೂರವಿರಬಹುದು. ನೋವು ಅನುಭವಿಸುವುದು, ಚಿಕಿತ್ಸೆಗೆ ಒಳಗಾಗುವುದಕ್ಕಿಂತ ರೋಗ ಬಾರದಂತೆ ನೋಡಿಕೊಳ್ಳುವುದು ಮಹತ್ವದ್ದಾಗುತ್ತದೆ. ತಪಾಸಣೆಗೆ ಅತ್ಯಾಧುನಿಕ ವಿಧಾನಗಳು ಬಂದಿದ್ದು, ಅದನ್ನು ಬಳಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಇದಕ್ಕೂ ಮುನ್ನ ಸ್ಪರ್ಧೆಗೆ ಚಾಲನೆ ನೀಡಿದ ಮೇಯರ್ ಶಿವಕುಮಾರ್ ಮಾತನಾಡಿ, ಕ್ಯಾನ್ಸರ್ ರೋಗಕ್ಕೆ ತುತ್ತಾಗುವವರ ಸಂಖ್ಯೆ ದಿನೇ ದಿನೇ ಜಾಸ್ತಿಯಾಗುತ್ತಿದೆ. ಈ ನಿಟ್ಟಿನಲ್ಲಿ ಅರಿವು ಮೂಡಿಸುವ ಕೆಲಸವನ್ನು ಮಾಡುತ್ತಿರುವುದು ಅಭಿನಂದನಾರ್ಹ. ಅದರಲ್ಲೂ ನಗರದ ಪ್ರಖ್ಯಾತ ಸ್ಥಳವಾದ ಕೋಟೆ ಆಂಜನೇಯಸ್ವಾಮಿ ದೇವಾಲಯದ ಆವರಣದಲ್ಲಿ ಸ್ಪರ್ಧೆ ನಡೆಸಿದ್ದು ಸಾರ್ವಜನಿಕರ ಗಮನಸೆಳೆಯುವಂತೆ ಮಾಡಿದೆ ಎಂದರು.

**ದೂರವಿರಲು:** ಮಾನವ ಸಂಪನ್ಮೂಲವೇ ದೇಶದ ದೊಡ್ಡ ಆಸ್ತಿ. ಈ ಸಂಪನ್ಮೂಲ ಆರೋಗ್ಯಕರವಾಗಿರಬೇಕು ಎನ್ನುವುದು ಎಲ್ಲರ ಆಶಯ. ಇದಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಹಲವು ಕಾರ್ಯಕ್ರಮ ರೂಪಿಸಿದ್ದಾರೆ. ಆರೋಗ್ಯ ಕಾಪಾಡಿಕೊಳ್ಳುವುದು ಯೋಗಾಭ್ಯಾಸದಿಂದ ಸಾಧ್ಯ ಎನ್ನುವುದನ್ನು ಅರಿತು ಯೋಗವನ್ನು ಪ್ರೋತ್ಸಾಹಿಸಲಾಗುತ್ತಿದೆ. ಎಲ್ಲರೂ ನಿತ್ಯವೂ ಯೋಗಾಭ್ಯಾಸ ಮಾಡುವುದು ಹಾಗೂ ಆರೋಗ್ಯಕರ ಜೀವನಶೈಲಿ ಅಳವಡಿಸಿಕೊಳ್ಳುವುದರಿಂದ ಕ್ಯಾನ್ಸರ್ ಮೊದಲಾದ ರೋಗಗಳಿಂದ ದೂರವಿರಬಹುದು ಎಂದು ತಿಳಿಸಿದರು.

ಸ್ಪರ್ಧೆಗೆ ಚಾಲನೆ ನೀಡಿದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಮಾತನಾಡಿ, 'ಇತ್ತೀಚಿನ ದಿನಗಳಲ್ಲಿ ಸ್ತನ ಕ್ಯಾನ್ಸರ್ ಹೆಚ್ಚಾಗಿ ಕಂಡುಬರುತ್ತಿದೆ. ಈ ಬಗ್ಗೆ ಜಾಗೃತಿ ಹೆಚ್ಚಬೇಕು. ಮಹಿಳೆಯರು ಸಮಸ್ಯೆಯನ್ನು ಬೇಗ ಗುರುತಿಸಿ, ಸೂಕ್ತ ಚಿಕಿತ್ಸೆ ಪಡೆದುಕೊಳ್ಳಬೇಕು.

ಎಲ್ಲ ರೀತಿಯ ಕ್ಯಾನ್ಸರ್‌ಗೂ ಈಗ ಆಧುನಿಕ ಚಿಕಿತ್ಸೆ ಲಭ್ಯವಿದೆ. ಭಯಪಡುವ ಅಗತ್ಯವಿಲ್ಲ. ಆದರೆ, ಮುಂಜಾಗ್ರತೆ ವಹಿಸುವುದನ್ನು ಮರೆಯಬಾರದು ಎಂದರು.

ಸ್ತನ ಕ್ಯಾನ್ಸರ್ ಬಗ್ಗೆ ನಗರಪಾಲಿಕೆಯಿಂದಲೂ ಜಾಗೃತಿ ಮೂಡಿಸಲಾಗುತ್ತಿದೆ. ಸರ್ಕಾರದ ಯೋಜನೆಗಳಲ್ಲಿ ಚಿಕಿತ್ಸಾ ಸೌಲಭ್ಯ ಪಡೆದುಕೊಳ್ಳಬಹುದಾಗಿದೆ ಎಂದು ಪಾಲಿಕೆ ಆರೋಗ್ಯಾಧಿಕಾರಿ ಡಾ.ಡಿ.ಜಿ.ನಾಗರಾಜ್ ತಿಳಿಸಿದರು. ಎಂ.ಯೋಗೇಂದ್ರ ಸಿ.ಕೆ.ಮುರಳೀಧರ್, ಪ್ರಭಾಕರ್ ಸ್ಪರ್ಧೆಯನ್ನು ನಡೆಸಿಕೊಟ್ಟರು. ಗೋಕುಲಂನ ಎಂ.ಸಿ.ರವಿಚಂದ್ರ ಉಪಾಹಾರದ ಪ್ರಾಯೋಜಕತ್ವ ವಹಿಸಿದ್ದರು. ರೇಡಿಯೊ ಜಾಕಿ ರೋಹಿತ್ ನಿರೂಪಿಸಿದರು.

# ಆತ್ಮಸ್ಥೈರ್ಯದಿಂದ ಕ್ಯಾನ್ಸರ್ ವಿರುದ್ಧ ಗೆಲ್ಲಬೇಕು

## ಡಾ. ರವಿ ಕೃಷ್ಣಪ್ಪರಿಂದ ಜಾಗೃತಿ




ಮೈಸೂರು, ಫೆ.5–ಕ್ಯಾನ್ಸರ್ ಒಂದು ಮಾರಕ ಕಾಯಿಲೆ. ನನಗೆ ಕಾಯಿಲೆ ಇದೆ ಎಂಬುದು ಸಮಾಜಕ್ಕೆ ತಿಳಿದರೆ ನೋಡುವ ರೀತಿ ಬದಲಾಗುತ್ತದೆ ಎಂಬ ಕಳಂಕ ಭಾವನೆಯಿಂದ ಹೊರಬಂದು ಅದನ್ನು ವೈದ್ಯರೊಂದಿಗೆ ಮುಕ್ತವಾಗಿ ಚರ್ಚಿಸಿ ಸೂಕ್ತ ಚಿಕಿತ್ಸೆ ಪಡೆಯುವುದರ ಜೊತೆಗೆ ಮಾನಸಿಕವಾಗಿ ಆತ್ಮಸ್ಥೈರ್ಯದಿಂದ ಕ್ಯಾನ್ಸರ್ ವಿರುದ್ಧ ಗೆಲ್ಲಬೇಕು ಎಂದು ಜೆ.ಎಸ್.ಎಸ್ ಆಸ್ಪತ್ರೆ ಮತ್ತು ಕಾಲೇಜಿನ ಸರ್ಜಿಕಲ್ ಅಂಕೊಲಾಜಿ ವಿಭಾಗದ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರಾದ ಡಾ.ರವಿ ಕೃಷ್ಣಪ್ಪ ಅವರು ತಿಳಿಸಿದರು.

ಜೆ.ಎಸ್.ಎಸ್. ರೇಡಿಯೋ 91.2 ಎಫ್.ಎಂ. ಸಮುದಾಯ ಬಾನುಲಿ ಕೇಂದ್ರವು ಆಯೋಜಿಸಲಾಗಿದ್ದ ನೇರ ಸಂದರ್ಶನ ಫೋನ್ ಇನ್ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ವಿಶ್ವ ಕ್ಯಾನ್ಸರ್ ಜಾಗೃತಿ ದಿನದ ಗುರಿ ಉದ್ದೇಶಗಳು, ಪ್ರಸ್ತುತ ಕ್ಯಾನ್ಸರ್ ಪರಿಣಾಮ, ಹರಡುತ್ತಿರುವ ರೀತಿ, ಹಂತಗಳು ಅದರ ನಿಯಂತ್ರಣ, ಚಿಕಿತ್ಸೆ, ಮುಂಜಾಗ್ರತ ಕ್ರಮಗಳು ಹಾಗೂ ಗೊಂದಲಗಳನ್ನು ಬಗೆಹರಿಸಿದರು.

ಅನುವಂಶೀಯತೆ, ತಂಬಾಕು ಸೇವನೆ, ಮದುವೆಯ ವಯಸ್ಸು, ಮಕ್ಕಳಾಗುವ ವಯಸ್ಸಿನ ವ್ಯತ್ಯಾಸಗಳು ಕ್ಯಾನ್ಸರ್‌ಗೆ ಪ್ರಮುಖ ಕಾರಣವಾಗಿದೆ. ಇದಕ್ಕೆ ವೈದ್ಯರ ಸಲಹೆ ಪಡೆದು ಚಿಕಿತ್ಸೆ ಮುಂದುವರೆಸುವುದು ಅಗತ್ಯ ಎಂದರು. ಇದೇ ಸಂದರ್ಭದಲ್ಲಿ ಕರೆ ಮಾಡಿದ ಕೇಳುಗರೊಬ್ಬರು ಸ್ತನ ಕ್ಯಾನ್ಸರ್‌ನಿಂದ ಬಳಲುತ್ತಿದ್ದು ಅವರ ಚಿಕಿತ್ಸೆಗೆ ಸಹಾಯ ಮಾಡುವುದಾಗಿ ಭರವಸೆ ನೀಡಿದರು.

ಮೈಸೂರಿನಿಂದ ಬೇಬಿ, ಕೀರ್ತನಾ, ನಂಜನಗೂಡಿನಿಂದ ಯೋಗೇಂದ್ರ ಪ್ರಸಾದ್, ಧಾರವಾಡದಿಂದ ನಾಗರಾಜು, ಹೆಚ್.ಡಿ.ಕೋಟೆಯಿಂದ ಚಿನ್ನಸ್ವಾಮಿ, ಸೋಮೇಶ್ ಇನ್ನಿತರರು ಕರೆಮಾಡಿ ಉಪಯುಕ್ತ ಮಾಹಿತಿಯನ್ನು ಪಡೆದುಕೊಂಡರು. ಕಾರ್ಯಕ್ರಮವನ್ನು ರೇಡಿಯೋ ಕೇಂದ್ರದ ಸಂಯೋಜಕ ಶಿವಕುಮಾರ್ ನಡೆಸಿಕೊಟ್ಟರು. ಶ್ರೀಮತಿ ಕನ್ಯಾಕುಮಾರಿ ಮತ್ತು ರಮೇಶ್‌ರವರು ಕಾರ್ಯಕ್ರಮದಲ್ಲಿ ಹಾಜರಿದ್ದರು.

# ಬಿಷಪ್ ವಾಪಾಸ್ ಕರೆಸುವಂತೆ ಕಾಲ್ನಡಿಗೆ ಜಾಥಾ



ಮೈಸೂರು, ಫೆ.5(ಎಸ್‌ಪಿಎನ್)– ಸುದೀರ್ಘ ರಜೆ ಮೇಲೆ ತೆರಳಿರುವ ಬಿಷಪ್ ರೆವರೆಂಡ್ ವಿಲಿಯಮ್ ಅವರನ್ನು ವಾಪಸ್ ಕರೆಸುವಂತೆ ಒತ್ತಾಯಿಸಿ ನೂರಾರು ಸಂಖ್ಯೆಯ ಕ್ರೈಸ್ತ ಬಾಂಧವರು ಕಾಲ್ನಡಿಗೆ ಜಾಥಾ ನಡೆಸಿದರು.

ಸೇಂಟ್ ಫಿಲೋಮಿನಾ ಚರ್ಚ್ ಬಳಿ ಆರಂಭವಾದ ಮೆರವಣಿಗೆ, ಬನ್ನಿಮಂಟಪದ ಹೊಸ ಬಿಷಪ್ ಹೌಸ್ ಕಟ್ಟಡದವರೆಗೂ ನಡೆಯಿತು.

ಈ ಜಾಥಾದಲ್ಲಿ 'ನಿಲ್ಲಲಿ, ನಿಲ್ಲಲಿ ಸುಳ್ಳು ಪ್ರಚಾರ ನಿಲ್ಲಲಿ', 'ಅಧರ್ಮಿಗಳೇ ನಿಮಗೆ ಉಳಿಗಾಲವಿಲ್ಲ', 'ಹೊಟ್ಟೆಕಿಚ್ಚಿನಿಂದ ಆನಂದ ಸಾಧ್ಯವಿಲ್ಲ', 'ಕೆಟ್ಟತನವನ್ನು ಬಿತ್ತುವವನು ಕೇಡನ್ನೇ ಕೊಯ್ಯುವನು' ಎಂಬಿತ್ಯಾದಿ ಫಲಕಗಳನ್ನು ಹಿಡಿದು ಮೈಸೂರು, ಮಂಡ್ಯ ಹಾಗೂ ಕೊಡಗು ಜಿಲ್ಲೆಗಳಿಂದ ಆಗಮಿಸಿದ್ದ ನೂರಾರು ಕ್ರೈಸ್ತ ಬಾಂಧವರು ಆಡಳಿತಾಧಿಕಾರಿ ರೆ.ಬರ್ನಾಡ್ ಮೊರಾಸ್ ಅವರಿಗೆ ಮನವಿ ಸಲ್ಲಿಸಿದರು.

ಇತ್ತೀಚಿನ ದಿನಗಳಲ್ಲಿ ನಮ್ಮವರೆನಿಸಿಕೊಂಡ ಕೆಲ ಕಿಡಿಗೇಡಿಗಳು ಕ್ರೈಸ್ತ ಸಮುದಾಯಕ್ಕೆ ನೋವುಂಟು ಮಾಡುವ ಹೇಳಿಕೆಗಳನ್ನು ನೀಡುತ್ತಿದ್ದು, ಕಳೆದ ಮೂರು ವರ್ಷಗಳಿಂದ ನಮ್ಮ ವಿಶ್ವಾಸ ಮತ್ತು ನಮ್ಮ ಧರ್ಮಸಭೆಯ ಬಗ್ಗೆ ಇಲ್ಲಸಲ್ಲದ ಆರೋಪಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಬಿಡಲಾಗುತ್ತಿದೆ ಎಂದು ಮುಖಂಡರು ಆರೋಪಿಸಿದರು. ನಾವು ಯಾವುದೇ ಸಂದರ್ಭದಲ್ಲಿ ಸಂಯಮ ಕಳೆದುಕೊಳ್ಳದೇ ಧರ್ಮಸಭೆಗೆ ವಿಧೇಯರಾಗಿ ಮೌನ ವಹಿಸಿದ್ದೆವು. ಕೆಲವರು ಈ ಮೌನವನ್ನೇ ನಮ್ಮೆಲ್ಲರ ದೌರ್ಬಲ್ಯವೆಂದು ಪರಿಗಣಿಸಿ ತಮ್ಮ ಧೋರಣೆ ಮುಂದುವರಿಸಿರುವುದು ಬೇಸರ ಸಂಗತಿ ಎಂದರು. ಈ ಜಾಥಾ ಮೈಸೂರು ಧರ್ಮಕ್ಷೇತ್ರದ ಜನಧ್ವನಿಯ ಸಂಚಾಲಕ ಮ್ಯಾಥ್ಯೂ ಬಿ.ಸುರೇಶ್ ನೇತೃತ್ವ ವಹಿಸಿದ್ದರು.

## ಮೈಸೂರು ಮಹಾರಾಜರು ನಿರ್ಮಿಸಿದ ಹೊಯ್ಸಳ ಶಿಲ್ಪಕಲೆಯ

# ಮನಮೋಹಕ ವೇಣುಗೋಪಾಲ ಸ್ವಾಮಿ

## ದೇವಸ್ಥಾನಕ್ಕೆ ತಲುಪುವ ಹಾದಿ ನರಕ ಸದೃಶ್ಯ

● ಕೆಆರ್‌ಎಸ್ ನಿರ್ಮಾಣವಾದಾಗ ಮುಳುಗಿದ್ದ ದೇವಾಲಯ ತೀವ್ರ ಬರಗಾಲದಲ್ಲಿ 2000ನೇ ವರ್ಷ ಪ್ರತ್ಯಕ್ಷ ● ಖೋಡೆ ಫೌಂಡೇಷನ್‌ನಿಂದ ಯಥಾವತ್ ಸ್ಥಳಾಂತರ, ಅಚ್ಚುಕಟ್ಟಾದ ನಿರ್ವಹಣೆ ● ದೇವಸ್ಥಾನ ನೋಡಿ ಉಲ್ಲಾಸಭರಿತರಾಗುವ ಪ್ರವಾಸಿಗರು, ರಸ್ತೆ ಕಂಡು ಸರ್ಕಾರಕ್ಕೆ ಹಿಡಿಶಾಪ ಹಾಕುತ್ತಾರೆ ● ಶಾಸಕ ಸಿ.ಎಸ್.ಪುಟ್ಟರಾಜು ಇತ್ತ ಗಮನ ಹರಿಸುವರೇ?





ಮೈಸೂರು, ಫೆ.5–ಕನ್ನಂಬಾಡಿ ಅಣೆಕಟ್ಟಿನ (ಕೆಆರ್‌ಎಸ್) ಹಿನ್ನೀರಿನ ಹೊಸ ಕನ್ನಂಬಾಡಿಯಲ್ಲಿರುವ ಪುರಾತನ ವೇಣುಗೋಪಾಲ ಸ್ವಾಮಿ ದೇವಸ್ಥಾನಕ್ಕೆ ಹೊರ ಜಿಲ್ಲೆಗಳಿಂದ ಮಾತ್ರವಲ್ಲದೇ, ಹೊರ ರಾಜ್ಯಗಳಿಂದಲೂ ಪ್ರವಾಸಿಗರು ತಂಡೋಪತಂಡವಾಗಿ ಆಗಮಿಸುತ್ತಾರೆ. ದೇವಸ್ಥಾನದ ವಿಹಂಗಮ ನೋಟವನ್ನು ಕಣ್ತುಂಬಿಕೊಂಡು ಹರ್ಷಚಿತ್ತರಾಗುವ ಪ್ರವಾಸಿಗರು, ಅಲ್ಲಿಗೆ ತಲುಪುವಷ್ಟರಲ್ಲಿ ನರಕಯಾತನೆ ಪಡುವಂತಾಗಿದೆ.

ದೇವಸ್ಥಾನದಿಂದ ಸುಮಾರು 2 ಕಿ.ಮೀ. ರಸ್ತೆಯು ತೀವ್ರ ಹದಗೆಟ್ಟಿದ್ದು, ವಾಹನ ಸಂಚಾರಕ್ಕೆ ಯೋಗ್ಯವಿಲ್ಲದಂತಾಗಿದೆ. ನಾಲ್ಕು ಚಕ್ರ ವಾಹನಗಳಲ್ಲಿ ತೆರಳುವವರು ಮೈ–ಕೈ ನೋವು ಮಾಡಿಕೊಂಡರೆ, ದ್ವಿಚಕ್ರ ವಾಹನದಲ್ಲಿ ತೆರಳುವವರು ಕೆಲವೊಮ್ಮೆ ಆಯತಪ್ಪಿ ಬಿದ್ದು ಸಣ್ಣಪುಟ್ಟ ಗಾಯಗಳಾದದ್ದೂ ಉಂಟು. ಅಷ್ಟರ ಮಟ್ಟಿಗೆ ರಸ್ತೆ ಹದಗೆಟ್ಟಿದೆ. ಈ ರಸ್ತೆಗೆ ಈವರೆವಿಗೂ ಡಾಂಬರೀಕರಣವೇ ಮಾಡಿಲ್ಲವೇನೋ ಎಂಬಂತೆ ಭಾಸವಾಗುತ್ತಿದೆ. ವಾಹನ ಸಂಚರಿಸಲು ಯೋಗ್ಯವಾದ ಮಣ್ಣು ರಸ್ತೆಯಾದರೂ ಇದೆಯೇ ಎಂದರೆ, ಅದೂ ಇಲ್ಲ. ಹಳ್ಳ–ಕೊಳ್ಳಗಳಿಂದ ಕೂಡಿರುವ ಈ ರಸ್ತೆ ನರಕಕ್ಕೆ ದಾರಿ ತೋರಿಸುವಂತಹ ರಸ್ತೆಯೆಂದು ಕೆಲವರು ಅತೀ ಬೇಸರದಿಂದ ನುಡಿಯುತ್ತಾರೆ.

ಅಂದ ಹಾಗೆ ಪ್ರಸಿದ್ಧ ವೇಣುಗೋಪಾಲ ಸ್ವಾಮಿ ದೇವಸ್ಥಾನವನ್ನು 12ನೇ ಶತಮಾನದಲ್ಲಿ ಮೈಸೂರು ಮಹಾರಾಜರು ಹೊಯ್ಸಳ ವಾಸ್ತುಶಿಲ್ಪದೊಂದಿಗೆ ಅದ್ಭುತವಾಗಿ ನಿರ್ಮಿಸಿದ್ದರು. ಅಲ್ಲಿನ ಶಿಲ್ಪಕಲೆಗೆ ಎಲ್ಲರೂ ಮಾರುಹೋಗಿ ಅಲ್ಲಿಗೆ ಭೇಟಿ ನೀಡುತ್ತಿದ್ದರು. ಆದರೆ 1909ರಲ್ಲಿ ಕನ್ನಂಬಾಡಿ ಅಣೆಕಟ್ಟೆ ನಿರ್ಮಾಣವಾದಾಗ ಈ ದೇವಸ್ಥಾನ ಸಂಪೂರ್ಣವಾಗಿ ಮುಳುಗಡೆಯಾಗಿದ್ದು, 2000ನೇ ವರ್ಷದಲ್ಲಿ ತೀವ್ರ ಬರಗಾಲದಿಂದ ಕೆಆರ್‌ಎಸ್ ಬರಿದಾದಾಗ ದೇವಸ್ಥಾನ ಗೋಚರಿಸಿತು.

ಇದನ್ನು ಗಮನಿಸಿದ ಖೋಡೆ ಫೌಂಡೇಷನ್ ಅವರು ನಾಲ್ವಡಿ ಕೃಷ್ಣರಾಜ ಒಡೆಯರ್ ನಿರ್ಮಿಸಿದ್ದ, ಅದೇ ರೀತಿ ಒಂದಿಂಚೂ ಕೂಡ ಬದಲಾಗದಂತೆ ದೇವಸ್ಥಾನವನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಿ ಜೀರ್ಣೋದ್ಧಾರ ಮಾಡಿದ್ದರು. ಈ ಕಾಮಗಾರಿ 2011ರಲ್ಲಿ ಪೂರ್ಣಗೊಂಡಿದ್ದು, ಅಂದಿನಿಂದ ದೇವಸ್ಥಾನದ ಉಸ್ತುವಾರಿಯನ್ನು ಖೋಡೆ ಫೌಂಡೇಷನ್‌ನವರು ವಹಿಸಿಕೊಂಡು ನಿರ್ವಹಣೆ ಮಾಡುತ್ತಿದ್ದಾರೆ. ಅರ್ಚಕರನ್ನು ನೇಮಿಸಿದ್ದು ಮಾತ್ರವಲ್ಲದೇ, ಪುರುಷ ಹಾಗೂ ಮಹಿಳಾ ಕಾವಲುಗಾರರನ್ನೂ ಕೂಡ ನೇಮಕ ಮಾಡಿದ್ದಾರೆ. ವಿಶೇಷವೆಂದರೆ ಈ ದೇವಸ್ಥಾನದಲ್ಲಿ ಕಾಣಿಕೆ ಹುಂಡಿ ಇಟ್ಟಿಲ್ಲ. ದೇವಸ್ಥಾನದ ಎಲ್ಲಾ ಖರ್ಚು–ವೆಚ್ಚಗಳನ್ನು ಖೋಡೆ ಫೌಂಡೇಷನ್‌ನವರೇ ಭರಿಸುತ್ತಿದ್ದಾರೆ.

ವಿಪರ್ಯಾಸವೆಂದರೆ ಈ ದೇವಸ್ಥಾನ ತಲುಪಲು 2 ಕಿ.ಮೀ. ದುಸ್ತರ ರಸ್ತೆಯಲ್ಲಿ ಸಂಚರಿಸಬೇಕಾದ ಅನಿವಾರ್ಯತೆ ಪ್ರವಾಸಿಗರದ್ದಾಗಿದೆ. ಈ ರಸ್ತೆಯು ಕಟ್ಟೇರಿ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದ್ದು, ರಜೆ ದಿನಗಳಲ್ಲಿ ಸುಮಾರು 1 ಸಾವಿರಕ್ಕೂ ಹೆಚ್ಚು ಪ್ರವಾಸಿಗರು ಇಲ್ಲಿಗೆ ಆಗಮಿಸುತ್ತಿದ್ದರೂ, ಈ ರಸ್ತೆಯನ್ನು ಅಭಿವೃದ್ಧಿಪಡಿಸಬೇಕೆಂಬ ಗೋಜಿಗೆ ಗ್ರಾಮ ಪಂಚಾಯ್ತಿ ಹೋಗಿಲ್ಲ. ಸಂಪೂರ್ಣವಾಗಿ ರಸ್ತೆ ಅಭಿವೃದ್ಧಿಪಡಿಸುವುದು ಒತ್ತಟ್ಟಿಗಿರಲಿ, ಕನಿಷ್ಠ ಪಕ್ಷ ವಾಹನ ಸಂಚರಿಸುವಷ್ಟಾದರೂ ರಸ್ತೆ ದುರಸ್ತಿಪಡಿಸಬೇಕೆಂಬ ವಿವೇಚನೆಯೂ ಕೂಡ ಗ್ರಾಮ ಪಂಚಾಯ್ತಿ ಆಡಳಿತ ಮಂಡಳಿಗೆ ಇಲ್ಲದಂತಾಗಿದೆ ಎಂಬ ಆರೋಪಗಳು ಪ್ರವಾಸಿಗರಿಂದ ಕೇಳಿಬಂದಿವೆ.

> ಪ್ರಸಿದ್ಧ ದೇವಾಲಯವು ಸಂಪೂರ್ಣವಾಗಿ ನೀರಿನಲ್ಲಿ ಮುಳುಗಿ ಹೋಗಿದ್ದಾಗ ನಮ್ಮ ಸರ್ಕಾರ ಅದರತ್ತ ಗಮನವನ್ನೇ ಹರಿಸಿರಲಿಲ್ಲ. ಆದರೆ ಖೋಡೆ ಫೌಂಡೇಷನ್‌ನವರು ಪ್ರಾಚ್ಯವಸ್ತು ಇಲಾಖೆಯ ಸಹಕಾರವನ್ನು ಪಡೆದು ಕೋಟ್ಯಾಂತರ ರೂ. ವೆಚ್ಚ ಮಾಡಿ ಕೇವಲ ದೇವಸ್ಥಾನವನ್ನು ಯಥಾವತ್ತಾಗಿ ಸ್ಥಳಾಂತರಿಸುವ ಜೊತೆಗೆ ಈಗಲೂ ಕೂಡ ಅವರದೇ ವೆಚ್ಚದಲ್ಲಿ ನಿರ್ವಹಣೆ ಮಾಡುತ್ತಾ ಬಂದಿದ್ದಾರೆ. ಅಲ್ಲಿನ ಅರ್ಚಕರಿಗೆ ಹಾಗೂ ಭದ್ರತಾ ಸಿಬ್ಬಂದಿಗೆ ಸಂಬಳವನ್ನೂ ಕೊಡುತ್ತಿದ್ದಾರೆ. ಒಂದು ಫೌಂಡೇಷನ್ ಇಷ್ಟೆಲ್ಲಾ ಮಾಡಿದ್ದರೂ ಅಲ್ಲಿಗೆ ತಲುಪುವ ಕೇವಲ 2 ಕಿ.ಮೀ. ರಸ್ತೆಯನ್ನು ಅಭಿವೃದ್ಧಿಪಡಿಸಲು ಈ ಸರ್ಕಾರಕ್ಕೆ ಸಾಧ್ಯವಿಲ್ಲವೇ? ಎಂದು ಪ್ರವಾಸಿಗರೊಬ್ಬರು ಬೇಸರದಿಂದಲೇ ಪ್ರಶ್ನಿಸಿದ್ದಾರೆ.

ರಜೆ ದಿನಗಳಲ್ಲಿ ಸಾವಿರಾರು ಮಂದಿ ಪ್ರವಾಸಿಗರು ಇಲ್ಲಿಗೆ ಆಗಮಿಸುತ್ತಾರಾದರೂ, ಅಲ್ಲಿರುವುದು ಕೇವಲ ಎರಡೇ ಶೌಚಾಲಯಗಳು. ಇಲ್ಲಿಗೆ ಮತ್ತಷ್ಟು ಶೌಚಾಲಯಗಳನ್ನು ನಿರ್ಮಿಸಬೇಕಾದ ಅಗತ್ಯತೆ ಇದೆ. ದೇವಸ್ಥಾನವು ಸಂಜೆ 6.30ರವರೆಗೆ ತೆರೆದಿರುತ್ತದೆ. ಆದರೆ ಶೌಚಾಲಯಗಳನ್ನು 5.30ಕ್ಕೆ ಬಂದ್ ಮಾಡಲಾಗುತ್ತದೆ. ಕನಿಷ್ಠ ಪಕ್ಷ ದೇವಸ್ಥಾನ ಮುಚ್ಚುವವರೆಗಾದರೂ, ಶೌಚಾಲಯ ಬಂದ್ ಮಾಡದಂತೆ ಪ್ರವಾಸಿಗರು ಆಗ್ರಹಿಸಿದ್ದಾರೆ.

ಈ ಕುರಿತು ಕಟ್ಟೇರಿ ಗ್ರಾಪಂ ಅಭಿವೃದ್ಧಿ ಅಧಿಕಾರಿ ಮಹೇಶ್ ಅವರನ್ನು 'ಮೈಸೂರು ಮಿತ್ರ' ಸಂಪರ್ಕಿಸಲಾಗಿ ಅವರು, ಹೆಚ್.ಡಿ. ಕುಮಾರಸ್ವಾಮಿ ಅವರು ಮುಖ್ಯಮಂತ್ರಿಗಳಾಗಿದ್ದಾಗ ಈ ರಸ್ತೆ ಅಭಿವೃದ್ಧಿಗೆ 60 ಲಕ್ಷ ರೂ. ಮಂಜೂರಾಗಿತ್ತು. ಸರ್ಕಾರ ಬದಲಾವಣೆಯಾದ ನಂತರ ಆ ಹಣ ಬಂದಿಲ್ಲ. ಇದೀಗ ರಸ್ತೆ ದುರಸ್ತಿಗೆ ನಾಲ್ಕೂವರೆ ಲಕ್ಷ ರೂ. ಮಂಜೂರಾಗಿದ್ದು, ಸದ್ಯದಲ್ಲಿ ದುರಸ್ತಿ ಕಾರ್ಯ ಕೈಗೊಳ್ಳಲಾಗುತ್ತದೆ ಎಂದರು.

ಪ್ರಸಿದ್ಧ ದೇವಾಲಯವು ಸಂಪೂರ್ಣವಾಗಿ ನೀರಿನಲ್ಲಿ ಮುಳುಗಿ ಹೋಗಿದ್ದಾಗ ನಮ್ಮ ಸರ್ಕಾರ ಅದರತ್ತ ಗಮನವನ್ನೇ ಹರಿಸಿರಲಿಲ್ಲ. ಆದರೆ ಖೋಡೆ ಫೌಂಡೇಷನ್‌ನವರು ಪ್ರಾಚ್ಯವಸ್ತು ಇಲಾಖೆಯ ಸಹಕಾರವನ್ನು ಪಡೆದು ಕೋಟ್ಯಾಂತರ ರೂ. ವೆಚ್ಚ ಮಾಡಿ ಕೇವಲ ದೇವಸ್ಥಾನವನ್ನು ಯಥಾವತ್ತಾಗಿ ಸ್ಥಳಾಂತರಿಸುವ ಜೊತೆಗೆ ಈಗಲೂ ಕೂಡ ಅವರದೇ ವೆಚ್ಚದಲ್ಲಿ ನಿರ್ವಹಣೆ ಮಾಡುತ್ತಾ ಬಂದಿದ್ದಾರೆ. ಅಲ್ಲಿನ ಅರ್ಚಕರಿಗೆ ಹಾಗೂ ಭದ್ರತಾ ಸಿಬ್ಬಂದಿಗೆ ಸಂಬಳವನ್ನೂ ಕೊಡುತ್ತಿದ್ದಾರೆ. ಒಂದು ಫೌಂಡೇಷನ್ ಇಷ್ಟೆಲ್ಲಾ ಮಾಡಿದ್ದರೂ ಅಲ್ಲಿಗೆ ತಲುಪುವ ಕೇವಲ 2 ಕಿ.ಮೀ. ರಸ್ತೆಯನ್ನು ಅಭಿವೃದ್ಧಿಪಡಿಸಲು ಈ ಸರ್ಕಾರಕ್ಕೆ ಸಾಧ್ಯವಿಲ್ಲವೇ? ಎಂದು ಪ್ರವಾಸಿಗರೊಬ್ಬರು ಬೇಸರದಿಂದಲೇ ಪ್ರಶ್ನಿಸಿದ್ದಾರೆ. ಈ ಪ್ರಸಿದ್ಧ ದೇವಸ್ಥಾನವು ಸಿ.ಎಸ್.ಪುಟ್ಟರಾಜು ಪ್ರತಿನಿಧಿಸುತ್ತಿರುವ ಪಾಂಡವಪುರ ವಿಧಾನಸಭಾ ಕ್ಷೇತ್ರಕ್ಕೆ ಒಳಪಟ್ಟಿದ್ದು, ಶಾಸಕ ಪುಟ್ಟರಾಜು ಅವರು ಇತ್ತ ಗಮನ ಹರಿಸಿ ರಸ್ತೆ ಅಭಿವೃದ್ಧಿ ಪಡಿಸುವ ಮೂಲಕ ಪ್ರವಾಸಿಗರಿಗೆ ಅನುಕೂಲ ಕಲ್ಪಿಸುವರೇ ಎಂಬುದನ್ನು ಕಾದು ನೋಡಬೇಕಾಗಿದೆ.

# ಗೂಗಲ್ ಸರ್ಚ್ ಬಿಡಿ; ಪುಸ್ತಕಗಳನ್ನು ಓದಿ

## ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಪ್ರೊ.ಕೆ.ಎಸ್.ರಂಗಪ್ಪ




ಮೈಸೂರು, ಫೆ5(ಆರ್‌ಕೆಬಿ)– ಯುವಜನತೆ ಗೂಗಲ್ ಸರ್ಚ್ ಮಾಡುವ ಬದಲು ಪುಸ್ತಕಗಳನ್ನು ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು ಎಂದು ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್. ರಂಗಪ್ಪ ತಿಳಿಸಿದರು.

ಮೈಸೂರಿನ ಇಂಜಿನಿಯರುಗಳ ಸಂಸ್ಥೆಯ ಸಭಾಂಗಣದಲ್ಲಿ ಭಾನುವಾರ ವೈದ್ಯವಾರ್ತಾ ಪ್ರಕಾಶನ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಡಾ.ಅರಕಲಗೂಡು ನೀಲಕಂಠಮೂರ್ತಿ ಅವರ 'ಕಗ್ಗತ್ತಲೆಯ ಖಂಡದಲ್ಲಿ' ಪ್ರವಾಸ ಕಥನ ಕೃತಿ ಬಿಡುಗಡೆ ಮಾಡಿ ಮಾತನಾಡಿದ ಅವರು, ಪುಸ್ತಕ ಓದುವುದರಿಂದ ಜ್ಞಾನ ಬೆಳೆಯುತ್ತದೆ. ವಿಷಯವೂ ಚೆನ್ನಾಗಿ ಅರ್ಥವಾಗುತ್ತದೆ ಎಂದರು.


**ಲೇಖಕರು ಸಾಫ್ಟ್ ಕಾಪಿ ನೀಡಿದರೆ ಡಿಜಿಟಲ್ ಗ್ರಂಥಾಲಯದಲ್ಲಿ ಅಳವಡಿಕೆ:** ಸಾರ್ವಜನಿಕ ಗ್ರಂಥಾಲಯ ಇಲಾಖೆಯ ನಿರ್ದೇಶಕ ಡಾ.ಸತೀಶ್‌ಕುಮಾರ್ ಎಸ್. ಹೊಸಮನಿ ಮಾತನಾಡಿ, ಲೇಖಕರು, ಪ್ರಕಾಶಕರು ತಮ್ಮ ಕೃತಿಗಳ ಸಾಫ್ಟ್ ಕಾಪಿಯನ್ನು ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ನೀಡಿದರೆ, ಆ ಕೃತಿಗಳನ್ನು ಡಿಜಿಟಲ್ ಗ್ರಂಥಾಲಯಗಳಲ್ಲಿ ಅಳವಡಿಸಲಾಗುವುದು ಎಂದು ತಿಳಿಸಿದರು.

ಕೊರೊನಾ ಸಂದರ್ಭದಲ್ಲಿ ಗ್ರಂಥಾಲಯ ಇಲಾಖೆಯಿಂದ ಆರಂಭಿಸಲಾದ ಡಿಜಿಟಲ್ ಗ್ರಂಥಾಲಯದಲ್ಲಿ ಮೂರು ವರ್ಷಗಳಲ್ಲಿ 3.25 ಕೋಟಿ ಸದಸ್ಯರು ನೋಂದಾಯಿಸಿಕೊಂಡಿದ್ದಾರೆ. ಇದರಲ್ಲಿ ಬೆಂಗಳೂರಿನಲ್ಲೇ 1.25 ಕೋಟಿ ಸದಸ್ಯರಿದ್ದು, ಮಂಗಳೂರಿನಲ್ಲಿ 21 ಲಕ್ಷ, ಉಡುಪಿಯಲ್ಲಿ 18 ಲಕ್ಷ, ಹಾವೇರಿಯಲ್ಲಿ 13 ಲಕ್ಷ, ಮೈಸೂರು ಜಿಲ್ಲೆಯಲ್ಲಿ 12.74 ಲಕ್ಷ ಸದಸ್ಯರಿದ್ದಾರೆ. ದೇಶದಲ್ಲಿ ಡಿಜಿಟಲ್ ಗ್ರಂಥಾಲಯ ಅಳವಡಿಸಿಕೊಂಡಿರುವ ರಾಜ್ಯ ಕರ್ನಾಟಕ. ವಿಶ್ವದಲ್ಲೇ ಮೊದಲ ಸ್ಥಾನದಲ್ಲಿದೆ. ನಂತರದ ಸ್ಥಾನ ಅಮೆರಿಕಾ. ಹೀಗಾಗಿ ನಮಗೆ ವಿಶ್ವ ದಾಖಲೆ ಪ್ರಶಸ್ತಿಯೂ ಸಿಕ್ಕಿದೆ. ಇಲಾಖೆಯ ವೆಬ್‌ಸೈಟ್‌ನಲ್ಲಿ ಅಥವಾ ಆಪ್ ಡೌನ್‌ಲೋಡ್ ಮಾಡಿಕೊಂಡು ನೋಂದಾಯಿಸಿಕೊಂಡು ಸದಸ್ಯರಾಗಬಹುದಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ವಿಜ್ಞಾನಿ ಕೊಳ್ಳೇಗಾಲ ಶರ್ಮ ಕೃತಿ ಕುರಿತು ಮಾತನಾಡಿದರು. ಇಳೈ ಆಳ್ವಾರ್ ಸ್ವಾಮೀಜಿ, ಅರಸು ಸಂಘದ ಅಧ್ಯಕ್ಷ ಎಚ್.ಎಂ.ಟಿ.ಲಿಂಗರಾಜೇ ಅರಸ್, ಲೇಖಕ ಡಾ.ಅರಕಲಗೂಡು ನೀಲಕಂಠಮೂರ್ತಿ, ಅನ್ವೇಷಣಾ ಸೇವಾ ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷ ಅಮರ್‌ನಾಥ್ ರಾಜೇ ಅರಸ್, ವೈದ್ಯವಾರ್ತಾ ಪ್ರಕಾಶನದ ಸ್ಥಾಪಕ ಅಧ್ಯಕ್ಷ ಡಾ.ಎಂ.ಜಿ.ಆರ್. ಅರಸ್ ಇನ್ನಿತರರು ಉಪಸ್ಥಿತರಿದ್ದರು.

# ಬುದ್ಧನ ಸರಳತೆ, ಸಮಾನತೆ ಅನುಸರಿಸಿ ಭಾರತವೂ ಮುನ್ನಡೆಯಲಿ

## 'ಜಗ ನಡೆಯಲಿ ಬುದ್ಧನ ಕಡೆ' ಸಂಗೀತ ಕಾರ್ಯಕ್ರಮ



ಮೈಸೂರು, ಫೆ.5(ಜಿಎ)–ಬುದ್ಧನ ಸರಳತೆ, ಸಮಾನತೆಯನ್ನು ಅನುಸರಿಸುತ್ತಿರುವ ವಿಶ್ವದ ಅನೇಕ ದೇಶಗಳು ಅಭಿವೃದ್ಧಿಯ ಪಥದತ್ತ ಸಾಗಿದ್ದು, ಭಾರತವು ಈ ತತ್ವಗಳನ್ನು ಅನುಸರಿಸುವುದು ಉತ್ತಮ ಎಂದು ಹಾಸನ ಜಿಲ್ಲೆಯ ವಾಣಿಜ್ಯ ತೆರಿಗೆ ಇಲಾಖೆ ಉಪ ಆಯುಕ್ತ ಮಂಜುನಾಥ್ ಸೋಸಲೆ ಅಭಿಪ್ರಾಯಪಟ್ಟಿದ್ದಾರೆ.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ವಿಶ್ವ ಮೈತ್ರಿ ಬುದ್ಧವಿಹಾರದ ಆವರಣದಲ್ಲಿ ತನುಮನ ಸಂಸ್ಥೆ ವತಿಯಿಂದ ಆಯೋಜಿಸಿದ್ದ 'ಜಗ ನಡೆಯಲಿ ಬುದ್ಧನ ಕಡೆ' ಸಂಗೀತ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ನಾನು ಸರ್ಕಾರಿ ಅಧಿಕಾರಿಯಾಗಿರುವುದರಿಂದ ಅನೇಕ ಒತ್ತಡಗಳ ನಡುವೆ ಕಾರ್ಯನಿರ್ವಹಿಸಬೇಕಿರುತ್ತದೆ. ಇಂತಹ ಸಂದರ್ಭದಲ್ಲಿ ಬುದ್ಧನ ವಿಚಾರಧಾರೆಯುಳ್ಳ ವಿಡಿಯೋ ತುಣುಕುಗಳನ್ನು ನೋಡುವ ಮೂಲಕ ಶಕ್ತಿ ಜೊತೆಗೆ ಪರಿಹಾರವನ್ನು ಕಂಡುಕೊಳ್ಳುತ್ತೇನೆ. ಎರಡು ಸಾವಿರ ವರ್ಷಗಳ ಹಿಂದೆಯೇ ಬುದ್ಧ ತಿಳಿಸಿರುವಂತೆ ಧ್ಯಾನ ಮಾಡುವ ಮೂಲಕ ಮಾನಸಿಕವಾಗಿ ಶಕ್ತರಾಗಬಹುದಾಗಿದೆ. ಆದರೆ, ಈಗ ಧ್ಯಾನದ ಬಗ್ಗೆ ಜನರಲ್ಲಿ ಅರಿವು ಹೆಚ್ಚಾಗಿದೆ. ಹಾಗೇ ಹಾಸ್ಟಲ್ ವಿದ್ಯಾರ್ಥಿಗಳು ಧ್ಯಾನ ಮಾಡುವ ಮೂಲಕ ಮನಸ್ಸನ್ನು ನಿಯಂತ್ರಿಸಿಕೊಳ್ಳಿ ಎಂದು ಸಲಹೆ ನೀಡಿದರು.

ಗಾಯಕ ಲಕ್ಷ್ಮಿರಾಮ್ ಸಾರಥ್ಯದಲ್ಲಿ 'ಜಗ ನಡೆಯಲಿ ಬುದ್ಧನ ಕಡೆ' ಸಂಗೀತ ಕಾರ್ಯಕ್ರಮ ನಡೆಸಲಾಯಿತು. ಮಾಜಿ ಮೇಯರ್ ಪುರುಷೋತ್ತಮ್, ಎಂಪಿಎಂಸಿ ಮಾಜಿ ಉಪಾಧ್ಯಕ್ಷ ಅಹಿಂದ ಜವರಪ್ಪ, ನಿವೃತ್ತ ಪೊಲೀಸ್ ಅಧೀಕ್ಷಕ ಎಲ್.ರಾಚಯ್ಯ ಸೇರಿದಂತೆ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಐದು ದಿನಗಳ ಸಹಸ್ರ ಚಂದ್ರ ದರ್ಶನ ಶಾಂತಿ ಹೋಮ ಸಂಪನ್ನ

# ಶ್ರೀ ಗಣಪತಿ ಸಚ್ಚಿದಾನಂದ ಶ್ರೀಗಳ ಪಲ್ಲಕ್ಕಿ ಉತ್ಸವ

ಮೈಸೂರು, ಫೆ5(ಆರ್‌ಕೆಬಿ)– ಮೈಸೂರಿನ ನಂಜನಗೂಡು ರಸ್ತೆಯಲ್ಲಿರುವ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 80ನೇ ವರ್ಷದ ಜನ್ಮ ದಿನೋತ್ಸವದ ಪ್ರಯುಕ್ತ ಆಶ್ರಮದಲ್ಲಿ ಆಯೋಜಿಸಿರುವ ಐದು ದಿನಗಳ ಸಹಸ್ರ ಚಂದ್ರ ದರ್ಶನ ಶಾಂತಿ ಹೋಮ ಭಾನುವಾರ ಸಂಪನ್ನಗೊಂಡಿತು.

108 ಹೋಮ ಕುಂಡಗಳಲ್ಲಿ ಕಳೆದ ಐದು ದಿನಗಳಿಂದ ಹೋಮ ನಡೆಸಲಾಯಿತು. ನಾಡಿನಲ್ಲಿ ಉತ್ತಮ ಮಳೆ, ಬೆಳೆ ಆಗಬೇಕು. ಅಕಾಲದಲ್ಲಿ ಮಳೆ ಆಗುವುದು ತಪ್ಪಿ, ಸಕಾಲದಲ್ಲಿ ಮಳೆಯಾಗಿ ದೇಶ ಸುಭಿಕ್ಷವಾಗಬೇಕು ಎಂದು ಪ್ರಾರ್ಥಿಸಿ ಈ ಹೋಮ ನಡೆಸಲಾಯಿತು.

ಮಾಘ ಪೂರ್ಣಿಮಾ ದಿನವಾದ ಭಾನುವಾರ ಬೆಳಗ್ಗೆ ಪವಮಾನ ಹೋಮ, ದತ್ತ ಹೋಮ, ಕಾರ್ಯಸಿದ್ಧಿ ಹನುಮಂತನಿಗೆ ವಿಶೇಷ ಅರ್ಚನೆ, ಸಂಜೆ ಸ್ವಾಮೀಜಿಯವರಿಗೆ ತೆಪ್ಪೋತ್ಸವ ನಡೆಯಿತು.

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರಿಗೆ ಭಕ್ತರು ವಿವಿಧ ರೀತಿಯಲ್ಲಿ ಭಕ್ತಿ ಸಮರ್ಪಣೆ ಮಾಡಿದರು. ಜಪಾನಿ ಭಕ್ತರು ಅವರ ಭಾಷೆಯಲ್ಲಿ



ಶ್ರೀಗಳ ಸಾಧನೆಗಳನ್ನು ತಿಳಿಸಿ, ಭಕ್ತಿಯನ್ನು ಕೊಂಡಾಡಿದರು. ಬಲ್ಲಾದಿ ಶ್ರೀರಾಮ ಪ್ರಸಾದ್ ಸಹೋದರರು ಸಹಸ್ರ ಚಂದ್ರ ಗೀತೆ, ಸ್ವಾಗತಂ ಶುಭ ಸ್ವಾಗತಂ..., ಸ್ವಾಗತಂ ಶುಭ ಮಾಗತಂ...' ಎಂಬ ಗೀತೆಗಳನ್ನು ಹಾಡಿ ಭಕ್ತರು ತಲೆದೂಗುವಂತೆ ಮಾಡಿದರು. ನಂತರ ಶ್ರೀಗಳ ವಿರಚಿತ 'ವಕ್ರಟ್ಯೆ...' ಎಂಬ ಗೀತೆಯನ್ನು ಸುಂದರ್ ಅವರು ಹಾಡುವ ಮೂಲಕ ಭಕ್ತಿ ಸಮರ್ಪಿಸಿದರು.

ಮಲೇಷಿಯಾದ ಜ್ಞಾನಬೋಧ ಸಭಾದ ಸುಂದರಿ, ಜ್ಞಾನಸುಂದರಿ ಮತ್ತು ಸದಸ್ಯರು ಶ್ರೀಗಳ ಸಹಸ್ರ ಚಂದ್ರ ದರ್ಶನ ಶಾಂತಿ ಪ್ರಯುಕ್ತ ವಿಶೇಷ ಕೇಕ್ ಸಿದ್ಧಪಡಿಸಿ ಸ್ವಾಮೀಜಿಯವರಿಂದ ಕಟ್ ಮಾಡಿಸಿದರು. ಯುನೈಟೆಡ್ ಅರಬ್ ಎಮಿರೇಟ್ಸ್ ದತ್ತ ಯೋಗ ಸೆಂಟರ್ ಶ್ರೀಗಳ ಚಿತ್ರವುಳ್ಳ ಕ್ರಿಸ್ಟಲ್ ಪ್ಲೇಟ್ ಕೊಡುಗೆ ನೀಡಿದರು.

ಟ್ರಿನಿಡಾಡ್ ದತ್ತ ಯೋಗ ಸೆಂಟರ್, ವಿಜಯವಾಡ ಆಶ್ರಮ, ಶ್ರೀ ಪಂಚಮುಖಿ ದೇವಸ್ಥಾನಂನವರು ಹೀಗೆ ಒಬ್ಬರಲ್ಲಾ ಇಬ್ಬರಲ್ಲಾ ನೂರಾರು ಮಂದಿ ತಮ್ಮದೇ ಆದ ರೀತಿಯಲ್ಲಿ ಸಮರ್ಪಣೆ ಮಾಡಿದರು. ಇದೇ ವೇಳೆ ಪೂರ್ಣಕಲಾ ತಂಡದವರು ಸಹಸ್ರ ಚಂದ್ರ ದರ್ಶನಕ್ಕಾಗಿಯೇ ಸಿದ್ಧಪಡಿಸಿ ತಂದಿದ್ದ ವಿಶೇಷ ಉಡುಗೊರೆಯನ್ನು ಶ್ರೀಗಳಿಗೆ ನೀಡಿದರು.

ಭಕ್ತಿ ಸಮರ್ಪಣೆ ನಂತರ ಸ್ವಾಮೀಜಿಯವರ ಪಲ್ಲಕ್ಕಿ ಉತ್ಸವ ಪ್ರಾರಂಭವಾಯಿತು. ಆ ನಂತರ ಶ್ರೀಗಳು ಗುರು ನಿಲಯ ಪ್ರವೇಶ ಮಾಡಿದರು. ಶ್ರೀಗಳ ತುಲಾಭಾರದ ನಂತರ ಸಂಜೆ ಸಪ್ತರ್ಷಿ ಸರೋವರದಲ್ಲಿ ವೈಭವಯುತ ತೆಪ್ಪೋತ್ಸವ ನಡೆಯಿತು.

ಆಶ್ರಮದ ಆವರಣದಲ್ಲಿ ಸ್ವಾಮೀಜಿಗಳ ಸಹಸ್ರ ಚಂದ್ರ ದರ್ಶನ ಶಾಂತಿ ಮಹೋತ್ಸವ ಪ್ರಯುಕ್ತ ಬೆಂಗಳೂರಿನಿಂದ ಆಗಮಿಸಿದ್ದ ವೈದ್ಯರ ತಂಡ ಆಶ್ರಮದ ಆಸ್ಪತ್ರೆಯಲ್ಲಿ ಉಚಿತ ಶ್ರವಣ ತಪಾಸಣೆ ಮಾಡಿ ಅರ್ಹರಿಗೆ ಶ್ರವಣದೋಷ ಯಂತ್ರಗಳನ್ನು ವಿತರಿಸಿದರು.

## ನಕ್ಕರೆ ಅದೇ ಸ್ವರ್ಗ

ಟೀಚರ್ : ಗುಂಡ ನಿನಗೆ ಯಾವ ಪ್ರಾಣಿ ಇಷ್ಟ?
ಗುಂಡ : ಬೆಕ್ಕು ಇಷ್ಟ
ಟೀಚರ್ : ಯಾಕೆ?
ಗುಂಡ : ಬೆಕ್ಕು ಅಡ್ಡ ಬಂದ್ರೆ ನಮ್ಮ ಅಜ್ಜಿ ಶಾಲೆಗೆ ಹೋಗ್ಬೇಡ ಅಂತಾರೆ ಅದಕ್ಕೆ.

ಮೈಸೂರು ಮಿತ್ರ

ಸೋಮವಾರ, 6 ಫೆಬ್ರವರಿ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

**ಅಮೃತವಾಹಿನಿ.........**

ಖುಷಿಯನ್ನು ನಾವೇ ಕಷ್ಟಪಟ್ಟು ಸಂಪಾದಿಸಬೇಕು, ದುಃಖವನ್ನು ಎಲ್ಲರೂ ಉಚಿತವಾಗಿ ಕೊಟ್ಟು ಹೋಗ್ತಾರೆ!

**ವೇದ ಸುಳ್ಳಾದರೂ ಗಾದೆ ಸುಳ್ಳಾಗದು** { ಗಾಜಿನ ಮನೆಯಲ್ಲಿರುವವರು ಅಕ್ಕ-ಪಕ್ಕದ ಮನೆಯವರ ಮೇಲೆ ಕಲ್ಲು ಎಸೆಯಬಾರದು.

## ನಿಮ್ಮ ಪತ್ರಗಳು

### ಈ ಶತಮಾನದ ಮಾದರಿ ಗಾಯಕಿ ವಾಣಿ ಜಯರಾಂ

ಮಾನ್ಯರೇ,

ದಕ್ಷಿಣ ಭಾರತದ ಸುಪ್ರಸಿದ್ಧ ಹಿನ್ನೆಲೆ ಗಾಯಕಿಯಾಗಿದ್ದ ಶ್ರೀಮತಿ ವಾಣಿ ಜಯರಾಂ



ಇತ್ತೀಚೆಗೆ (04.02.2023) ನಿಗೂಢ ರೀತಿಯಲ್ಲಿ ಸಾವನ್ನಪ್ಪಿರುವುದು ಭಾರತೀಯ ಸಂಗೀತ ಕ್ಷೇತ್ರಕ್ಕೆ ಉಂಟಾಗಿರುವ ತೀವ್ರ ನಷ್ಟವಾಗಿದೆ. 8 ವರ್ಷದ ಮಗುವಿದ್ದಾಗಲೇ ಆಕಾಶವಾಣಿಯಲ್ಲಿ ಸಾರ್ವಜನಿಕ ಕಾರ್ಯಕ್ರಮ ನೀಡಲು ಪ್ರಾರಂಭಿಸಿದ ವಾಣಿ ಜಯರಾಂ, ಕನ್ನಡ, ತಮಿಳು, ತೆಲುಗು, ಹಿಂದಿ, ಮರಾಠಿ, ಒರಿಯಾ, ಗುಜರಾತಿ ಸೇರಿದಂತೆ ಸುಮಾರು 19 ಭಾಷೆಗಳ ಚಿತ್ರಗಳಲ್ಲಿ 10,000ಕ್ಕೂ ಅಧಿಕ ಹಾಡುಗಳನ್ನು ಹಾಡುವ ಮೂಲಕ ಓರ್ವ ಶ್ರೇಷ್ಠ ಹಿನ್ನೆಲೆ ಗಾಯಕಿಯಾಗಿ ಜನ ಮಾನಸವನ್ನು ಸೂರೆಗೊಂಡಿದ್ದಾರೆ. ಆರ್.ಎನ್. ಜಯಗೋಪಾಲ್ ನಿರ್ದೇಶನದ 'ಕೆಸರಿನ ಕಮಲ' ಚಿತ್ರದ ಮೂಲಕ (1973), ಇವರನ್ನು ಸುಪ್ರಸಿದ್ಧ ಸಂಗೀತ ನಿರ್ದೇಶಕ ವಿಜಯಭಾಸ್ಕರ್ ಕನ್ನಡ ಚಿತ್ರರಂಗಕ್ಕೆ ಪರಿಚಯಿಸಿದರು.

ಈ ಚಿತ್ರದ 'ನಗು ನೀ ನಗು' ಹಾಡು ವಾಣಿಯವರಿಗೆ ಕನ್ನಡ ಚಿತ್ರರಂಗದಲ್ಲಿ ಭದ್ರ ನೆಲೆ ಒದಗಿಸಿತು. ಅಲ್ಲಿಂದ ಮುಂದೆ ಕನ್ನಡ ಚಿತ್ರರಂಗದ ಪ್ರಮುಖ ಹಿನ್ನೆಲೆ ಗಾಯಕಿಯಾಗಿ ರೂಪುಗೊಂಡ ವಾಣಿ ಜಯರಾಂ, ಎಸ್. ಜಾನಕಿ, ಚಿತ್ರ ಪಿ.ಸುಶೀಲಾರಂತಹ ಅನುಪಮ ಗಾಯಕಿಯರ ಪ್ರಬಲ ಸ್ಪರ್ಧೆಯ ನಡುವೆಯೂ ಶ್ರೇಷ್ಠ ಗಾಯಕಿಯಾಗಿ ಹೊರಹೊಮ್ಮಿದ್ದು ಈಗ ಗತ ಇತಿಹಾಸ.

ವಿಜಯಭಾಸ್ಕರ್ ಸಂಗೀತ ನಿರ್ದೇಶನದ ಬಹುತೇಕ ಚಿತ್ರಗಳಲ್ಲಿ ಹಾಡಿರುವ ವಾಣಿ ಜಯರಾಂ, ರಾಜನ್ ನಾಗೇಂದ್ರ, ಜಿ.ಕೆ.ವೆಂಕಟೇಶ್, ಸತ್ಯಂ, ಎಂ.ರಂಗರಾವ್, ಟಿ.ಜಿ.ಲಿಂಗಪ್ಪ, ಎಮ್.ಎಸ್. ವಿಶ್ವನಾಥನ್, ಕೆ.ವಿ.ಮಹಾದೇವನ್, ವೈದ್ಯನಾಥನ್, ಹಂಸಲೇಖ, ಶಂಕರ್ ಗಣೇಶ್ ಮುಂತಾದ ಸಂಗೀತ ದಿಗ್ಗಜರ ಸಾರಥ್ಯದಲ್ಲಿ ನೆನಪಿನಲ್ಲಿ ಉಳಿಯುವಂತಹ ನೂರಾರು ಹಾಡುಗಳಿಗೆ ಜೀವ ತುಂಬಿದ್ದಾರೆ. ವಾಣಿ ಜಯರಾಂ ಹೆಸರು ಕೇಳುತ್ತಿದ್ದಂತೆಯೇ ಮೈಯೆಲ್ಲಾ ರೋಮಾಂಚನಗೊಂಡು ಅವರ ಸುಮಧುರ ಗೀತೆಗಳೆಲ್ಲಾ ನಮ್ಮ ಸ್ಮೃತಿಯಲ್ಲಿ ಹಾದು ಹೋಗುತ್ತವೆ. ಪುಟ್ಟಣ್ಣ ಕಣಗಾಲ್‌ರವರ ಹಲವಾರು ಚಿತ್ರಗಳಲ್ಲಿ ಹಾಡುರುವ ವಾಣಿ ಜಯರಾಂ, ಪುಟ್ಟಣ್ಣ ಕಣಗಾಲ್‌ರವರ ಫೇವರೇಟ್ ಸಿಂಗರ್ ಆಗಿದ್ದರು. ಅವರ ಹಾಡುಗಳು ಸಂಗೀತ ಪ್ರಿಯರ ಹೃದಯಮುಟ್ಟಿ ಜನಪ್ರಿಯವಾಗಿವೆ. ಅವರು ಹಾಡಿರುವ ಹಾಡುಗಳ ಬಗ್ಗೆ ಹೇಳುತ್ತಾ ಹೋದರೆ ದೊಡ್ಡ ಪಟ್ಟಿಯೇ ಬೇಕಾಗುತ್ತದೆ.

ಡಾ.ರಾಜಕುಮಾರ್, ಡಾ.ಪಿ.ಬಿ.ಶ್ರೀನಿವಾಸ್, ಡಾ.ಎಸ್.ಪಿ. ಬಾಲಸುಬ್ರಹ್ಮಣ್ಯಂ, ಪದ್ಮಶ್ರೀ ಕೆ.ಜೆ.ಯೇಸುದಾಸ್, ಜಯಚಂದ್ರನ್, ಟಿ.ಎಂ.ಸೌಂದರಾಜನ್, ಮಲೇಶಿಯಾ ವಾಸುದೇವನ್ ಮುಂತಾದ ಮಹಾನ್ ಗಾಯಕರ ಜೊತೆ ಹಾಡಿರುವ ವಾಣಿ ಜಯರಾಂ, ಕ್ಲಿಷ್ಟಕರವಾದ ಹಾಗೂ ಸಂಗೀತ ಪ್ರಧಾನವಾದ ಹಾಡುಗಳನ್ನು ಲೀಲಾಜಾಲವಾಗಿ, ಸ್ಪಷ್ಟ ಉಚ್ಚಾರಣೆ ಹಾಗೂ ಮಾಧುರ್ಯಪೂರ್ಣವಾಗಿ ಹಾಡುತ್ತಿದ್ದರು. ಹೀಗಾಗಿಯೇ ಅವರು ಅತಿ ಹೆಚ್ಚು ಬೇಡಿಕೆಯ ಪ್ರಭಾವಶಾಲಿ ಗಾಯಕಿಯಾಗಿ ಹೊರಹೊಮ್ಮಿದರು.

ಭಾರತದ ಅತಿದೊಡ್ಡ ಬ್ಯಾಂಕ್ ಆದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಕೆಲಕಾಲ ಸೇವೆ ಸಲ್ಲಿಸಿದ್ದ ವಾಣಿಯವರು ಜಯರಾಂ ಅವರನ್ನು ವಿವಾಹವಾಗಿದ್ದರು. ಜಯರಾಂ ಅವರು 2018ರಲ್ಲಿ ನಿಧನರಾದ ನಂತರ ಒಂಟಿ ಬದುಕು ಸಾಗಿಸುತ್ತಿದ್ದ ವಾಣಿಯವರಿಗೆ ಸಂತಾನ ಭಾಗ್ಯವಿರಲಿಲ್ಲ. ಆದರೂ ಸಹ ಸಂಗೀತವನ್ನೇ ತಮ್ಮ ಕುಟುಂಬ ಅಷ್ಟೇ ಏಕೆ ಉಸಿರು ಎಂದು ಭಾವಿಸಿದ್ದ ಈ ಮೇರು ಗಾಯಕಿಗೆ ಗೌರವಪೂರ್ವಕ ಶ್ರದ್ಧಾಂಜಲಿ.

– ಕೆ.ವಿ.ವಾಸು, ವಿವೇಕಾನಂದನಗರ, ಮೈಸೂರು.

### ವಿದ್ಯುತ್, ಮನೆ ನೀರಿನ ಶುಲ್ಕಕ್ಕೂ ಶೇ.50ರಷ್ಟು ರಿಯಾಯಿತಿ ನೀಡಲಿ

ಮಾನ್ಯರೆ,

ಈಗಾಗಲೇ ಸಂಚಾರಿ ನಿಯಮಗಳನ್ನು ಉಲ್ಲಂಘಿಸಿರುವ ವಾಹನ ಸವಾರರು, ದಂಡ ವಿಧಿಸಿರುವ ಹಣದಲ್ಲಿ ಶೇ.50 ರಷ್ಟನ್ನು ದಂಡ ಕಟ್ಟಲು ಇದೇ ಫೆ. 11ರ ತನಕ ರಾಜ್ಯ ಸರ್ಕಾರ ಸಮಯ ನೀಡಿದೆ. ರಾಜ್ಯ ಸರ್ಕಾರ ಒಂದು ರೀತಿಯಲ್ಲಿ ಅನುಕೂಲ ಕಲ್ಪಿಸಿದೆ, ಇದಕ್ಕೆ ಮುಖ್ಯ ಕಾರಣರಾದ ಹೈಕೋರ್ಟ್ ನ್ಯಾಯಮೂರ್ತಿಗಳಾದ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರೂ ಆದ ಬಿ.ವೀರಪ್ಪ ಅವರನ್ನು ಅಭಿನಂದಿಸಲೇಬೇಕು.

ಇದಕ್ಕೆ ಸ್ಪಂದಿಸಿ ಸ್ವಯಂ ಪ್ರೇರಿತವಾಗಿ ದಂಡ ಕಟ್ಟುತ್ತಿರುವ ವಾಹನ ಸವಾರರನ್ನು ಸಹ ಅಭಿನಂದಿಸಲೇಬೇಕು. ಈಗಾಗಲೇ ರಾಜ್ಯದಲ್ಲಿ 35 ಕೋಟಿ ರೂಪಾಯಿ ಸ್ವಯಂ ಪ್ರೇರಿತ ದಂಡ ವಸೂಲಿಯಾಗಿರುವುದಾಗಿ ತಿಳಿದು ಬಂದಿದೆ. ಇದು ಒಂದು ರೀತಿಯಲ್ಲಿ ರಾಜ್ಯ ಸರ್ಕಾರಕ್ಕೆ ಆದಾಯವನ್ನು ತಂದು ಕೊಟ್ಟಿದೆ.

ಇದೇ ರೀತಿ ಕಳೆದ ಒಂದು ವರ್ಷದಿಂದ ಬಾಕಿ ಉಳಿಸಿಕೊಂಡಿರುವ, ವಿದ್ಯುತ್ ಮತ್ತು ಮನೆ ನೀರಿನ ಶುಲ್ಕಕ್ಕೂ ಶೇ.50ರಷ್ಟು ರಿಯಾಯಿತಿ ನೀಡಿದರೆ, ಸಾರ್ವಜನಿಕರಿಗೆ ಅನುಕೂಲವಾಗುತ್ತದೆ ಮತ್ತು ಸರ್ಕಾರದ ಬೊಕ್ಕಸಕ್ಕೂ ನೂರಾರು ಕೋಟಿ ರೂಪಾಯಿ ಹಣ ಸಂಗ್ರಹವಾಗುತ್ತದೆ. ಈ ಬಗ್ಗೆ ನ್ಯಾಯಮೂರ್ತಿಗಳು ಚಿಂತಿಸುವಂತಾಗಲಿ.

– ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

### ಗರಿ–ಗುರಿ–ಸರಿ


ಮಾನ್ಯರೆ,

'ಎಂಜಿನಿಯರಿಂಗ್, ಮೆಡಿಕಲ್ ಪಠ್ಯಗಳನ್ನು ಮಾತೃಭಾಷೆಯಲ್ಲಿ ಕಲಿಸಿ' ಎಂದು ಪ್ರಧಾನಿ ಮೋದಿ. (ಮಿತ್ರ: ಜ.23).

ಭೇಷ್; ಶಿಕ್ಷಣದಲ್ಲಿದು ಸರ್ವ ಸಮರ್ಪಕ ಹಾದಿ!
ಮೋದಿ ಮುಕುಟಕ್ಕೆ ಮತ್ತೊಂದು ಬಣ್ಣದ ಗರಿ;
ಎತ್ತರವಾಗಿರುತ್ತವೆ ಎನ್ನಬೇಕು, ಅವರ ಗುರಿ;
(ಗಾಂಧಿ, ಕುವೆಂಪು ಇದ್ದಲ್ಲೇ ಹೇಳುತ್ತಾರೆ:
'ಶೈಕ್ಷಣಿಕವಾಗಿ ಇದು ನಮ್ಮ ಕನಸು: ಸರಿ')

**ಪರಿತಾಪ:** ಚಿರತೆಗಳ ಚಿರಂತನ ಸಮಸ್ಯೆ; ವಿರಳವಾಗಿ ಹುಲಿಗಳ ಹಾವಳಿ; ಆನೆಗಳ ದಾಂಧಲೆ, ಸಾಲದ್ದಕ್ಕೆ ಕಾಡು ನಾಯಿಗಳ ಕಾಟ. ಒಮ್ಮೊಮ್ಮೆ ಊರು ನಾಯಿಗಳದೂ ಆಟೋಪ–ಯಾರು ಕೇಳುತ್ತಾರೆ, ರೈತಾಪಿ ಜನರ ಪರಿತಾಪ?

–ಸಿಪಿಕೆ, ಮೈಸೂರು ದತ್ತಪೀಠ ಆಸ್ಥಾನ್ ವಿದ್ವಾನ್



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ಚಿಂತನೆ

# ನಮ್ಮನ್ನು ನಾವು ಅರಿತಿರಬೇಕು

ಅದೇಕೋ ಇತ್ತೀಚೆಗೆ ಶ್ರಮ ವಹಿಸಿ ದುಡಿಯಬೇಕು ಎಂಬ ಮನೋಭಾವವೇ ಕಡಿಮೆಯಾಗುತ್ತಿದೆ. ಶ್ರಮವೇ ಇಲ್ಲದೆ ಐಷಾರಾಮಿ ಜೀವನವನ್ನು ಬಯಸುವಂತಾಗುತ್ತಿದೆ. ಹೇಗೋ ಓದುವುದು, ಒಂದು ಡಿಗ್ರಿ ಸಂಪಾದಿಸುವುದು, ಒಂದು ಕೆಲಸಕ್ಕೆ ಸೇರುವುದು, ಬರುವ ದುಡ್ಡಿನಲ್ಲಿ ಮೋಜು ಮಾಡುತ್ತಾ ಜೀವನ ಮಾಡುವುದು, ಇದೇ ಜೀವನ ಎಂಬಂತಾಗಿದೆ. ಡಿಗ್ರಿ ಓದುವುದೂ ಶ್ರಮದಾಯಕ ಎಂದು ಅರ್ಧಕ್ಕೆ ವಿದ್ಯಾಭ್ಯಾಸ ಬಿಟ್ಟವರೂ ಬಹಳ ಜನ ಸಿಗುತ್ತಾರೆ. ಇನ್ನು ತಂದೆ ತಾಯಿ ಒಂದಷ್ಟು ಆಸ್ತಿ ಮಾಡಿದ್ದರೆ, ಜೀವನ ಅದನ್ನು ಖರ್ಚು ಮಾಡುವುದರಲ್ಲಿ ಸಾಗಿಬಿಡುತ್ತದೆ. ಅದನ್ನು ಉಳಿಸಬೇಕು, ಅದಕ್ಕೆ ಇನ್ನಷ್ಟು ಸೇರಿಸಬೇಕು, ಒಂದಷ್ಟು ಬದಲಾವಣೆ ತರಬೇಕು, ಸಮಾಜದ ಹಿತಕ್ಕಾಗಿ ಬದುಕಬೇಕು ಎಂಬ ಯಾವ ಆಲೋಚನೆಗಳು ಕಂಡುಬರುತ್ತಿಲ್ಲ. ತಂದೆತಾಯಿ ಆ ಆಸ್ತಿ ಸಂಪಾದಿಸಲು ಅದೆಷ್ಟು ಶ್ರಮ ವಹಿಸಿದ್ದಾರೆ ಎಂಬುದನ್ನೂ ಯೋಚಿಸದಂತಹ ಪರಿಸ್ಥಿತಿ ಉಂಟಾಗುತ್ತಿದೆ. ತಾನೂ ದುಡಿಯಬೇಕು, ದುಡಿದದ್ದನ್ನು ಮಾತ್ರ ತಿನ್ನುವ ಹಕ್ಕು ನನಗಿದೆ ಎಂಬ ಮನೋಭಾವ ಅತೀ ವಿರಳವಾಗುತ್ತಿದೆ. ಬದುಕಿಗೆ ಒಂದು ಅರ್ಥವಿದೆ ಎಂಬುದನ್ನೇ ಮರೆತು ಮಾದಕ ವಸ್ತು ಸೇವಿಸಿದವರಂತೆ ಮತ್ತಿನಲ್ಲಿ ಜೀವನ ಸಾಗಿಸುವಂತಾಗಿದೆ. ನಮ್ಮ ಶಕ್ತಿಯು ಸದ್ಬಳಕೆಯಾಗಬೇಕು ಎಂಬುದು ನಮಗೆ ಅರ್ಥವಾಗುತ್ತಿಲ್ಲ. ಶ್ರಮಪಟ್ಟವನಿಗೆ ಮಾತ್ರ ಶ್ರಮದ ಅರಿವಿರುತ್ತದೆ. ಅಂತಹವರಿಗೆ ದುಡ್ಡಿನ ಮೌಲ್ಯ ಗೊತ್ತಿರುತ್ತದೆ.

**ಇತ್ತೀಚೆಗೆ ಭೇಟಿಯಾದ ಗ್ರಾಮೀಣ ಪ್ರದೇಶದ ಒಬ್ಬರು ಹೇಳಿದ್ದು:** ನಮ್ಮ ಊರಿನ ಇಂದಿನ ಯುವಕರನ್ನು ಕಂಡರೆ ಹೆದರಿಕೆ ಹಾಗೂ ಮರುಕ ಹುಟ್ಟುತ್ತದೆ. ಅವರ ತಂದೆ ಶ್ರಮ ವಹಿಸಿ ಒಂದಷ್ಟು ಜಮೀನು ಮಾಡಿದ್ದರು. ಅದನ್ನು ಸರ್ಕಾರ ಯಾವುದೋ ಕಾರಣಕ್ಕೆ ಭೂಸ್ವಾಧೀನ ಪಡಿಸಿಕೊಂಡಿತು. ಪರಿಹಾರ ಎಂದು ಕೋಟಿಗಟ್ಟಲೆ ಹಣವಂತೂ ಬಂತು. ತಂದೆಗೆ ವಯಸ್ಸಾದ ಕಾರಣ, ಮಗನದ್ದೇ ಕಾರುಬಾರು. ಆ ಹಣವನ್ನು ತಾನೇ ಸಂಪಾದಿಸಿದ್ದು ಎಂಬಂತೆ ಬೈಕ್, ಕಾರು ತೆಗೆದುಕೊಂಡು ಬೆಳಿಗ್ಗೆ ಎದ್ದರೆ ಸಿಟಿಗೆ ಹೊರಡುವುದು, ಅಲ್ಲಿ-ಇಲ್ಲಿ ಅಲೆಯುವುದು, ಹೋಟೆಲ್‌ಗಳಲ್ಲಿ ಬೇಕಾದ್ದನ್ನೆಲ್ಲಾ ತಿನ್ನುವುದು, ರಾತ್ರಿ ಮನೆಗೆ ಬಂದು ಮಲಗುವುದು. ಇದಿಷ್ಟೇ ಅವರ ಕಥೆಯಾಗಿದೆ. ಈ ವಿಚಾರದಲ್ಲಿ ಸ್ವಲ್ಪ ಬುದ್ಧಿ ಹೇಳೋಣ ಎಂದು ಹೋದರೆ, ನನ್ನ ದುಡ್ಡು ನನ್ನ ಇಷ್ಟ, ಕೇಳಲು ನೀನ್ಯಾರು? ಎಂದು ಹೇಳುತ್ತಾ ಮೈಮೇಲೆ ಬೀಳುತ್ತಾರೆ. ಇಂತಹ ಉದಾಹರಣೆಗಳನ್ನು ನಾವು ಸಾಕಷ್ಟು ಕೇಳಿದ್ದೇವೆ. ಆದರೆ ಕೂಡಿಟ್ಟ ಕುಡಿಕೆ ಹಣ ಹೀಗೆ ಖರ್ಚು ಮಾಡಿದರೆ ಎಷ್ಟು ದಿನ ಉಳಿಯಲು ಸಾಧ್ಯ ಹೇಳಿ? ಹಣವೆಲ್ಲಾ ಖರ್ಚಾದ ನಂತರ ಅವರ ಗತಿ ಏನು. ಹಣ ಇರುವವರೆಗೆ ಮೋಜು ಮಾಡಿ, ಕುಡಿದು ದೇಹವನ್ನು ದುರ್ಬಲ ಮಾಡಿಕೊಂಡವರು ಮುಂದೆ ಹೇಗೆ ಜೀವನ ನಡೆಸುತ್ತಾರೆ ಎಂಬುದೇ ಪ್ರಶ್ನೆಯಾಗಿ ಕಾಡುತ್ತದೆ.

ಇದು ಒಂದು ಬಗೆಯಾದರೆ, ಹೇಗೋ ಮಾಡಿ ಒಂದು ಕೆಲಸಕ್ಕೆ ಸೇರಿದವರು, ಕೆಲಸ ಮಾಡುವುದು ಸಂಬಳಕ್ಕಾಗಿ ಮಾತ್ರ ಎಂಬಂತೆ ವರ್ತಿಸುತ್ತಾರೆ. ಅವರ ಮನೋಭಾವ ಕಾಸಿಗೆ ತಕ್ಕ ಕಜ್ಜಾಯ ಎಂಬಂತೆ ಆಗಿರುವುದನ್ನು ಕಾಣಬಹುದು. ತನಗೆ ವಹಿಸಿದ ಕೆಲಸ ಅಥವಾ ಕೆಲಸದ ಅವಧಿ ಪೂರೈಸಿದರೆ ಸಾಕು, ಉಳಿದ ಉಸಾಬರಿ ನನಗೇಕೆ ಎಂಬಂತಹ ವರ್ತನೆಯೇ ಹೆಚ್ಚಾಗಿ ಕಂಡುಬರುತ್ತದೆ. ಇನ್ನು ಕೆಲವರಲ್ಲಿ ತನಗೆ ವಹಿಸಿದ ಕೆಲಸವನ್ನು ಮಾಡದೆ ತಪ್ಪಿಸಿಕೊಂಡಿದ್ದನ್ನು ಹೆಮ್ಮೆಯಿಂದ ಹೇಳಿಕೊಳ್ಳುವ ಮಾತುಗಳು ಬೇರೆ. ಅದನ್ನು ಅವರು ಹಾಗೆ ಮಾಡಿದ್ದು ತಮ್ಮ ಬುದ್ಧಿವಂತಿಕೆ ಎಂದು ಹೇಳಿಕೊಳ್ಳುತ್ತಾರೆ. ಕೆಲಸ ಕದಿಯುವುದು ಅವರಿಗೆ ಹೆಮ್ಮೆಯ ವಿಷಯ!!. ತನ್ನ ಸಂಸ್ಥೆಯ ಮಾಲೀಕರನ್ನು ಇಂತಹವರು ಫೇಸ್ ಮಾಡುವ ಸ್ಥಿತಿಯಲ್ಲಿರದೆ, ತಲೆಮರೆಸಿಕೊಂಡು ಹೋಗುತ್ತಾರೆ. ಕೇಳಿದರೆ ಅವರಿಗೆ ನಮಸ್ಕಾರ ಎಂದರೆ ಅವರು ಇನ್ನಷ್ಟು ಕೆಲಸ ಹೇರಿದರೆ ಏನು ಮಾಡುವುದು ಎಂದು ಹೇಳುತ್ತಾರೆ. ಇಂತಹವರ ಸಂಖ್ಯೆಯೇ ನಮಗೆ ಹೆಚ್ಚಾಗಿ ಕಂಡುಬರುತ್ತದೆ. ಇದಕ್ಕೆ ಬದಲಾಗಿ ತಾನು ಮಾಡುವ ಕೆಲಸವನ್ನು ಮುತುವರ್ಜಿ ವಹಿಸಿ ಮಾಡುವುದು, ತನಗೆ ಕೊಟ್ಟ ಕೆಲಸ ಕಡಿಮೆಯಾಯಿತು, ಇನ್ನಷ್ಟು ಕೆಲಸ ಕೊಡಿ ಎಂದು ಕೇಳಿದರೆ ಹೇಗಿರುತ್ತದೆ!! ಇಂತಹ ಮನೋಭಾವ ಇದ್ದವರು ತನ್ನ ಮಾಲೀಕ ಎದುರಿಗೆ ಬಂದಾಗ ತಾನೇ ಹೋಗಿ ಮಾತನಾಡಿಸುವ ಮನೋಸ್ಥೈರ್ಯ ಹೊಂದಿರುತ್ತಾನೆ. ಸಂಸ್ಥೆಯನ್ನು ಬೆಳೆಸುವ ಬಗ್ಗೆ ಒಂದಷ್ಟು ಸಲಹೆಯನ್ನೂ ಕೊಡಬಹುದು. ಹೀಗೆ ಮಾಡಿದರೆ ಮಾಲೀಕ ನಿಗೆ ಸಂತೋಷವಾಗುವುದಿಲ್ಲವೇ? ಅವರಿಗೆ ಸರಿ ಎನಿಸಿದರೆ ಬಡ್ತಿಯನ್ನೂ ನೀಡಬಹುದು. ಇಂತಹ ಆಲೋಚನೆ ಕಡಿಮೆ ಯಾಗುತ್ತಿರುವುದು ಕಳವಳದ ಸಂಗತಿಯಾಗಿದೆ. ಬದಲಾಗಿ ತಾನು ಹೆಚ್ಚು ಕೆಲಸ ಮಾಡುತ್ತಿರುವುದಾಗಿಯೂ, ಕೆಲಸದ ಹೊರೆ ಹೆಚ್ಚಾಗಿದ್ದು ಜೊತೆಗೆ ಇನ್ನಷ್ಟು ಕೆಲಸಗಾರರಿದ್ದರೆ ಉತ್ತಮ ಎನ್ನುವುದು, ಕೆಲಸದಿಂದ ಪಲಾಯನ ಮಾಡುವ ಸೂತ್ರದಂತೆ ಕಂಡುಬರುತ್ತದೆ.

> ವೇತನಕ್ಕಾಗಿ ಕೆಲಸ ಎಂಬುದು ಸರಿಯಾದರೂ, ವೇತನಕ್ಕೆ ತಕ್ಕ ಕೆಲಸ ಮಾಡಬೇಕು ಎಂಬುದೂ ಅಪೇಕ್ಷೆಯಲ್ಲವೇ? ತನಗೆ ಶಕ್ತಿ ಇದೆ. ಇನ್ನಷ್ಟು ಆ ಕೆಲಸದಲ್ಲಿ ತನ್ನನ್ನು ತೊಡಗಿಸಿಕೊಂಡು ಕೆಲಸ ಮಾಡಬೇಕು ಎಂಬ ಜಾಯಮಾನ ಕಡಿಮೆಯಾಗುತ್ತಿರುವುದು ವ್ಯಸನದ ಸಂಗತಿಯಾಗಿದೆ.

ವೇತನಕ್ಕಾಗಿ ಕೆಲಸ ಎಂಬುದು ಸರಿಯಾದರೂ, ವೇತನಕ್ಕೆ ತಕ್ಕ ಕೆಲಸ ಮಾಡಬೇಕು ಎಂಬುದೂ ಅಪೇಕ್ಷೆಯಲ್ಲವೇ? ತನಗೆ ಶಕ್ತಿ ಇದೆ. ಇನ್ನಷ್ಟು ಆ ಕೆಲಸದಲ್ಲಿ ತನ್ನನ್ನು ತೊಡಗಿಸಿಕೊಂಡು ಕೆಲಸ ಮಾಡಬೇಕು ಎಂಬ ಜಾಯಮಾನ ಕಡಿಮೆಯಾಗುತ್ತಿರುವುದು ವ್ಯಸನದ ಸಂಗತಿಯಾಗಿದೆ.

ಈಗ್ಗೆ ಒಂದೆರಡು ದಶಕಗಳ ಹಿಂದೆ ಈಗಿನಂತೆ ಬೈಕ್, ಸ್ಕೂಟರ್‌ಗಳು ಕಡಿಮೆಯಿದ್ದ ಸಮಯ. ಆ ಸಮಯದಲ್ಲಿ ಮೊಪೆಡ್‌ಗಳದ್ದೇ ಕಾರುಬಾರು. ಅಂತಹ ಸಮಯದಲ್ಲಿ ನಡೆದ ಒಂದು ಘಟನೆಯನ್ನು ನೆನಪಿಸಿಕೊಳ್ಳಬಯಸುತ್ತೇನೆ. ಅದೊಂದು ಮೊಪೆಡ್ ತಯಾರಿಕಾ ಕಂಪನಿ. ಅಲ್ಲಿ ಸುಮಾರು 500 ಜನ ಕಾರ್ಮಿಕರಿದ್ದರು. ತಿಂಗಳಿಗೆ ಐದು ಸಾವಿರ ಮೊಪೆಡ್‌ಗಳು ತಯಾರಾಗುತ್ತಿದ್ದವು. ಮ್ಯಾನೇಜ್‌ಮೆಂಟ್‌ನವರು ಒಮ್ಮೆ ಅಲ್ಲಿನ ಕೆಲಸಗಾರರ ಸಂಘದವರನ್ನು ಕರೆದು ಮುಂದಿನ ತಿಂಗಳಿಂದ ಐದು ಸಾವಿರದ ಬದಲಾಗಿ ಆರು ಸಾವಿರ ಮೊಪೆಡ್ ಉತ್ಪಾದಿಸಬೇಕು ಎಂದರು. ಇದಕ್ಕೆ ಕಾರ್ಮಿಕರು ಒಪ್ಪಲಿಲ್ಲ. ಒಂದೇ ಸಲಕ್ಕೆ ಒಂದು ಸಾವಿರ ಮೊಪೆಡ್ ಹೆಚ್ಚಾಗಿ ತಯಾರಿಸಲು ಹೇಗೆ ಸಾಧ್ಯ. ಹೆಚ್ಚಿನ ಜನರನ್ನು ನೇಮಕ ಮಾಡಿಕೊಳ್ಳಲು ಮ್ಯಾನೇಜ್‌ಮೆಂಟ್ ತಯಾರಿಲ್ಲ. ಇರುವ ಕಾರ್ಮಿಕರೇ ಇನ್ನೂ ಒಂದು ಸಾವಿರ ಮೊಪೆಡ್ ಹೇಗೆ ತಯಾರಿಸಲು ಸಾಧ್ಯ. ಹಾಗೆ ಮಾಡಿದರೆ ಮಾಲೀಕರಿಗೆ ಲಾಭ ಅಷ್ಟೆ. ಇದರಿಂದ ಕಾರ್ಮಿಕರಿಗೆ ಏನು ಸಿಗುತ್ತದೆ. ಹೀಗೆ ನಾನಾ ಕುಚೇಷ್ಟೆ ತೋರಿದರು. ಅದಕ್ಕೆ ಮ್ಯಾನೇಜ್‌ಮೆಂಟ್ ನಿಮಗೆ ಹೆಚ್ಚುವರಿ ಸಂಬಳ ಕೊಡುವುದಿಲ್ಲ ಎಂದು ಯಾರು ಹೇಳಿದರು? ಮುಂದಿನ ತಿಂಗಳಿಂದ ಗುರಿಯಂತೆ 6000 ಮೊಪೆಡ್ ಉತ್ಪಾದನೆಯಾದರೆ ಪ್ರತಿ ಕೆಲಸಗಾರನಿಗೆ ತಿಂಗಳಿಗೆ ಐದು ನೂರು ರೂಪಾಯಿ ಸಂಬಳ ಹೆಚ್ಚು ನೀಡಲಾಗುವುದು. (ಆಗ ಐದು ನೂರು ರೂಪಾಯಿ ದೊಡ್ಡ ಮೊಬಲಗೇ ಆಗಿತ್ತು) ಅಲ್ಲದೆ ಹೊರಬರುವ ಹೆಚ್ಚುವರಿ ಸಾವಿರ ಮೊಪೆಡ್‌ಗಳಲ್ಲಿ ಐದು ನೂರನ್ನು ಕಾರ್ಮಿಕರಿಗೆ ಗಿಫ್ಟ್ ರೂಪದಲ್ಲಿ ನೀಡಲಾಗುವುದು. ಆದರೆ ಈ ಗಿಫ್ಟ್ ಒಂದು ಬಾರಿ ಮಾತ್ರ ಎಂದರು. ಇದಕ್ಕೆ ಒಂದಷ್ಟು ಷರತ್ತನ್ನೂ ಹಾಕಿದರು. ಹೆಚ್ಚು ಜನರನ್ನು ನೇಮಿಸಿಕೊಳ್ಳುವುದಿಲ್ಲ, ಓವರ್‌ಟೈಮ್ ಕೊಡುವುದಿಲ್ಲ, ತಯಾರಿಕಾ ಗುಣಮಟ್ಟದಲ್ಲಿ ಯಾವುದೇ ರಾಜೀ ಇಲ್ಲ, ಉಚಿತವಾಗಿ ನೀಡುವ ಮೊಪೆಡ್ ಒಂದು ಬಾರಿ ಮಾತ್ರ. ಅದೂ 6000 ಮೊಪೆಡ್ ಹೊರಬಂದರೆ. 5999 ಆದರೂ ಈ ಕೊಡುಗೆ ಇಲ್ಲ. ಈ ತಿಂಗಳು ಆಗದೆ, ಮುಂದಿನ ತಿಂಗಳು ಗುರಿತಲುಪಿ ಉಚಿತ ಮೊಪೆಡ್ ಕೇಳಿದರೆ ಕೊಡಲಾಗದು. ಈ ಗುರಿ ಮುಟ್ಟುವ ಧಾವಂತದಲ್ಲಿ ಯಾರೂ ಜೀವಕ್ಕೆ ಅಪಾಯ ತಂದುಕೊಳ್ಳುವಂತಿಲ್ಲ ಎಂದು ಮ್ಯಾನೇಜ್‌ಮೆಂಟ್ ಹೇಳಿತು. ಕಾರ್ಮಿಕ ಸಂಘದವರು ಈ ಆಫರ್ ಬಗ್ಗೆ ಚರ್ಚಿಸಿದರು. ಅವರಿಗೆ ಸಂಬಳ ಜಾಸ್ತಿ ಸಿಗುವುದು, ಈಗ ದುಡ್ಡಿದ್ದವರಿಗೇ ಸರಿಯಾಗಿ ಮೊಪೆಡ್ ದೊರಕುತ್ತಿಲ್ಲ, ಆದರೆ ನಮಗೆ ಸಿಗಲಿದೆ, ಅದೂ ಉಚಿತವಾಗಿ. ಈ ಮೊಪೆಡನ್ನು ನಮಗೆ ಬೇಡವಾದರೆ ಮಾರಿ ಹಣ ಮಾಡಿಕೊಳ್ಳಬಹುದು ಎಂದು ಯೋಚಿಸಿ ಒಪ್ಪಿಗೆ ಸೂಚಿಸಿದರು.

ಹೀಗೆ ಒಪ್ಪಿಗೆ ನೀಡಿ ಮುಂದಿನ ತಿಂಗಳಿಂದ ನಾವೆಲ್ಲಾ ಶ್ರಮಪಟ್ಟು ದುಡಿಯೋಣ ಎಂದು ತಮ್ಮಲ್ಲೇ ತೀರ್ಮಾನಿಸಿದರು. ಎಲ್ಲಾ ಹಂತದ ಕೆಲಸಗಾರರೂ ತಮ್ಮ ತಮ್ಮ ಕೆಲಸದಲ್ಲಿ ಶ್ರದ್ಧೆಯಿಂದ ದುಡಿದು, ಗುರಿ ತಲುಪಲು ತೀರ್ಮಾನಿಸಿದರು. ಯಾರೂ ಓವರ್‌ಟೈಮ್ ಮಾಡಲಿಲ್ಲ, ಸಮಯ ವ್ಯರ್ಥ ಮಾಡಲಿಲ್ಲ, ಊಟದ ವಿರಾಮವನ್ನೂ ತಾವೇ ಕಡಿತಗೊಳಿಸಿಕೊಂಡರು. ಸಮಯ ಎಲ್ಲೂ ವ್ಯರ್ಥವಾಗದಂತೆ ನೋಡಿಕೊಂಡರು. ಯಾರಿಗೂ ಮತ್ತೊಬ್ಬರು ಕೆಲಸ ಹೇಳಲೇ ಅವಕಾಶವಾಗಲಿಲ್ಲ. ಎಲ್ಲರೂ ಶ್ರಮವಹಿಸಿ ದುಡಿದರು. ಆ ತಿಂಗಳ ಕೊನೆಯಲ್ಲಿ ಮೊಪೆಡ್ ತಯಾರಿಕೆ 6000 ಗಡಿ ದಾಟಿತು. ಇದಕ್ಕಾಗಿ ಮಾಲೀಕರು ತಮ್ಮ ಮಾತಿನಂತೆ ಹೆಚ್ಚುವರಿ ವೇತನ, ಎಲ್ಲರಿಗೂ ಒಂದೊಂದು ಮೊಪೆಡ್, ಪ್ರಶಂಸನಾ ಪತ್ರ ನೀಡಿ ಮಾತನಾಡುತ್ತಾ, ನಿಮ್ಮ ಶ್ರಮಕ್ಕೆ ನಾನು ಬೆಲೆ ಕಟ್ಟಲಾರೆ. ನಿಮಗೆ ಸಂಬಳ ಹಾಗೂ ಮೊಪೆಡ್ ಉಚಿತವಾಗಿ ನೀಡಿದ್ದು, ಇದೆಲ್ಲವೂ ನಮ್ಮ ಒಂದು ಸಣ್ಣ ಕಾಣಿಕೆ ಅಷ್ಟೆ. ಕೆಲಸದಲ್ಲಿ ಯಾವುದೇ ಬದಲಾವಣೆ ಇಲ್ಲದಿದ್ದರೂ ನೀವು ಗುರಿ ಸಾಧಿಸಿದ್ದೀರಿ. ನಾವು –ನೀವು ಇದಕ್ಕಾಗಿ ಮಾಡಿದ್ದು 'ಅನಗತ್ಯ ಸಮಯ ವ್ಯಯವನ್ನು ನಿಲ್ಲಿಸಿದ್ದು ಅಷ್ಟೇ'. ಮುಂದಿನ ತಿಂಗಳಿಂದ ನಿಮ್ಮ ಸಾಮಾನ್ಯ ಗುರಿ ಆರು ಸಾವಿರ ಮೊಪೆಡ್‌ಗಳಾಗಿರುತ್ತದೆ ಎಂದು ಹೇಳಿದರು. ಅನಂತರ ಆ ಕಂಪನಿಯ ಉತ್ಪನ್ನ ಏರಿಕೆಯಾಯಿತು. ಇದು ಘಟನೆಯಾಗಿರಬಹುದು ಅಥವಾ ಕಥೆಯಂತೆ ನಿಮಗೆ ಅನ್ನಿಸಿರಬಹುದು. ಆಗಿರಬಹುದು. ಆದರೆ ಇದು ವಾಸ್ತವ ಸಂಗತಿ. ನಾವು ಮನಸ್ಸು ಮಾಡಿದರೆ, ಸಮಯ ವ್ಯರ್ಥ ಮಾಡಬಾರದೆಂದು ತೀರ್ಮಾನಿಸಿದರೆ ನಮ್ಮ ಶಕ್ತಿ ಮತ್ತಷ್ಟು ವೃದ್ಧಿಸುತ್ತದೆ. ಅದರಿಂದ ನಾವು ಕೆಲಸ ಮಾಡುವ ಸಂಸ್ಥೆಯ ಜೊತೆಗೆ ನಮಗೂ ಅನುಕೂಲವಾಗುತ್ತದೆ ಎಂಬುದು ಇದರ ಸಾರಾಂಶ.

ಇದು ನಮ್ಮ ಆಂತರಿಕ ಶಕ್ತಿ ಎಷ್ಟೆಂದು ನಮಗೆ ಪರಿಚಯ ಮಾಡಿಕೊಡುತ್ತದೆ. ಇದನ್ನು ಪ್ರತಿಫಲಾಪೇಕ್ಷೆ ಇಲ್ಲದೆ ಮಾಡಿದಾಗ ಎಲ್ಲರಿಗೂ ಲಾಭವಾಗುತ್ತದೆ.

ಇತ್ತೀಚೆಗೆ ನಡೆದ ಗಣರಾಜ್ಯೋತ್ಸವ ಸಂದರ್ಭದಲ್ಲಿ ಓರ್ವ ಹಿರಿಯ ಅಧಿಕಾರಿ ತಮ್ಮ ಅಧೀನ ಸಿಬ್ಬಂದಿಯನ್ನು ಕುರಿತು ಮಾತನಾಡುತ್ತಾ "ಈ ಧ್ವಜದ ಕೆಳಗೆ ನಾವೆಲ್ಲರೂ ಸಮಾನರು. ನಮಗೆ ನಮ್ಮದೇ ಆದ ಜವಾಬ್ದಾರಿಗಳಿವೆ. ಅದರಲ್ಲಿ ಯಾರೂ ಮೇಲು ಕೀಳು ಎಂಬುದಿಲ್ಲ. ನಾವೆಲ್ಲಾ ನಮ್ಮ ನಮ್ಮ ಕೆಲಸವನ್ನು ನಿಷ್ಠೆಯಿಂದ ಮಾಡಿದರೆ ಫಲಾನುಭವಿಗಳು ನಮ್ಮನ್ನು ಇಷ್ಟಪಡುತ್ತಾರೆ ಹಾಗೂ ಹರಸುತ್ತಾರೆ. ಅಂತಹ ಕೆಲಸವನ್ನು ನಾವೆಲ್ಲಾ ಮಾಡೋಣ" ಎಂದರು. ಎಷ್ಟು ಅರ್ಥಗರ್ಭಿತವಾದ ಮಾತುಗಳಿವು. ನಮಗೆ ವಹಿಸಿದ ಕೆಲಸ ಕನಿಷ್ಠವೂ ಅಲ್ಲ, ಗರಿಷ್ಠವೂ ಅಲ್ಲ. ಆದರೆ ನಮ್ಮ ಪಾಲಿನ ಕೆಲಸವನ್ನು ನಿಷ್ಠೆಯಿಂದ ಮಾಡಿದರೆ, ಕೆಲಸ ಮಾಡಿದ ತೃಪ್ತಿ ಹಾಗೂ ಸಂತೋಷ ದೊರಕುತ್ತದೆ. ಇದಕ್ಕಾಗಿ ನಾವು ಹೆಚ್ಚು ಶ್ರಮ ವಹಿಸಬೇಕಾಗಿಲ್ಲ. ಮಾಡುವ ಕೆಲಸವನ್ನು ಮನಸ್ಸಿಟ್ಟು ಮಾಡಿದರಾಯಿತು. ನಮಗೆ ನೀಡುವ ಕೆಲಸವನ್ನು ಅಳೆದು ತೂಗಿಯೇ ನಿರ್ಧರಿಸಲಾಗಿರುತ್ತದೆ. ಅದಕ್ಕೆ ತಕ್ಕಂತೆ ಕೆಲಸ ಮಾಡಿದರಾಯಿತು. ಅಂತಹ ಮನೋಭಾವ ಇಂದಿನ ಅವಶ್ಯಕತೆಯಾಗಿದೆ.

# ವಿಶ್ವ ಕ್ಯಾನ್ಸರ್ ದಿನಾಚರಣೆ: ಹೋಪ ಥಾನ್ ಮೊಬೈಲ್ ಟಾರ್ಚ್‌ಲೈಟ್ ಪರೇಡ್ ಜಾಗೃತಿ

ಮೈಸೂರು,ಫೆ.5(ಜಿಎ)–ವಿಶ್ವ ಕ್ಯಾನ್ಸರ್ ದಿನಾಚರಣೆ ಅಂಗವಾಗಿ ಭಾರತ್ ಆಸ್ಪತ್ರೆ, ಇನ್‌ಸ್ಟಿಟ್ಯೂಟ್ ಆಫ್ ಅಂಕಾಲಜಿ ಹಾಗೂ ಸೈಕಲ್ ಪ್ಯೂರ್ ಅಗರಬತ್ತಿ ಸಹಯೋಗದೊಂದಿಗೆ ನಗರದ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನ ಮುಂಭಾಗ ಆಯೋಜಿಸಿದ್ದ 'ಹೋಪ ಥಾನ್' ಮೊಬೈಲ್ ಟಾರ್ಚ್‌ಲೈಟ್ ಪರೇಡ್‌ಗೆ ಸೈಕಲ್ ಪ್ಯೂರ್ ಅಗರಬತ್ತಿಯ ವ್ಯವಸ್ಥಾಪಕ ನಿರ್ದೇಶಕ ಅರ್ಜುನ್ ರಂಗ ಚಾಲನೆ ನೀಡಿದರು.



ನಂತರ ಮಾತನಾಡಿದ ಅವರು, ವಿಶ್ವ ಕ್ಯಾನ್ಸರ್ ದಿನಾಚರಣೆಯ ಅರಿವು ಮೂಡಿಸಲು ಮೈಸೂರಿನ ವಿವಿಧ ಕಾಲೇಜಿನ ವಿದ್ಯಾರ್ಥಿಗಳು ಸೇರಿಕೊಂಡಿದ್ದು, ನೀವೆಲ್ಲರೂ ನಮ್ಮ ದೇಶದ ಭವಿಷ್ಯವೇ ಆಗಿದ್ದೀರಿ. ಈಗಿನಿಂದಲೇ ನಿಮ್ಮ ಜೀವನ ಶೈಲಿ ಬದಲಿಸಿಕೊಂಡರೆ, ಕ್ಯಾನ್ಸರ್‌ನಿಂದ ಮುಕ್ತಿ ಹೊಂದಬಹುದಾಗಿದೆ. ಇದರಿಂದ ಭಾರತ ಇನ್ನೂ ಹತ್ತು ವರ್ಷಗಳಲ್ಲಿ ಅನೇಕ ಬದಲಾವಣೆಗಳನ್ನು ಕಾಣಲಿದೆ ಎಂದರು.

ಈ ವೇಳೆ ಭಾರತ್ ಆಸ್ಪತ್ರೆ, ಇನ್‌ಸ್ಟಿಟ್ಯೂಟ್ ಆಫ್ ಅಂಕಾಲಜಿ ಹಾಗೂ ಹೆಚ್‌ಸಿಜಿ ಆಸ್ಪತ್ರೆಯ ಛೇರ್ಮನ್ ಡಾ.ಅಜಯ್‌ಕುಮಾರ್ ಮಾತನಾಡಿ, ನಮ್ಮ ದೇಶವು ಜನಸಂಖ್ಯೆಯಲ್ಲಿ ಇತರ ದೇಶಗಳಿಗಿಂತ ಮುಂಚೂಣಿಯಲ್ಲಿ ಸಾಗುವಂತೆ ಕ್ಯಾನ್ಸರ್‌ನಲ್ಲಿಯೂ ಮುನ್ನುಗ್ಗುತ್ತಿದೆ. ಇದಕ್ಕೆ ಮುಖ್ಯ ಕಾರಣ ಜೀವನ ಶೈಲಿಯೇ ಆಗಿದೆ ಎಂದರು.

2022ರಲ್ಲಿ 14.16 ಲಕ್ಷ ಜನರಲ್ಲಿ ಕ್ಯಾನ್ಸರ್ ಕಾಣಿಸಿಕೊಂಡಿದೆ. ದೇಶದಲ್ಲಿ ಸಾವಿಗೆ ಕ್ಯಾನ್ಸರ್ ಪ್ರಮುಖ ಕಾರಣವಾಗಿದ್ದು, 2018 ರಿಂದ 22ರ ಅವಧಿಯಲ್ಲಿ 22 ಲಕ್ಷ ಮಂದಿ ಕ್ಯಾನ್ಸರ್‌ನಿಂದ ಸಾವನ್ನಪ್ಪಿದ್ದಾರೆ. 2025ರ ವೇಳೆಗೆ ಭಾರತದಲ್ಲಿ 29 ಲಕ್ಷ ಜನರು ಕ್ಯಾನ್ಸರ್‌ಗೆ ತುತ್ತಾಗುವ ಸಾಧ್ಯತೆ ಇದೆ. ತಂಬಾಕು ಬಳಕೆ ಮಾಡುವವರಲ್ಲಿ ಹೆಚ್ಚು ಕಾಣಿಸಿಕೊಳ್ಳುತ್ತಿದ್ದು, ಭಾರತದಲ್ಲಿ ಪ್ರತಿಗಂಟೆಗೆ 150 ಹಾಗೂ ಪ್ರತಿ ದಿನಕ್ಕೆ 3,500 ಜನರು ಧೂಮಪಾನದಿಂದ ಸಾವಿಗೆ ತುತ್ತಾಗುತ್ತಿದ್ದಾರೆ.

ತಂಬಾಕು ನಿಯಂತ್ರಣದಿಂದ ಯಾವುದೇ ಪ್ರಯೋಜನವಾಗುವುದಿಲ್ಲ. ಅದರ ಬದಲು ತಂಬಾಕು ನಿಷೇಧವಾದರೆ ಮಾತ್ರ ಸಮಸ್ಯೆಗೆ ಪರಿಹಾರ ದೊರಕಲಿದೆ. ನ್ಯೂಜಿಲ್ಯಾಂಡ್‌ನಲ್ಲಿ ಈಗಾಗಲೇ ತಂಬಾಕು ಸೇವನೆ ಮಾಡುವವರಿಗೆ ವಯೋಮಿತಿಯನ್ನು ಹೆಚ್ಚಿಸಿರುವ ಮಾದರಿಯಲ್ಲಿಯೇ ಭಾರತದಲ್ಲಿಯೂ ಇದನ್ನು ಅನುಸರಿಸಬೇಕಿದೆ ಎಂದು ಒತ್ತಾಯಿಸಿದರು.

ಇದಕ್ಕೂ ಮುನ್ನ ವೇದಿಕೆಯಲ್ಲಿ ಯೋಗ, ಸಾಹಸ ಕಲೆ ಹಾಗೂ ಜೂಬಾ ಡಾನ್ಸ್ ಮೂಲಕ ವಿವಿಧ ಸಂಸ್ಥೆಯವರು ಆರೋಗ್ಯದ ಬಗ್ಗೆ ಅರಿವು ಮೂಡಿಸಿದರು. ನಗರದ ಕೋಟೆ ಆಂಜನೇಯ ಸ್ವಾಮಿ ದೇವಾಲಯದಿಂದ ಆರಂಭವಾದ 'ಹೋಪ ಥಾನ್' ಮೊಬೈಲ್ ಟಾರ್ಚ್‌ಲೈಟ್ ಪರೇಡ್‌ನಲ್ಲಿ ಮೈಸೂರಿನ ವಿವಿಧ ಕಾಲೇಜು ವಿದ್ಯಾರ್ಥಿಗಳು ಕ್ಯಾನ್ಸರ್ ಕುರಿತಾದ ಪ್ಲೇಕಾರ್ಡ್ ಹಿಡಿದು ಜಯಚಾಮ ವೃತ್ತ ಮೂಲಕ ಸಾಗಿ ಹಾರ್ಡಿಂಜ್ ವೃತ್ತದ ತಲುಪಿ ನಂತರ ನಗರದ ಪುರಭವನದಲ್ಲಿ ಪರೇಡ್ ಮುಕ್ತಾಯಗೊಳಿಸಿದರು. ಕಾರ್ಯಕ್ರಮದಲ್ಲಿ ಭಾರತ್ ಆಸ್ಪತ್ರೆಯ ಡಾ.ವೈ.ಎಸ್.ಮಾಧವಿ, ನಿರ್ಮಲಾ ಕೆ. ಮೂರ್ತಿ ಇನ್ನಿತರರು ಉಪಸ್ಥಿತರಿದ್ದರು.

## ಬ್ಲಡ್ ಕ್ಯಾನ್ಸರ್‌ಗೆ ಪ್ರಾಥಮಿಕ ಹಂತದಲ್ಲೇ ಚಿಕಿತ್ಸೆ ಉಪಯುಕ್ತಕಾರಿ

ಮೈಸೂರು, ಫೆ.5(ಎಂಟಿವೈ)– ರಕ್ತ ಕ್ಯಾನ್ಸರ್‌ನಲ್ಲಿನ ರೋಗ ನಿರೋಧಕ ಚಿಕಿತ್ಸೆ ಕುರಿತಂತೆ ಅನೇಕ ಕಟ್ಟುಕತೆಗಳಿದ್ದು, ಸತ್ಯಸಂಗತಿ ಕುರಿತು ರೋಗಿಗಳು ಹಾಗೂ ಸಾರ್ವಜನಿಕರು ಅರಿತುಕೊಳ್ಳಬೇಕಾದ ಅಗತ್ಯವಿದೆ ಎಂದು ಮಣಿಪಾಲ್ ಆಸ್ಪತ್ರೆಯ ರಕ್ತಶಾಸ್ತ್ರ ವಿಭಾಗದ ಡಾ.ಎಂ.ಗಿರಿಪುಂಜ ಅಭಿಪ್ರಾಯಪಟ್ಟಿದ್ದಾರೆ.

ಕ್ಯಾನ್ಸರ್ ದಿನಾಚರಣೆ ಅಂಗವಾಗಿ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆಲವೊಮ್ಮೆ ಕ್ಯಾನ್ಸರ್ ಚಿಹ್ನೆಗಳು ಪತ್ತೆಯಾಗದಿರಬಹುದು. ಈ ಕುರಿತು ಮುಂಜಾಗರೂಕತೆ ಹಾಗೂ ಸೂಕ್ತ ತಪಾಸಣೆ ಅತ್ಯಗತ್ಯವಾಗಿದೆ. ದೀರ್ಘ ಸಮಯ ಜ್ವರದಿಂದ ಬಳಲುವುದು, ದಿಢೀರನೆ ತೂಕ ಇಳಿಕೆಯಾಗುವುದು, ಅತೀವ ಬಳಲಿಕೆ, ರಾತ್ರಿ ಬೆವರುವಿಕೆ, ರಕ್ತಸ್ರಾವದ ಚಿಹ್ನೆ, ತೀವ್ರ ಸ್ವರೂಪದ ಬೆನ್ನು ಮತ್ತು ಮೂಳೆ ನೋವು ಕಾಣಿಸಿಕೊಂಡಲ್ಲಿ ಅಂತಹವರು ಕೂಡಲೇ ಎಚ್ಚೆತ್ತು ತಪಾಸಣೆ ಮಾಡಿಸಿಕೊಳ್ಳಬೇಕು. ಒಂದು ವೇಳೆ ರಕ್ತದ ಕ್ಯಾನ್ಸರ್ ಇದ್ದಲ್ಲಿ ಸೂಕ್ತ ಚಿಕಿತ್ಸೆ ನೀಡಲು ಅನುಕೂಲವಾಗುತ್ತದೆ ಎಂದರು.

ರಕ್ತ ಕ್ಯಾನ್ಸರ್ ಸಮಸ್ಯೆಯಿಂದ ಬಳಲುತ್ತಿರುವವರಿಗೆ ಕಿಮೋ ಥೆರಪಿ ಅಥವಾ ಏಕರೂಪದ ಏಜೆಂಟ್ ಚಿಕಿತ್ಸೆ ಬಳಸಲಾಗುತ್ತಿದೆ. ಇದರ ಅಡ್ಡ ಪರಿಣಾಮಗಳು ಕನಿಷ್ಠ ಅವಧಿಗೆ ಮಾತ್ರ ಇರುತ್ತವೆ. ಅಲ್ಲದೆ, ದೇಹದಲ್ಲಿನ ಆರೋಗ್ಯಕರ ಅಂಗಾಂಶಗಳಿಗೆ ಯಾವುದೇ ಸಂಭವನೀಯ ಹಾನಿಯುಂಟಾಗುವುದನ್ನು ತಪ್ಪಿಸಬಹುದಾಗಿದೆ. ಇದರೊಡನೆ ಕೂದಲು ಉದುರುವಿಕೆ ಸಮಸ್ಯೆ ಕಾಣಿಸಿಕೊಳ್ಳುವುದಿಲ್ಲ ಎಂದು ವಿವರಿಸಿದರು.

ಆಸ್ಪತ್ರೆಯ ವೈದ್ಯಕೀಯ ಸೇವೆಗಳ ಮುಖ್ಯಾಧಿಕಾರಿ ಡಾ.ಉಪೇಂದ್ರ ಶೆಣೈ ಮಾತನಾಡಿ, ತಮ್ಮ ಆಸ್ಪತ್ರೆಯಲ್ಲಿ ವಿಶೇಷ ಎಂಬಂತೆ ರಕ್ತ ವಿಜ್ಞಾನ ವಿಭಾಗವಿದ್ದು, ನಗರ ಹಾಗೂ ಸುತ್ತಮುತ್ತಲ ಅನೇಕ ರೋಗಿಗಳಿಗೆ ಸೇವೆ ನೀಡಲಾಗುತ್ತಿದೆ. ಇನ್ನು, ಆರಂಭಿಕ ಹಂತದಲ್ಲಿಯೇ ರಕ್ತ ಕ್ಯಾನ್ಸರ್ ಪತ್ತೆ ಹಚ್ಚಿದಲ್ಲಿ ಚಿಕಿತ್ಸೆ ಸುಲಭ ಎಂದರು.

*Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com*

# ಚಾಮರಾಜ ಕ್ಷೇತ್ರದ ಟಿಕೆಟ್ ನನಗೆ ಸಿಗುವ ವಿಶ್ವಾಸವಿದೆ

## ಕಾಂಗ್ರೆಸ್ ಪ್ರಬಲ ಆಕಾಂಕ್ಷಿ ಕೆ.ಹರೀಶ್‌ಗೌಡ

ಮೈಸೂರು, ಫೆ.5–ಚಾಮರಾಜ ಕ್ಷೇತ್ರದಲ್ಲಿ ಸ್ಪರ್ಧಿಸಲು ತಮಗೆ ಟಿಕೆಟ್ ದೊರೆಯುವ ವಿಶ್ವಾಸವಿದೆ ಎಂದು ಕಾಂಗ್ರೆಸ್ ಟಿಕೆಟ್ ಪ್ರಬಲ ಆಕಾಂಕ್ಷಿ ಕೆ.ಹರೀಶ್‌ಗೌಡ ತಿಳಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯ್ಲಿಯವರು ಮಾಜಿ ಶಾಸಕ ವಾಸು ಅವರಿಗೆ ಟಿಕೆಟ್ ಕೊಡುತ್ತೇವೆ ಎಂದೇನೂ ಹೇಳಿಲ್ಲ. ಗೆಲ್ಲುವ ಅಭ್ಯರ್ಥಿಗೆ ಟಿಕೆಟ್ ಕೊಡುತ್ತೇವೆ ಎಂದಷ್ಟೇ ಹೇಳಿದ್ದಾರೆ ಎಂದರು. ವಾಸು ಅವರಿಗೆ ಟಿಕೆಟ್ ಕೇಳುವುದು ಮೊಯ್ಲಿಯವರ ಧರ್ಮ. ಹೀಗಾಗಿ ವಾಸು ಅವರಿಗೇ ಟಿಕೆಟ್ ಸಿಗುತ್ತದೆ ಎಂದು ಅವರು ಹೇಳಿದ್ದಾರೆ. ಅದೇ ರೀತಿ ಕಳೆದ ತಿಂಗಳು ಮೈಸೂರಿಗೆ ಆಗಮಿಸಿದ್ದ ಜಮೀರ್ ಅಹಮದ್ ಅವರು ನನಗೆ (ಕೆ.ಹರೀಶ್‌ಗೌಡ) ಟಿಕೆಟ್ ಸಿಗುತ್ತದೆ. ಹರೀಶ್‌ಗೌಡರು ಗೆದ್ದೇ ಗೆಲ್ಲುತ್ತಾರೆ. ನಮ್ಮದು ಹೈಕಮಾಂಡ್ ಪಕ್ಷ. ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಮತ್ತು ಖರ್ಗೆ ಅವರು ಹರೀಶ್‌ಗೌಡರಿಗೆ ಟಿಕೆಟ್ ಕೊಡಿಸುತ್ತಾರೆ ಎಂದು ಹೇಳಿದ್ದರು. ಅದು ಅವರ ಅಭಿಪ್ರಾಯ. ಅದೇ ರೀತಿ ಮೊಯ್ಲಿಯವರೂ ಕೂಡ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ಎಂದರು.

ಎಐಸಿಸಿ ಮತ್ತು ಕೆಪಿಸಿಸಿ ಕ್ಷೇತ್ರದ ಸಮೀಕ್ಷೆ ನಡೆಸಿದೆ. ಈ ಸಮೀಕ್ಷೆಯಲ್ಲಿ ನನಗೆ ಉತ್ತಮ ವಾತಾವರಣವಿರುವುದಾಗಿ ವರದಿ ಬಂದಿದೆ ಎಂದು ನನಗೆ ತಿಳಿದಿದೆ. ಪಕ್ಷಾತೀತವಾಗಿ, ಜಾತ್ಯಾತೀತವಾಗಿ ಮತದಾರರು ನನ್ನ ಪರ ಒಲವು ಹೊಂದಿದ್ದಾರೆ. ಹೀಗಾಗಿ ನನಗೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮತ್ತು ಎಐಸಿಸಿ ಅಧ್ಯಕ್ಷ ಖರ್ಗೆ ಅವರು ಅವಕಾಶ ನೀಡುತ್ತಾರೆ ಎಂಬ ವಿಶ್ವಾಸವಿದೆ ಎಂದರು.

ಮೂಲ ಮತ್ತು ವಲಸೆ ಕಾಂಗ್ರೆಸ್ಸಿಗರು ಎಂಬ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ವಾಸು ಅವರು ಎರಡು ಬಾರಿ ಪರಾಭವಗೊಂಡಿದ್ದರು. ಸಿದ್ದರಾಮಯ್ಯ ಅವರೊಂದಿಗೆ ಜನತಾ ಪರಿವಾರದಿಂದ ಕಾಂಗ್ರೆಸ್‌ಗೆ ಬಂದ ಮಾಜಿ ಮೇಯರ್‌ಗಳಾದ ಧ್ರುವಕುಮಾರ್, ಅನಂತು, ನಾರಾಯಣ, ಮಾಜಿ ಕಾರ್ಪೊರೇಟರ್ ಶಿವಣ್ಣ ಮುಂತಾದವರು ಕೆಲಸ ಮಾಡಿದ ಪ್ರತಿಫಲವಾಗಿ ವಾಸು ಅವರು ಗೆಲುವು ಸಾಧಿಸಿದ್ದರು. ಈ ಕ್ಷೇತ್ರದಲ್ಲಿ ಏಳೆಂಟು ಕಾರ್ಪೊರೇಟರ್‌ಗಳು ಕಾಂಗ್ರೆಸ್‌ನಿಂದ ಆಯ್ಕೆಯಾದರು. ಇದರಲ್ಲಿ ಮೂಲ ಅಥವಾ ವಲಸೆ ಎಂಬುದು ಲೆಕ್ಕಕ್ಕಿಲ್ಲ. ಸಿದ್ದರಾಮಯ್ಯ ಅವರ ಸಂಘಟನಾ ಶಕ್ತಿಯಿಂದ ಕಾಂಗ್ರೆಸ್‌ಗೆ ಬಲ ಬಂದಿದೆ ಎಂದು ಹರೀಶ್‌ಗೌಡ ತಿಳಿಸಿದರು.

### ನೇಮಕ



ಮೈಸೂರು, ಫೆ.5– ಮೈಸೂರು ನಗರ ಜಿಲ್ಲಾ ಕಾಂಗ್ರೆಸ್‌ನ ಪರಿಶಿಷ್ಟ ಜಾತಿ ವಿಭಾಗದಿಂದ ವಾರ್ಡ್ ನಂ.7ರ ಅಧ್ಯಕ್ಷರಾಗಿ ಎಸ್.ರವಿಕುಮಾರ್ ಅವರನ್ನು ನೇಮಕ ಮಾಡಲಾಗಿದೆ ಎಂದು ಮೈಸೂರು ನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ.



ಮೈಸೂರು, ಫೆ.5– 'ಯೂತ್ ಜೋಡೋ ಬೂತ್ ಜೋಡೋ ಮತ್ತು ಜಿಲ್ಲಾ ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದನ್ನು ಗುರುತಿಸಿ ಸೈಯದ್ ಅಕ್ಬರ್ ಅವರನ್ನು ಮೈಸೂರು ನಗರ ಜಿಲ್ಲಾ ಯುವ ಕಾಂಗ್ರೆಸ್‌ನ ನೂತನ ಅಧ್ಯಕ್ಷರಾಗಿ ನೇಮಕ ಮಾಡಲಾಗಿದೆ ಎಂದು ಭಾರತೀಯ ಯುವ ಕಾಂಗ್ರೆಸ್ ಪ್ರಕಟಣೆಯಲ್ಲಿ ತಿಳಿಸಿದೆ.

## ಬಿಜೆಪಿ ರಾಜ್ಯ ಉಪಾಧ್ಯಕ್ಷರಾಗಿ ನಂದೀಶ್ ರೆಡ್ಡಿ ನೇಮಕ

ಬೆಂಗಳೂರು, ಫೆ5– ಅಸಮಾಧಾನಿತರನ್ನು ಸಮಾಧಾನ ಪಡಿಸಲು ಬಿಜೆಪಿ ಮುಂದಾಗಿದ್ದು, ಮಾಜಿ ಶಾಸಕ ನಂದೀಶ್ ರೆಡ್ಡಿ ಅವರನ್ನು ರಾಜ್ಯ ಬಿಜೆಪಿ ಉಪಾಧ್ಯಕ್ಷರಾಗಿ ನೇಮಿಸಿ ಆದೇಶ ಹೊರಡಿಸಿದೆ. ಇತ್ತೀಚೆಗೆ ನಂದೀಶ್ ರೆಡ್ಡಿ ಪಕ್ಷದಿಂದ ಅಂತರ ಕಾಯ್ದುಕೊಂಡಿದ್ದರು. ಹೀಗಾಗಿ, ಕಾಂಗ್ರೆಸ್ ಸೇರುವ ಬಗ್ಗೆ ಮನಸ್ಸು ಮಾಡಿದ್ದಾರೆಂಬ ಸುದ್ದಿ ಹರಿದಾಡಿತ್ತು. ಅಷ್ಟೇ ಅಲ್ಲ ಸಚಿವ ಬೈರತಿ ಬಸವರಾಜು ವಿರುದ್ಧ ರೆಡ್ಡಿ ಬಂಡಾಯ ಎದ್ದಿದ್ದರು. ನಂದೀಶ್ ರೆಡ್ಡಿಗೆ ಪಕ್ಷದಲ್ಲಿ ಮಹತ್ವದ ಸ್ಥಾನ ಕೊಟ್ಟು ಹಿಡಿದಿಟ್ಟುಕೊಳ್ಳುವ ತಂತ್ರವನ್ನು ಬಿಜೆಪಿ ಮಾಡಿದೆ. ಹೀಗಾಗಿ ಅವರನ್ನು ಪಕ್ಷದ ರಾಜ್ಯ ಉಪಾಧ್ಯಕ್ಷರನ್ನಾಗಿ ನೇಮಿಸಿದೆ. ಜೊತೆಗೆ ಚಾಮರಾಜನಗರ ಜಿಲ್ಲೆಯ ಬಿಜೆಪಿ ಅಧ್ಯಕ್ಷರಾಗಿ ಜಿ.ನಾರಾಯಣ ಪ್ರಸಾದ್ ಅವರನ್ನು ನೇಮಿಸಿ ಆದೇಶ ಹೊರಡಿಸಲಾಗಿದೆ.

## ಕಾಂಗ್ರೆಸ್, ಬಿಜೆಪಿ, ಜೆಡಿಎಸ್‌ನಿಂದ ಆಮ್ ಆದ್ಮಿ ಪಕ್ಷದ ಅಭಿವೃದ್ಧಿ ಕಾರ್ಯ ನಕಲು

ಮೈಸೂರು, ಫೆ5(ಎಂಟಿವೈ)– ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳು ದೆಹಲಿಯಲ್ಲಿ ಆಮ್ ಆದ್ಮಿ ಪಕ್ಷ ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳ ನಕಲು ಭರವಸೆ ನೀಡುವ ಮೂಲಕ ಜನರನ್ನು ಓಲೈಸಿಕೊಳ್ಳುವ ಪಯತ್ನ ಮಾಡುತ್ತಿವೆ ಎಂದು ಆಮ್ ಆದ್ಮಿ ಪಕ್ಷದ ರಾಜ್ಯಾಧ್ಯಕ್ಷ ಪೃಥ್ವಿರೆಡ್ಡಿ ಆರೋಪಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಮೂರು ಪಕ್ಷಗಳ ಸರ್ಕಾರವನ್ನು ರಾಜ್ಯದ ಜನತೆ ನೋಡಿದ್ದಾರೆ. ರಾಜ್ಯದ ಹಿತಕಾಯುವಲ್ಲಿ ಮೂರು ಪಕ್ಷಗಳು ವಿಫಲವಾಗಿವೆ. ಚುನಾವಣೆ ಸಂದರ್ಭದಲ್ಲಿ ಸುಳ್ಳು ಭರವಸೆಗಳನ್ನು ನೀಡುವ ಮೂಲಕ ಜನರನ್ನು ಓಲೈಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಆದರೆ, ನೀಡುವ ಭರವಸೆ ಗಳನ್ನು ಯಾವುದೇ ಕಾರಣಕ್ಕೂ ಈಡೇರಿಸಲು ಮುಂದಾಗುವುದಿಲ್ಲ ಎಂದು ಕಿಡಿಕಾರಿದರು.

ಕೇಂದ್ರ ಹಾಗೂ ರಾಜ್ಯದಲ್ಲಿ ಅಧಿಕಾರದಲ್ಲಿದ್ದರೂ ಇದುವರೆಗೆ ಯಾವುದೇ ಅಭಿವೃದ್ಧಿ ಕೆಲಸ ಮಾಡಿಲ್ಲ. ಇದೀಗ ಚುನಾವಣೆಗಾಗಿ ಬಿಜೆಪಿ ಸರ್ಕಾರ ಹೊಸ ತರಗತಿ ಕಟ್ಟಡಗಳ ನಿರ್ಮಾಣ ಭರವಸೆ ನೀಡಿದೆ. ಶಾಲಾ ಮಕ್ಕಳಿಗೆ ಸಮವಸ್ತ್ರವನ್ನೇ ನೀಡಲು ಬಿಜೆಪಿ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಆದರೂ ಈಗ ಹೊಸ ಕಟ್ಟಡಗಳ ನಿರ್ಮಾಣದ ಭರವಸೆ ನೀಡಿರುವುದು ಹಾಸ್ಯಾಸ್ಪದ. ಕಾಂಗ್ರೆಸ್ ಉಚಿತ ವಿದ್ಯುತ್ ನೀಡುವುದಾಗಿ ಹೇಳಿದೆ. ಆದರೆ ಈವರೆಗೂ ನಿಜಕ್ಕೂ ಜನರಿಗೆ ಏನನ್ನೂ ಈ ಪಕ್ಷ ಮಾಡಿಲ್ಲ. ಜೆಡಿಎಸ್ ಸಹಾ ಪ್ರತಿ ಗ್ರಾಮಕ್ಕೂ ಗುಣಮಟ್ಟದ ಶಾಲೆ ನೀಡುವುದಾಗಿ ಹೇಳಿದೆ. ಎರಡು ಬಾರಿ ಅಧಿಕಾರದಲ್ಲಿದ್ದಾಗಲೂ ಏನೂ ಮಾಡದವರಿಗೆ ಈಗ ಸಾಧ್ಯವೇ ಎಂದು ಪ್ರಶ್ನಿಸಿದರು.

ಪಕ್ಷ ಪ್ರಚಾರ ಮತ್ತು ಜನಸಂಪರ್ಕ ಸಮಿತಿ ಅಧ್ಯಕ್ಷ ಮುಖ್ಯಮಂತ್ರಿ ಚಂದ್ರು ಮಾತನಾಡಿ, ಬಿಜೆಪಿಯವರು ನುಡಿದಂತೆ ನಡೆದಿಲ್ಲ. ಸುಳ್ಳು ಭರವಸೆ ನೀಡಿ, ಜನರನ್ನು ಮಂಕಾಗಿಸಿ ಬೆಂಬಲ ಪಡೆದುಕೊಂಡಿರುವ ಬಿಜೆಪಿ ನಾಯಕರು ಅಧಿಕಾರಕ್ಕೆ ಬಂದ ನಂತರ ಜನರು ಹಾಗೂ ರಾಜ್ಯದ ಅಭಿವೃದ್ಧಿಯನ್ನು ಸಂಪೂರ್ಣವಾಗಿ ಕಡೆಗಣಿಸಿದ್ದಾರೆ. ಉದ್ಯಮಿಗಳಾದ ಅಂಬಾನಿ, ಅದಾನಿ ಸೇರಿದಂತೆ ದೊಡ್ಡ ದೊಡ್ಡ ಉದ್ಯಮಿಗಳ ಹಿತಕಾಯುತ್ತಿದ್ದಾರೆ. ಉದ್ಯಮಿಗಳು ಮಾಡಿರುವ ಲಕ್ಷಾಂತರ ಕೋಟಿ ಸಾಲ ಮನ್ನಾ ಮಾಡಿದ್ದಾರೆ. ಕಾಂಗ್ರೆಸ್ ಪಕ್ಷ ಸ್ವಾತಂತ್ರ್ಯ ಬಂದಾಗಿನಿಂದಲೂ ಭರವಸೆಗಳನ್ನೇ ನೀಡುತ್ತ ಬಂದಿದೆ. ಜೆಡಿಎಸ್‌ನದು ಕುಟುಂಬ ರಾಜಕಾರಣಕ್ಕೆ ಸೀಮಿತವಾಗಿದ್ದು, ಲೂಟಿ ಹೊಡೆಯುತ್ತಿದೆ. ಹೀಗಾಗಿ ಇಂತಹ ಪಕ್ಷಗಳಿಂದ ಪ್ರಗತಿ ಸಾಧ್ಯವಿಲ್ಲ. ರಾಜ್ಯದಲ್ಲಿ ಎಎಪಿ ಭರವಸೆ ಮೂಡಿಸುತ್ತಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಎಎಪಿ ಕಾರ್ಯಾಧ್ಯಕ್ಷ ಬಿ.ಟಿ. ನಾಗಣ್ಣ, ಉಪಾಧ್ಯಕ್ಷ ಚೆನ್ನಪ್ಪ, ಜಿಲ್ಲಾಧ್ಯಕ್ಷ ಎಲ್. ರಂಗಯ್ಯ ಇದ್ದರು.



ಎಂ.ಸಿ.ತಳಲು ಕ್ಲಸ್ಟರ್ ಮಟ್ಟದ 'ಕಲಿಕಾ ಹಬ್ಬ'ಕ್ಕೆ ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕು ವಲಯದ ಬಿಇಓ ಉದಯಕುಮಾರ್ ಚಾಲನೆ ನೀಡಿದರು. ಈ ವೇಳೆ ಸಿಆರ್‌ಪಿ ಚಂದ್ರಶೇಖರ್, ಗಣಿತ ಶಿಕ್ಷಕಿ ಶಾರದಾ, ಕಲಾ ಶಿಕ್ಷಕ ಪರಶುರಾಮ್, ಗ್ರಾಮಸ್ಥರಾದ ಪ್ರಕಾಶ್, ಅಂಬಿಕಾ ಚಂದ್ರಶೇಖರ್, ಶಾರದಾ, ಹಾದನೂರು ಸರ್ಕಾರಿ ಪ್ರಾಥಮಿಕ ಶಾಲೆಯ ಮುಖ್ಯಶಿಕ್ಷಕಿ ಶಾಂತಾ, ಸಹ ಶಿಕ್ಷಕಿಯರಾದ ತ್ರಿವೇಣಿ, ಪೃಥ್ವಿ, ಸವಿತಾ, ನೇತ್ರಾವತಿ, ಅಶೋಕ್ ಉಪಸ್ಥಿತರಿದ್ದರು.

ಮಾಘ ಮಾಸದ ಶುದ್ಧ ಹುಣ್ಣಿಮೆ ಅಂಗವಾಗಿ

# ನಿಮಿಷಾಂಬ ದೇಗುಲಕ್ಕೆ ಹರಿದು ಬಂದ ಭಕ್ತಸಾಗರ





ಶ್ರೀರಂಗಪಟ್ಟಣ, ಫೆ.5– ಮಾಘಮಾಸದ ಶುದ್ಧ ಹುಣ್ಣಿಮೆ ಅಂಗವಾಗಿ ಗಂಜಾಂನ ಶ್ರೀನಿಮಿಷಾಂಬ ದೇವಾಲಯಕ್ಕೆ ರಾಜ್ಯದ ವಿವಿಧೆಡೆಗಳಿಂದ ಆಗಮಿಸಿದ ಸಾವಿರಾರು ಭಕ್ತರು ವಿಶೇಷ ಪೂಜೆ ಸಲ್ಲಿಸಿದರು.

ಶನಿವಾರ ಮಧ್ಯರಾತ್ರಿಯಿಂದಲೇ ದೇವಿಗೆ ವಿಶೇಷ ಪೂಜಾ ಕೈಂಕರ್ಯ ಜರುಗಿದ್ದು, ದೇವಾಲಯದ ಅರ್ಚಕ ಸೂರ್ಯನಾರಾಯಣ ಭಟ್ ನೇತೃತ್ವದಲ್ಲಿ ದೇವಿಗೆ ಪಂಚಾಮೃತ ಅಭಿಷೇಕ, ಪೂರ್ವಕ ಮಹಾಭಿಷೇಕ ಸೇವೆ, ಗಣಹೋಮ, ನಕ್ಷತ್ರ ಹೋಮ, ದುರ್ಗಾ ಹೋಮ ಹಾಗೂ ಸತ್ಯನಾರಾಯಣ ಪೂಜೆಗಳನ್ನು ನೆರವೇರಿಸಲಾಯಿತು.

ಮಾಘ ಮಾಸದ ಹುಣ್ಣಿಮೆಯಲ್ಲಿ ಕಾವೇರಿ ನದಿಯಲ್ಲಿ ಮಿಂದು ಶಕ್ತಿ ದೇವಿ ದರ್ಶನ ಪಡೆದರೆ ಒಳಿತಾಗಲಿದೆ ಎಂದು ವಿವಿಧೆಡೆಗಳಿಂದ ಆಗಮಿಸಿದ್ದ ಸಾವಿರಾರು ಭಕ್ತರು, ಕಾವೇರಿ ನದಿಯಲ್ಲಿ ಮಾಘ ಸ್ನಾನ ಮಾಡಿ ಸರತಿ ಸಾಲಿನಲ್ಲಿ ನಿಂತು ದೇವಿ ದರ್ಶನ ಪಡೆದು, ತಮ್ಮ ಕಷ್ಟಗಳನ್ನು ನೀಗಿಸುವಂತೆ ಪ್ರಾರ್ಥನೆ ಸಲ್ಲಿಸಿದರು. ದೇವಾಲಯದ ಆವರಣದಲ್ಲಿ ವಿವಿಧ ಸಾಂಸ್ಕೃತಿಕ ಕಲಾತಂಡಗಳಿಂದ ಸಂಗೀತ ಹಾಗೂ ಜೂನಿಯರ್ ರಾಜಕುಮಾರ್‌ರಿಂದ ರಸಸಂಜೆ ಕಾರ್ಯಕ್ರಮ ಜರುಗಿದವು. ಸಾವಿರಾರು ಭಕ್ತರಿಗೆ ಬೆಂಗಳೂರಿನ ದಾನಿಯೊಬ್ಬರು ಅನ್ನಸಂತರ್ಪಣೆ ಏರ್ಪಡಿಸಿದ್ದರು.

ಜಿಲ್ಲಾಧಿಕಾರಿ ಡಾ.ಗೋಪಾಲಕೃಷ್ಣ, ಎಸ್ಪಿ ಯತೀಶ್, ತಹಸೀಲ್ದಾರ್ ಶ್ವೇತ ಎನ್.ರವೀಂದ್ರ ನೇತೃತ್ವದಲ್ಲಿ ಮಧ್ಯರಾತ್ರಿ ಪೂಜಾ ಕೈಂಕರ್ಯ ಜರುಗಿದವು. ಶ್ರೀನಿಮಿಷಾಂಬ ದೇವಾಲಯ ಸಮಿತಿ ಅಧ್ಯಕ್ಷ ಕೃಷ್ಣಪ್ಪ, ದೇವಾಲಯದ ಇಓ ಮಹೇಶ್ ಸೇರಿದಂತೆ ತಾಲೂಕು ಆಡಳಿತದ ಸಿಬ್ಬಂದಿ ವರ್ಗ ಹಾಜರಿದ್ದರು. ಇದೇ ವೇಳೆ ಪೊಲೀಸರು ಬಿಗಿ ಭದ್ರತೆ ಒದಗಿಸಿದ್ದರು.

# ಮಹಿಳೆಯರು ಅನ್ಯಾಯದ ವಿರುದ್ಧ ಹೋರಾಟ ನಡೆಸಿ

ಜಿಲ್ಲಾ ಮಟ್ಟದ ದಲಿತ ಮಹಿಳಾ ಜಾಗೃತಿ ಸಮಾವೇಶದಲ್ಲಿ ಸಚಿವ ಕೆಸಿಎನ್ ಕರೆ



ಕೆ.ಆರ್.ಪೇಟೆ, ಫೆ.5– ಡಾ.ಬಿ.ಆರ್.ಅಂಬೇಡ್ಕರ್ ಆಶಯದಂತೆ ಮಹಿಳೆಯರು ಸಂಘಟಿತರಾಗಿ ಅನ್ಯಾಯದ ವಿರುದ್ಧ ಬೀದಿಗಿಳಿದು ಹೋರಾಟ ನಡೆಸಬೇಕು ಎಂದು ಸಚಿವ ಡಾ.ನಾರಾಯಣಗೌಡ ಕರೆ ನೀಡಿದರು.

ಪಟ್ಟಣದ ಜಯಮ್ಮ ಶಿವಲಿಂಗೇಗೌಡ ಸಮುದಾಯ ಭವನದಲ್ಲಿ ತಾಲೂಕು ದಲಿತ ಮಹಿಳಾ ಒಕ್ಕೂಟದಿಂದ ಆಯೋಜಿಸಿದ್ದ ಜಿಲ್ಲಾ ಮಟ್ಟದ ದಲಿತ ಮಹಿಳಾ ಜಾಗೃತಿ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು. ಹೆಣ್ಣು ಮಕ್ಕಳು ಸಾಮಾಜಿಕ ಕಟ್ಟುಪಾಡು ಹಾಗೂ ಮೌಢ್ಯ ನಿರ್ಮೂಲನೆಗೆ ಹೋರಾಡಬೇಕು. ಹೆಣ್ಣು ಸಂಸಾರದ ಕಣ್ಣು ಎಂಬ ಸತ್ಯ ಅರಿತು ವೃತ್ತಿ ಕೌಶಲ್ಯದ ಮೂಲಕ ಗುಡಿ ಕೈಗಾರಿಕೆ ಸ್ಥಾಪಿಸಿ, ಮಾರುಕಟ್ಟೆಯಲ್ಲಿ ಬೇಡಿಕೆ ಇರುವ ವಸ್ತುಗಳನ್ನು ಮನೆಯಲ್ಲಿಯೇ ತಯಾರಿಸಿ ಮಾರಾಟ ಮಾಡುವ ಮೂಲಕ ಆರ್ಥಿಕ ಸ್ವಾವಲಂಬನೆ ಸಾಧಿಸಬೇಕು ಎಂದರು. ರಾಜ್ಯ ದಲಿತ ಸೇನೆ ರಾಜ್ಯಾಧ್ಯಕ್ಷ ಜಗನ್ನಾಥ್, ರಾಜ್ಯ ರೈತ ಸಂಘ ಮಹಿಳಾ ಘಟಕದ ಅಧ್ಯಕ್ಷೆ ಮೈನಾವತಿ ಮಾತನಾಡಿದರು.

ಸಮಾಜ ಸೇವಕ ಮಲ್ಲಿಕಾರ್ಜುನ್, ಕಾಂಗ್ರೆಸ್ ಮುಖಂಡ ವಿಜಯ್ ರಾಮೇಗೌಡ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಕಾಂತರಾಜು, ಪುರಸಭೆ ಸದಸ್ಯರಾದ ಡಿ.ಪ್ರೇಮಕುಮಾರ್, ಕೆ.ಆರ್.ರವೀಂದ್ರಬಾಬು, ಕೆ.ಎನ್.ಮಹೇಶ್, ನಟರಾಜು, ಹೆಚ್.ಆರ್.ಲೋಕೇಶ್, ತಾಲೂಕು ಮಹಿಳಾ ಸಂಘಟಕಿ ಸರಸ್ವತಿ, ಜಿಲ್ಲಾ ದಲಿತ ಸೇನೆ ಮಹಿಳಾ ಘಟಕದ ಅಧ್ಯಕ್ಷೆ ಕುಮಲಾಕ್ಷಿ, ಜಿಲ್ಲಾ ಬಿಜೆಪಿ ಎಸ್‌ಸಿ ಮೋರ್ಚಾ ಅಧ್ಯಕ್ಷ ನಿತ್ಯಾನಂದ, ತಾಲೂಕು ಎಸ್‌ಸಿ ಮೋರ್ಚಾ ಅಧ್ಯಕ್ಷ ರವಿಶಿವಕುಮಾರ್ ಸೇರಿದಂತೆ ಸಾವಿರಾರು ಮಹಿಳೆಯರು ಸಮಾವೇಶದಲ್ಲಿ ಭಾಗವಹಿಸಿದ್ದರು. ಇದಕ್ಕೂ ಮುನ್ನಾ ಬೆಳ್ಳಿ ಸಾರೋಟಿನಲ್ಲಿ ಅಂಬೇಡ್ಕರ್ ಭಾವಚಿತ್ರವನ್ನು ಜನಪದ ಕಲಾತಂಡಗಳೊಂದಿಗೆ ಮೆರವಣಿಗೆ ಮಾಡಲಾಯಿತು. ಈ ವೇಳೆ ಸಚಿವ ನಾರಾಯಣಗೌಡರ ನೃತ್ಯ ಎಲ್ಲರ ಗಮನ ಸೆಳೆಯಿತು.

# ಬಾಲಕಿ ಚಿಕಿತ್ಸೆಗಾಗಿ ಹಿಂಜಾವೇ ದೇಣಿಗೆ ಸಂಗ್ರಹ



ಶ್ರೀರಂಗಪಟ್ಟಣ, ಫೆ.5– ಪಟ್ಟಣದಲ್ಲಿ ಇತ್ತೀಚೆಗೆ ರಥಸಪ್ತಮಿ ವೇಳೆ ಜಾಯಿಂಟ್ ವ್ಹೀಲ್‌ಗೆ ಕೂದಲು ಸಿಲುಕಿ ತಲೆ ಚರ್ಮದ ಸಮೇತ ಕೂದಲು ಕಿತ್ತು ಬಂದು ತೀವ್ರ ಸ್ವರೂಪದ ಗಾಯಗಳಾಗಿದ್ದ ಬಾಲಕಿ ಚಿಕಿತ್ಸೆಗಾಗಿ ಹಿಂದೂ ಜಾಗರಣಾ ವೇದಿಕೆ ಕಾರ್ಯಕರ್ತರು ಸಾರ್ವಜನಿಕರಿಂದ ದೇಣಿಗೆ ಸಂಗ್ರಹಿಸಿದರು.

ಜಾಯಿಂಟ್ ವ್ಹೀಲ್ ರೈಡ್ ವೇಳೆ ಬಾಲಕಿ ತಲೆ ಚರ್ಮದ ಸಮೇತ ಕೂದಲು ಕಿತ್ತು ಬಂದು ತೀವ್ರ ಗಾಯಗೊಂಡಿದ್ದ ಬಾಲಕಿ ಮೈಸೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಆಕೆಯ ಚಿಕಿತ್ಸೆಗೆ ನೆರವಾಗಲು ಹಿಂದೂ ಜಾಗರಣಾ ವೇದಿಕೆ ಸಂಚಾಲಕ ಚಂದನ್ ನೇತೃತ್ವದಲ್ಲಿ ಕಾರ್ಯಕರ್ತರು ಶ್ರೀರಂಗನಾಥ ದೇವಾಲಯದಿಂದ ಪಟ್ಟಣದ ಮುಖ್ಯರಸ್ತೆಯಲ್ಲಿ ಸಾಗಿ ಬಸ್ ನಿಲ್ದಾಣದವರೆಗೆ ದೇಣಿಗೆ ಸಂಗ್ರಹಿಸಿದರು. ಈ ವೇಳೆ ಸಂಗ್ರಹವಾದ 25 ಸಾವಿರ ರೂ.ಗಳನ್ನು ಆಸ್ಪತ್ರೆಗೆ ತೆರಳಿ ಬಾಲಕಿ ಪೋಷಕರಿಗೆ ತಲುಪಿಸಿದರು.

ಈ ವೇಳೆ ವೇದಿಕೆ ಸಂಚಾಲಕ ಶ್ಯಾಂ ಸುಂದರ್, ತಾಲೂಕು ಕಾರ್ಯದರ್ಶಿ ಹರ್ಷ, ಪ್ರಮುಖರಾದ ಸತೀಶ್, ಮದನ್ ಗೌಡ, ಶಿವು ನಾಯಕ್, ಶರತ್, ಪ್ರೇಮ್, ಚಂದ್ರು, ರವಿ ಸೇರಿದಂತೆ ಇತರರಿದ್ದರು.

# ದೇಶದ ಅಭಿವೃದ್ಧಿಗೆ ಯುವಕರ ಕೊಡುಗೆ ಅಪಾರ: ಡಿಸಿಟಿ



ಮದ್ದೂರು, ಫೆ.5– ದೇಶದ ಅಭಿವೃದ್ಧಿಗೆ ಯುವಕರ ಕೊಡುಗೆ ಅಪಾರ ಎಂದು ಶಾಸಕ ಡಿ.ಸಿ.ತಮ್ಮಣ್ಣ ತಿಳಿಸಿದರು.

ಪಟ್ಟಣದ ಬಿಂದಾಸ್ ಪಾರ್ಟಿ ಹಾಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ಕಾರ್ಯಕರ್ತರನ್ನು ಜೆಡಿಎಸ್ ಪಕ್ಷಕ್ಕೆ ಬರಮಾಡಿಕೊಂಡು ಅವರು ಮಾತನಾಡಿದರು. ಗ್ರಾಮೀಣ ಯುವಕರು ಶಿಕ್ಷಣದಿಂದ ವಂಚಿತರಾಗಬಾರದೆಂಬ ಸದುದ್ದೇಶದಿಂದ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಒತ್ತು ನೀಡಿದ್ದು, ಇದರಿಂದಾಗಿ ತಾಲೂಕು ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಪ್ರಗತಿ ಹೊಂದಿದೆ ಎಂದರು.

ತಾವು ಶಾಸಕರಾಗಿ ಪ್ರತಿಯೊಬ್ಬರಿಗೂ ಶಿಕ್ಷಣ ಕೊಡಿಸಬೇಕೆಂಬ ಉದ್ದೇಶದಿಂದ ಪ್ರತಿ ಹೋಬಳಿ ವ್ಯಾಪ್ತಿಯಲ್ಲಿ ಪ್ರೌಢಶಾಲೆ, ಕೈಗಾರಿಕಾ ತರಬೇತಿ ಕೇಂದ್ರ ಇನ್ನಿತರೆ ಶಿಕ್ಷಣ ಸಂಸ್ಥೆಗಳನ್ನು ತೆರೆದಿದ್ದು, ಯುವಕರು ಯಾವುದೇ ದುಶ್ಚಟಗಳ ದಾಸರಾಗದೆ ಸನ್ಮಾರ್ಗದತ್ತ ಹೆಜ್ಜೆಯಿಟ್ಟು ತಮ್ಮ ಭವಿಷ್ಯ ರೂಪಿಸಿಕೊಂಡು ಸುಸಂಸ್ಕೃತ ವ್ಯಕ್ತಿಗಳಾಗಬೇಕೆಂದು ಕಿವಿಮಾತು ಹೇಳಿದರು.

ಯುವಕರು ಪೋಷಕರಿಗೆ ಹೊರೆಯಾಗದೆ ಸ್ವ–ಉದ್ಯೋಗ ಕಂಡುಕೊಂಡು ತಮ್ಮ ಬದುಕನ್ನು ತಾವೇ ರೂಪಿಸಿ ಕೊಂಡು ಇತರರಿಗೆ ಮಾದರಿಯಾಗುವ ಪ್ರವೃತ್ತಿ ಬೆಳೆಸಿಕೊಂಡು ತಾವು ಹುಟ್ಟಿದ ಗ್ರಾಮ, ಪೋಷಕರು, ಶಿಕ್ಷಕರಿಗೆ ಕೀರ್ತಿ ತರಬೇಕೆಂದರು.

ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರು ನಿರುದ್ಯೋಗಿ ಯುವಕರಿಗೆ ಉದ್ಯೋಗ ಕೊಡಿಸಬೇಕೆಂಬ ಉದ್ದೇಶದಿಂದ ರಾಜ್ಯಾದ್ಯಂತ ಪಂಚರತ್ನ ಯಾತ್ರೆ ಹಮ್ಮಿಕೊಂಡು ಯುವಕರ ಸಬಲೀಕರಣಕ್ಕೆ ಹೆಚ್ಚಿನ ಒತ್ತು ನೀಡುತ್ತಿದ್ದು, ಮುಂದಿನ ದಿನಗಳಲ್ಲಿ ಪಕ್ಷ ಅಧಿಕಾರಕ್ಕೆ ಬಂದಲ್ಲಿ ಯುವಕರ ಸ್ವಸಹಾಯ ಸಂಘಗಳಿಗೆ ಸಾಲ ಸೌಲಭ್ಯ ಕಲ್ಪಿಸಿ ಆರ್ಥಿಕ ಸಬಲೀಕರಣಗೊಳಿಸಲು ಯೋಜನೆ ರೂಪಿಸುವುದಾಗಿ ಹೇಳಿದರು. ಮದ್ದೂರು ಪಟ್ಟಣ ವ್ಯಾಪ್ತಿಯ ಮುಖಂಡರಾದ ಪ್ರಶಾಂತ್, ವರುಣ್, ಜ್ಯೋತಿ, ಕುಮಾರ್, ಗಂಗಾ, ಸಾಗರ್, ಪ್ರತಾಪ್, ಕಾರ್ತಿಕ್, ಕೀರ್ತಿ, ರೇಣುಕುಮಾರ್, ನಿಖಿಲ್, ನಂದೀಶ್ ಸೇರಿದಂತೆ ನೂರಕ್ಕೂ ಹೆಚ್ಚು ಕಾರ್ಯಕರ್ತರು ಪಕ್ಷಕ್ಕೆ ಸೇರ್ಪಡೆಗೊಂಡರು.

ಈ ವೇಳೆ ಪುರಸಭಾಧ್ಯಕ್ಷ ಸುರೇಶ್ ಕುಮಾರ್, ಉಪಾಧ್ಯಕ್ಷೆ ಸುಮಿತ್ರಾ, ಸ್ಥಾಯಿ ಸಮಿತಿ ಅಧ್ಯಕ್ಷ ಟಿ.ಆರ್.ಪ್ರಸನ್ನಕುಮಾರ್, ಸದಸ್ಯರಾದ ಎಂ.ಐ.ಪ್ರವೀಣ್, ಎಸ್.ಮಹೇಶ್, ಶಿಂಷಾ ಸಹಕಾರ ಬ್ಯಾಂಕ್ ನಿರ್ದೇಶಕ ಸತೀಶ್, ಸ್ಥಳೀಯ ಮುಖಂಡರಾದ ಶಿವಚರಣ್, ರಾಜಣ್ಣ, ಪದ್ಮ, ಸಿದ್ದರಾಜು, ತಾಲೂಕು ಅಧ್ಯಕ್ಷ ಚಿಕ್ಕತಿಮ್ಮೇಗೌಡ ಇತರರಿದ್ದರು.

## ಅಪಘಾತದಲ್ಲಿ ಗಾಯಗೊಂಡಿದ್ದ ಬೈಕ್ ಸವಾರ ಸಾವು



ಮೇಲುಕೋಟೆ, ಫೆ.5– ರಸ್ತೆ ಅಪಘಾತದಲ್ಲಿ ಗಾಯಗೊಂಡಿದ್ದ ಬೈಕ್ ಸವಾರ ಚಿಕಿತ್ಸೆ ಫಲಕಾರಿಯಾಗದೇ ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ಸಾವನ್ನಪ್ಪಿದ್ದಾರೆ.

ಮೇಲುಕೋಟೆ ಪ್ರವಾಸಿ ಮಂದಿರದ ಮೇಟಿ ರಾಮು ಮಗಳೊಂದಿಗೆ ಬೈಕ್‌ನಲ್ಲಿ ಪಾಂಡವಪುರದಿಂದ ಬರುವಾಗ ನಿಯಂತ್ರಣ ತಪ್ಪಿ ಬೈಕ್‌ನಿಂದ ಬಿದ್ದು ಪ್ರಜ್ಞಾಹೀನನಾಗಿದ್ದ. ತಕ್ಷಣ ಅವರನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಿತಾದರೂ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ವಿಷಯ ತಿಳಿದು ಶಾಸಕ ಸಿ.ಎಸ್.ಪುಟ್ಟರಾಜು, ಜಿಪಂ ಮಾಜಿ ಸದಸ್ಯ ಸಿ.ಅಶೋಕ್ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ಈ ವೇಳೆ ಗ್ರಾಪಂ ಅಧ್ಯಕ್ಷ ಸೋಮಶೇಖರ್, ಸ್ಥಳೀಯ ಮುಖಂಡ ಅಪ್ಪ ಗಂಗಾಧರ್ ಸೇರಿದಂತೆ ಅನೇಕರಿದ್ದರು.

# ಮಾಜಿ ಸಿಎಂಗೆ ನಾಗರಿಕ ಸನ್ಮಾನ: ಪೂರ್ವಭಾವಿ ಸಭೆ

ಮಂಡ್ಯ, ಫೆ.5– ಪದ್ಮವಿಭೂಷಣ ಪ್ರಶಸ್ತಿಗೆ ಭಾಜನರಾಗಿರುವ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರಿಗೆ ತವರಿನ ನಾಗರಿಕ ಸನ್ಮಾನ ಮಾಡಲು ತೀರ್ಮಾನಿಸಿದ್ದು, ಈ ಸಂಬಂಧ ಫೆ.7 ರಂದು ಸಂಜೆ 4 ಗಂಟೆಗೆ ಕರ್ನಾಟಕ ಸಂಘದಲ್ಲಿ ಪೂರ್ವಭಾವಿ ಸಭೆ ಕರೆಯಲಾಗಿದೆ ಎಂದು ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಬಿ.ಜಯಪ್ರಕಾಶ್‌ಗೌಡ ತಿಳಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಭಾರತ ಸರ್ಕಾರದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ ಪದ್ಮವಿಭೂಷಣ ಪ್ರಶಸ್ತಿಗೆ ಭಾಜನರಾಗಿರುವ ಎಸ್.ಎಂ.ಕೃಷ್ಣ ಅವರ ಸಾಧನೆ ಮಂಡ್ಯ ಜಿಲ್ಲೆ ಹೆಮ್ಮೆ ಪಡುವ ಸಂಗತಿಯಾಗಿದ್ದು, 91 ವರ್ಷ ವಯೋಮಾನದ ಕೃಷ್ಣ ಅವರಿಗೆ ಜಿಲ್ಲೆಯ ನಾಗರಿಕರ ಪರವಾಗಿ ಸನ್ಮಾನಿಸುವುದು ನಮ್ಮ ಕರ್ತವ್ಯ. ಪಕ್ಷಾತೀತವಾಗಿ ಅಂದು ಪೂರ್ವಭಾವಿ ಸಭೆ ಹಮ್ಮಿಕೊಂಡಿದ್ದು, ಸಭೆಗೆ ಎಲ್ಲಾ ಪಕ್ಷಗಳ ಮುಖಂಡರು, ಪ್ರಗತಿಪರರು, ಇನ್ನಿತರ ಕ್ಷೇತ್ರದ ಮಹನೀಯರು ಪಾಲ್ಗೊಳ್ಳಬೇಕೆಂದು ಮನವಿ ಮಾಡಿದ್ದಾರೆ.

# ಜಿ.ಟಿ.ದೇವೇಗೌಡರು ಜೆಡಿಎಸ್‌ನ ಬಹುದೊಡ್ಡ ಶಕ್ತಿ




ಅಭಿಮಾನಿಗಳು ಅಳವಡಿಸಿದ್ದ ಯುವ ನಾಯಕದ್ವಯರ ಬೃಹತ್ ಕಟೌಟ್

### ಎಂಎಲ್‌ಸಿ ಗಾಯನ ಸುಧೆ...

ಯುವ ನಾಯಕರ ಜನ್ಮದಿನೋತ್ಸವ ಸಂಭ್ರಮದಲ್ಲಿ ಪಾಲ್ಗೊಂಡಿದ್ದ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ರಾಜಕುಮಾರ ಚಿತ್ರದ 'ಗೊಂಬೆ ಹೇಳುತೈತೆ' ಹಾಡನ್ನು ಸುಮಧುರವಾಗಿ ಹಾಡುವುದರ ಜೊತೆಗೆ ಸ್ಟೆಪ್ ಹಾಕಿ ನೆರೆದಿದ್ದವರನ್ನು ರಂಜಿಸಿದರು. ಅತ್ಯಂತ ಸೊಗಸಾಗಿ ಹಾಡಿದ್ದರಿಂದ ಮತ್ತೊಮ್ಮೆ ಹಾಡುವಂತೆ ಹಲವರು ಒತ್ತಾಯಿಸಿದ ಪ್ರಸಂಗವೂ ನಡೆಯಿತು.

ಮೈಸೂರು, ಫೆ.5(ಎಂಕೆ)– ಮೈಸೂರು ಭಾಗದಲ್ಲಿ ಜಿ.ಟಿ.ದೇವೇಗೌಡರು ಜೆಡಿಎಸ್‌ನ ಬಹುದೊಡ್ಡ ಶಕ್ತಿಯಾಗಿದ್ದಾರೆ. ಪಕ್ಷಕ್ಕೆ ದ್ರೋಹ ಮಾಡಿ ಕಾಂಗ್ರೆಸ್ ಸೇರಿದ ನಾಲ್ವರು, ಜಿಟಿಡಿಯವರ ಶಕ್ತಿಯೇನೆಂಬುದನ್ನರಿತುಕೊಳ್ಳುವುದು ಅಗತ್ಯವಾಗಿದೆ ಎಂದು ಯುವ ಜನತಾದಳ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಟಾಂಗ್ ನೀಡಿದರು.

ಇತ್ತೀಚಿನ ವೇದಿಕೆ ಕಾರ್ಯಕ್ರಮವೊಂದರಲ್ಲಿ ಜಿ.ಟಿ.ದೇವೇಗೌಡರಿಗೆ ಸವಾಲು ಹಾಕಿದ್ದವರ ಸವಾಲನ್ನು ಸ್ವೀಕರಿಸಿ, ಈ ಬೃಹತ್ ಸಮಾವೇಶದ ಮೂಲಕ ಪ್ರತಿ ಸವಾಲಾಕಿದ್ದೇವೆ. ಜಿ.ಟಿ.ದೇವೇಗೌಡರ ರಾಜಕೀಯ ಜೀವನದ ಬಗ್ಗೆ ಮಾತನಾಡುವುದಕ್ಕೂ ಮುನ್ನ ಅವರು ಯಾವುದಾದರೂ ಚುನಾವಣೆಯಲ್ಲಿ ಸೋತಿದ್ದಾರೆಯೇ ಎಂಬುದನ್ನು ತಿಳಿದು ಮಾತನಾಡಿ ಎಂದು ಎಚ್ಚರಿಸಿದರು.

ಹುಟ್ಟುಹಬ್ಬದ ಸಂಭ್ರಮಾಚರಣೆಗೆ ಲಕ್ಷಕ್ಕೂ ಅಧಿಕ ಮಂದಿ ಸೇರಿರುವುದನ್ನು ನೋಡಿದರೆ, 2018ರಲ್ಲಿ ನಡೆದ 'ಕುಮಾರ ಪರ್ವ' ಕಾರ್ಯಕ್ರಮ ನೆನಪಾಗುತ್ತದೆ. ಅಂದು ಜೆಸಿಬಿ ಮೂಲಕ ಬೃಹತ್ ಸೇಬಿನ ಹಾಕಿ ಚಾಮುಂಡೇಶ್ವರಿ ಕ್ಷೇತ್ರದ ಜನತೆ ಸ್ವಾಗತಿಸಿದ್ದರು. ಅದೇ ರೀತಿ ಇಂದು ಕೂಡ ಬೃಹತ್ ಮಟ್ಟದಲ್ಲಿ ಕ್ಷೇತ್ರದ ಜನತೆ ಸೇರಿರುವುದಕ್ಕೆ ಧನ್ಯವಾದ ಸಲ್ಲಿಸುತ್ತೇನೆ.

**40–50ಕ್ಕೆ ಸೀಮಿತವಾಗಿಲ್ಲ:** ಯುವಕನೊಬ್ಬ ಹೇಳುತ್ತಿದ್ದ. ಅಣ್ಣ ನೀವು 40–50 ಸೀಟು ಬಂದರೂ ಕಿಂಗ್ ಮೇಕರ್ ನೀವೇ ಅಂತ. ಆದರೆ ಈ ಬಾರಿ ಜೆಡಿಎಸ್ ಪಕ್ಷ 40–50 ಸ್ಥಾನಕ್ಕೆ ಸೀಮಿತವಾಗಿಲ್ಲ. ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿಯವರ ನೇತೃತ್ವದಲ್ಲಿ 123 ಕ್ಷೇತ್ರಗಳಲ್ಲಿ ಗೆಲುವು ಸಾಧಿಸುವ ಮೂಲಕ ಸ್ವತಂತ್ರವಾಗಿ ಸರ್ಕಾರ ರಚನೆ ಮಾಡಬೇಕು. ರಾಜ್ಯದಲ್ಲಿ ಬಡವರ, ದೀನ–ದಲಿತರ, ರೈತರ, ಯುವಕರ ಪರ ಯಾವುದಾದರೂ ಪಕ್ಷ ಇದ್ದರೆ ಅದು ಜೆಡಿಎಸ್ ಮಾತ್ರ ಎಂದು ಹೇಳಿದರು. ತಮಿಳುನಾಡು, ಆಂಧ್ರ, ತೆಲಂಗಾಣದಂತೆ ಕರ್ನಾಟಕ ರಾಜ್ಯದಲ್ಲೂ ಪ್ರಾದೇಶಿಕತೆಯನ್ನೊಳಗೊಂಡ ಪ್ರಾದೇಶಿಕ ಪಕ್ಷ ಜೆಡಿಎಸ್ ಅಧಿಕಾರಕ್ಕೆ ಬರಬೇಕು. ಈ ನಿಟ್ಟಿನಲ್ಲಿ ಕುಮಾರಣ್ಣನವರು ಏಕಾಂಗಿಯಾಗಿ 107 ವಿಧಾನಸಭಾ ಕ್ಷೇತ್ರಗಳಲ್ಲಿ ರೂಟ್‌ಮ್ಯಾಪ್ ಹಾಕಿಕೊಂಡು ಪಂಚರತ್ನ ರಥಯಾತ್ರೆ ಮಾಡುತ್ತಿದ್ದಾರೆ. ಕುಮಾರಣ್ಣನವರು ಮೊದಲು ಬಾರಿ 20 ತಿಂಗಳು, ಎರಡನೇ ಬಾರಿ 14 ತಿಂಗಳು ಸೇರಿ 34 ತಿಂಗಳು ನೀಡಿದ ಜನಪ್ರಿಯ ಆಡಳಿತ ಇನ್ನೂ ಮನೆ ಮನೆ ಮಾತಾಗಿದೆ ಎಂದರು.

**ಜೆಡಿಎಸ್ ಪಕ್ಷವನ್ನು ಬೆಳೆಸುತ್ತೇವೆ:** ಈ ಬೃಹತ್ ಸಮಾವೇಶದ ನೇರ ಪ್ರಸಾರವನ್ನು ಮಾಜಿ ಪ್ರಧಾನ ಮಂತ್ರಿಗಳೂ ಆದ ಜೆಡಿಎಸ್ ಪಕ್ಷದ ವರಿಷ್ಠರಾದ ಹೆಚ್.ಡಿ.ದೇವೇಗೌಡರು ವೀಕ್ಷಣೆ ಮಾಡುತ್ತಿದ್ದಾರೆ. ಅವರು ಕಟ್ಟಿ–ಬೆಳೆಸಿದ ಜೆಡಿಎಸ್ ಪಕ್ಷವನ್ನು ನಾವುಗಳು ಒಟ್ಟಾಗಿ ಮತ್ತಷ್ಟು ಬೆಳೆಸುತ್ತೇವೆ. ಪಕ್ಷ ಬೆಳೆಸುವ ಯುವಕರ ತಂಡ ಜೆಡಿಎಸ್‌ನಲ್ಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

**ನಮ್ಮದು ಸಹೋದರ ಸಂಬಂಧ:** ಜಿ.ಡಿ.ಹರೀಶ್‌ಗೌಡರು ಮತ್ತು ನನ್ನದು ಸಹೋದರ ಸಂಬಂಧ. ರಾಜಕೀಯ ಹೊರತಾಗಿ ನಾವಿಬ್ಬರು ಸಹೋದರರಾಗಿ ಬದುಕುತ್ತಿದ್ದೇವೆ. ಜಿ.ಟಿ.ದೇವೇಗೌಡರು ಪಕ್ಷ ಬಿಡುತ್ತಾರೆ ಎಂಬ ಗೊಂದಲ ಸೃಷ್ಟಿಯಾದಾಗಲೂ ನಾವುಗಳು ರಾಜಕೀಯ ಕುರಿತು ಚರ್ಚಿಸಲಿಲ್ಲ. ಜಿ.ಡಿ.ಹರೀಶ್‌ಗೌಡರು ಮುಂದಿನ ದಿನಗಳಲ್ಲಿ ಮೈಸೂರು ಜಿಲ್ಲೆಯಲ್ಲಿ ದೊಡ್ಡ ನಾಯಕರಾಗಲಿದ್ದು, ವಿಶೇಷ ಕಾಳಜಿ ಹಾಗೂ ಜವಾಬ್ದಾರಿ ತೆಗೆದುಕೊಳ್ಳಲಿದ್ದಾರೆ ಎಂದರು.

ಜೆಡಿಎಸ್ ಯುವನಾಯಕ ನಿಖಿಲ್ ಕುಮಾರಸ್ವಾಮಿ



### ರಾಮನಗರದಲ್ಲಿ ಸ್ಪರ್ಧಿಸುವ ಇಂಗಿತ ವ್ಯಕ್ತಪಡಿಸಿದ ನಿಖಿಲ್ ಕುಮಾರಸ್ವಾಮಿ....

ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ರಾಮನಗರ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸುವ ಇಂಗಿತವನ್ನು ಜೆಡಿಎಸ್ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ವ್ಯಕ್ತಪಡಿಸಿದರು. ಪುಣ್ಯಾತ್ಮರ ಕುಟುಂಬದಲ್ಲಿ ನನ್ನ ಜನ್ಮ ದೊರೆತದ್ದು, ಎಷ್ಟೋ ಜನ್ಮಗಳ ಪುಣ್ಯದ ಫಲ. ಅದರಂತೆ ಪ್ರಾಮಾಣಿಕವಾಗಿ ಪಕ್ಷ ಕಟ್ಟುವ ಕೆಲಸ ಮಾಡುತ್ತಿದ್ದೇನೆ ಎಂದು ಮಾತು ಆರಂಭಿಸಿದ ಅವರು, ರಾಮನಗರದ ವಿಧಾನಸಭಾ ಕ್ಷೇತ್ರದಲ್ಲಿ ನಿಖಿಲ್ ಕುಮಾರಸ್ವಾಮಿ ಸ್ಪರ್ಧಿಸ ಬೇಕು ಎಂಬ ಮಾತುಗಳು ಕೇಳಿ ಬರುತ್ತಿವೆ. ಪಕ್ಷದ ವರಿಷ್ಠರು ಹಾಗೂ ಹಾಲಿ ಶಾಸಕರಾದ ಅನಿತಾ ಕುಮಾರಸ್ವಾಮಿ ಯವರು ಸಮ್ಮತಿಸಿದರೆ ಕುಮಾರಣ್ಣನವರೊಂದಿಗೆ ಜೆಡಿಎಸ್ ಪಕ್ಷವನ್ನು ಅಧಿಕಾರಕ್ಕೆ ತರುವ ಸವಾಲನ್ನು ಸ್ವೀಕರಿಸುತ್ತೇನೆ ಎಂದರು.

# ಮುಂದೊಂದು ದಿನ ನಿಖಿಲ್ ಕುಮಾರಸ್ವಾಮಿ ಮುಖ್ಯಮಂತ್ರಿ

ಜಿ.ಡಿ.ಹರೀಶ್‌ಗೌಡ ಭವಿಷ್ಯ



ಮೈಸೂರು, ಫೆ.5(ಎಂಕೆ)– ಯುವ ಜನತಾದಳ ರಾಜ್ಯಾಧ್ಯಕ್ಷರಾದ ನಿಖಿಲ್ ಕುಮಾರಸ್ವಾಮಿ ಅವರಿಗೆ ಮುಂದಿನ ದಿನಗಳಲ್ಲಿ ರಾಜ್ಯದ ಮುಖ್ಯಮಂತ್ರಿಯಾಗುವ ಎಲ್ಲಾ ಗುಣಗಳಿವೆ ಎಂದು ರಾಜ್ಯ ಅಪೆಕ್ಸ್ ಬ್ಯಾಂಕ್‌ನ ಉಪಾಧ್ಯಕ್ಷರೂ ಆದ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ಭವಿಷ್ಯ ನುಡಿದರು.

ಕಳೆದ 10 ವರ್ಷಗಳಿಂದ ಜೆಡಿಎಸ್ ಪಕ್ಷ ಸಂಘಟನೆಯಲ್ಲಿ ತೊಡಗಿರುವ ಅವರಲ್ಲಿ ಮುಂದಿನ ದಿನಗಳಲ್ಲಿ ರಾಜ್ಯದ ಮುಖ್ಯಮಂತ್ರಿಯಾಗುವ ಎಲ್ಲಾ ಗುಣಗಳಿವೆ. ಹಾಗೆಯೇ ನನ್ನ ತಂದೆ(ಜಿ.ಟಿ.ದೇವೇಗೌಡ) ಯವರು ಕಳೆದ 50 ವರ್ಷಗಳಿಂದ ಚಾಮುಂಡೇಶ್ವರಿ ಕ್ಷೇತ್ರದ ಜನರ ಸೇವೆ ಮಾಡುತ್ತಾ ಬಂದಿದ್ದಾರೆ. ಬೇರೆ ಬೇರೆ ಕ್ಷೇತ್ರಗಳಿಂದಲೂ ಜನರು ಬರುತ್ತಾರೆ ಎಂದರೆ ಅವರ ಮೇಲೆ ಜನರಿಗಿರುವ ಅಭಿಮಾನ ಎಷ್ಟೆಂಬುದು ತಿಳಿಯುತ್ತದೆ ಎಂದರು. ಚಾಮುಂಡೇಶ್ವರಿ ಕ್ಷೇತ್ರ ಪವರ್‌ಫುಲ್ ಕ್ಷೇತ್ರ. ಜಿ.ಟಿ.ದೇವೇಗೌಡರು ಶಾಸಕರಾದ ಬಳಿಕ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಆಗಿರುವ ಅಭಿವೃದ್ಧಿಯನ್ನು ನೋಡಿದ್ದೀರಿ. ರಾಜ್ಯ, ದೇಶವೇ ನೋಡಿದಂತಹ 2018ರ ವಿಧಾನ ಸಭೆ ಚುನಾವಣೆಯಲ್ಲಿ ಆಶೀರ್ವಾದ ಮಾಡಿದಂತೆ ಮುಂದಿನ ಚುನಾವಣೆಯಲ್ಲೂ ಆಶೀರ್ವಾದ ಮಾಡಬೇಕು ಎಂದು ಮನವಿ ಮಾಡಿದರು.

> ಈ ಹಿಂದೆ ಹೆಚ್.ಡಿ.ಕುಮಾರಸ್ವಾಮಿ ಸಿಎಂ ಆಗುತ್ತಾರೆಂದು ಜಿ.ಟಿ.ದೇವೇಗೌಡರು ನುಡಿದಿದ್ದ ಭವಿಷ್ಯ ನಿಜವಾಗಿತ್ತು. ಇದೀಗ ಹೆಚ್‌ಡಿಕೆ ಮತ್ತು ನಿಖಿಲ್ ಕುಮಾರಸ್ವಾಮಿ ಸಿಎಂ ಆಗುತ್ತಾರೆಂದು ಜಿಟಿಡಿ ಪುತ್ರ ಜಿ.ಡಿ.ಹರೀಶ್‌ಗೌಡ ಭವಿಷ್ಯ ನುಡಿದಿರುವುದು ವಿಶೇಷ.

**ನೀವೇ ಸರ್ಟಿಫಿಕೆಟ್ ಕೊಡಬೇಕು:** ವೇದಿಕೆ ಮೇಲೆ ನಿಂತುಕೊಂಡು ನನ್ನನ್ನು ಕ್ರಿಮಿನಲ್ ಎಂದು ಕರೆದಿರುವುದನ್ನು ಗಮನಿಸಿದ್ದೇನೆ. ನನ್ನ ಚಾರಿತ್ರ್ಯದ ಬಗ್ಗೆ, ನನ್ನ ಗುಣದ ಬಗ್ಗೆ ಸರ್ಟಿಫಿಕೆಟ್ ಕೊಡಲು ನೀವೆಲ್ಲಾ ಇದೀರಿ. ನಾನೇನು ಮಾಡಿದ್ದೇನೆ ಎಂಬುದು ನನ್ನ ಆತ್ಮಸಾಕ್ಷಿಗೆ ಗೊತ್ತಿದೆ. ಹಾಗೆಯೇ ಕ್ರಿಮಿನಲ್ ಎಂದವರು ಏನು ಮಾಡಿಸಿಕೊಂಡಿದ್ದಾರೆ ಎಂಬುದು ಅವರ ಆತ್ಮಸಾಕ್ಷಿಗೆ ಗೊತ್ತಿದೆ ಎಂದು ಕುಟುಕಿದರು.

**ಪದ ಬಳಕೆಯಲ್ಲಿ ಎಚ್ಚರವಿರಲಿ:** ಪದ ಬಳಕೆ ಮಾಡುವಾಗ ಎಚ್ಚರಿಕೆಯಿಂದ ಮಾಡಿ. ನಾವು ಸಣ್ಣ ವಯಸ್ಸಿನಿಂದಲೂ ಗುರು–ಹಿರಿಯರಿಗೆ ಗೌರವ ನೀಡುತ್ತಾ ಬಂದಿದ್ದೇನೆ. ಅದರಂತೆ ನಡೆದುಕೊಂಡಿದ್ದೇವೆ. ಆದ್ದರಿಂದ ಮಾತನಾಡುವಾಗ ಪದ ಬಳಕೆಯಲ್ಲಿ ಎಚ್ಚರವಿರಲಿ ಎಂದು ವಿರೋಧಿಗಳಿಗೆ ಮಾತಿನಲ್ಲೇ ಚಾಟಿ ಬೀಸಿದರು.

# ಯುವ ನಾಯಕದ್ವಯರಿಗೆ ಬೃಹತ್ ಹಾರಗಳಿಂದ ಅದ್ದೂರಿ ಸ್ವಾಗತ





ಮೈಸೂರು, ಫೆ.5(ಎಂಕೆ, ಆರ್‌ಕೆಬಿ)– ಜೆಡಿಎಸ್‌ನ ಇಬ್ಬರು ಯುವನಾಯಕರ ಹುಟ್ಟುಹಬ್ಬದ ಸಂಭ್ರಮಾಚರಣೆ ಅಂಗವಾಗಿ ಬೈಕ್‌ರ‍್ಯಾಲಿ, ಬೃಹತ್ ಹಾರಗಳ ಅದ್ದೂರಿ ಸ್ವಾಗತದೊಂದಿಗೆ ರೋಡ್ ಶೋ ನಡೆಸಲಾಯಿತು.

ಮೈಸೂರಿನ ಹಿನಕಲ್‌ನಿಂದ ಹಾಗೂ ಬನ್ನೂರು ಮುಖ್ಯರಸ್ತೆಯಲ್ಲಿರುವ ಹೆಚ್.ಡಿ. ದೇವೇಗೌಡ ವೃತ್ತದ ಕಡೆಯಿಂದ ರಿಂಗ್ ರಸ್ತೆ ಮಾರ್ಗವಾಗಿ ಶ್ರೀರಾಂಪುರ ವೃತ್ತದಲ್ಲಿ ಜಮಾವಣೆಗೊಂಡ ಸಾವಿರಾರು ಮಂದಿ ಶ್ರೀರಾಂಪುರ ವೃತ್ತದಿಂದ ದಾರಿಪುರದವರೆಗೆ ಬೃಹತ್ ಬೈಕ್ ರ‍್ಯಾಲಿ ನಡೆಸಿದರು.

ಬೈಕ್ ರ‍್ಯಾಲಿ ಒಂದೆಡೆಯಾದರೆ, ನೂರಾರು ಕಾರುಗಳು, 300ಕ್ಕೂ ಹೆಚ್ಚು ಖಾಸಗಿ ಬಸ್‌ಗಳಲ್ಲಿ ಆಗಮಿಸಿದ ಚಾಮುಂಡೇಶ್ವರಿ ಕ್ಷೇತ್ರದ ಸಾವಿರಾರು ಮಂದಿ ರಸ್ತೆಯುದ್ದಕ್ಕೂ ಜೆಡಿಎಸ್ ಬಾವುಟಗಳನ್ನು ಹಿಡಿದು ಜೆಡಿಎಸ್ ನಾಯಕರಾದ ಹೆಚ್.ಡಿ.ದೇವೇಗೌಡ, ಹೆಚ್.ಡಿ. ಕುಮಾರಸ್ವಾಮಿ, ಜಿ.ಟಿ.ದೇವೇಗೌಡ, ನಿಖಿಲ್ ಕುಮಾರಸ್ವಾಮಿ, ಜಿ.ಡಿ.ಹರೀಶ್‌ಗೌಡ ಪರ ಘೋಷಣೆಗಳನ್ನು ಕೂಗಿದರು. ಎಲ್ಲೆಡೆ ರಾರಾಜಿಸುತ್ತಿದ್ದ ಜೆಡಿಎಸ್ ಬಾವುಟಗಳ ಜೊತೆಗೆ ಶ್ರೀರಾಂಪುರ ವೃತ್ತದಿಂದ ದಾರಿಪುರವರೆಗೆ ರಸ್ತೆ ಬದಿಯಲ್ಲಿ ಯುವ ನಾಯಕರ ಕಟೌಟ್‌ಗಳು ಎದ್ದು ಕಾಣುತ್ತಿದ್ದವು.

**ಬೃಹತ್ ಹಾರಗಳ ಸರಮಾಲೆ:** ಹಿನಕಲ್, ಬೋಗಾದಿ ಸಿಗ್ನಲ್, ಶ್ರೀರಾಂಪುರ ವೃತ್ತ, ಕೋಟೆಹುಂಡಿ ಸರ್ಕಲ್, ಉದ್ಬೂರು ಗೇಟ್, ದೊಡ್ಡಹುಂಡಿ ಹಾಗೂ ದಾರಿಪುರ ಗ್ರಾಮದ ದ್ವಾರ ಸೇರಿದಂತೆ ಹಲವೆಡೆ ಯುವ ನಾಯಕರಿಗೆ ಸೇಬು, ಕಿತ್ತಳೆ, ಕೊಬ್ಬರಿ, ಹೂವಿನ ಬೃಹತ್ ಹಾರಗಳನ್ನು ಹಾಕಿ ಸ್ವಾಗತಿಸಲಾಯಿತು. ಬೃಹತ್ ಹಾರಗಳ ಜೊತೆಗೆ ಹೂವಿನ ಸುರಿಮಳೆಗೈದ ಕಾರ್ಯಕರ್ತರ ಹರ್ಷೋದ್ಗಾರ ಮುಗಿಲು ಮುಟ್ಟಿತ್ತು.

**ಲಕ್ಷಕ್ಕೂ ಅಧಿಕ:** ಹೊಸಹುಂಡಿ ಗ್ರಾಮದ ಜೆಡಿಎಸ್ ಕಾರ್ಯಕರ್ತರು, ಮಾರ್ಬಳ್ಳಿಯ ಜೆಡಿಎಸ್ ಕಾರ್ಯಕರ್ತರು, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ವಿವಿಧ ಗ್ರಾಮಗಳಿಂದ ಹಾಗೂ ಅಭಿಮಾನಿಗಳು ಸೇರಿದಂತೆ ಲಕ್ಷಕ್ಕೂ ಅಧಿಕ ಮಂದಿ ಹುಟ್ಟುಹಬ್ಬದ ಸಂಭ್ರಮಾಚರಣೆಯಲ್ಲಿ ಭಾಗವಹಿಸಿದ್ದರು. ಅಷ್ಟೂ ಮಂದಿಗೆ ಪ್ರತ್ಯೇಕವಾಗಿ ನೀರು ಹಾಗೂ ಉಪಾಹಾರದ ವ್ಯವಸ್ಥೆ ಮಾಡಲಾಗಿತ್ತು. ಹತ್ತಾರು ಕೌಂಟರ್‌ಗಳ ಮೂಲಕ ವಾಂಗಿಬಾತ್, ಮೊಸರನ್ನ, ಉಪ್ಪಿಟ್ಟು ವಿತರಣೆ ಮಾಡಲಾಯಿತು. ಸರಿಸುಮಾರು ಒಂದೂವರೆ ಲಕ್ಷಕ್ಕಿಂತಲೂ ಹೆಚ್ಚು ಮಂದಿ ಉಪಾಹಾರ ಸೇವಿಸಿದರು.

# ಮನಮೋಹಕ ಫಲಪುಷ್ಪ ಪ್ರದರ್ಶನ

## ಹರಿದುಬಂದ ಜನಸಾಗರ, ವಿದೇಶಿ ಪ್ರವಾಸಿಗರಿಂದಲೂ ವೀಕ್ಷಣೆ







• ಪುಷ್ಪ ಕಲಾಕೃತಿಗಳ ಮುಂದೆ ಸೆಲ್ಫಿ ಕ್ಲಿಕ್ಕಿಸಿಕೊಳ್ಳಲು ಮುಗಿಬಿದ್ದ ಜನ • ವೈನ್ ಪ್ರಿಯರನ್ನು ಆಕರ್ಷಿಸಿದ ವೈನ್ ಉತ್ಸವ

ಮಡಿಕೇರಿ, ಫೆ.5– ಮಡಿಕೇರಿಯ ರಾಜಾಸೀಟ್ ಉದ್ಯಾನವನದಲ್ಲಿ ಆಯೋಜಿಸಿರುವ ಫಲಪುಷ್ಪ ಪ್ರದರ್ಶನ ನೋಡುಗರ ಕಣ್ಮನ ಸೆಳೆಯುತ್ತಿದ್ದು, ಫಲಪುಷ್ಪ ಪ್ರದರ್ಶನ ವೀಕ್ಷಿಸಲು ಸಾರ್ವಜನಿಕರು ಮತ್ತು ಪ್ರವಾಸಿಗರ ದಂಡೇ ಹರಿದು ಬರುತ್ತಿದೆ.

ಫಲಪುಷ್ಪ ಪ್ರದರ್ಶನದ 3ನೇ ದಿನವಾದ ಭಾನುವಾರ ರಾಜಾಸೀಟ್ ಉದ್ಯಾನವನದಲ್ಲಿ ಜನಸಾಗರವೇ ಹರಿದು ಬಂದಿತ್ತು. ಜಿಲ್ಲೆ ಮಾತ್ರವಲ್ಲದೇ ಹೊರ ರಾಜ್ಯಗಳ ಪ್ರವಾಸಿಗರು ಅಲ್ಲದೇ ವಿದೇಶಿ ಪ್ರಜೆಗಳು ಫಲಪುಷ್ಪ ಪ್ರದರ್ಶನದ ಸೊಬಗನ್ನು ಸವಿಯುವುದರಲ್ಲಿ ಮಗ್ನರಾಗಿದ್ದರು.

ನೋಡುಗರು ಮೂಗಿನ ಮೇಲೆ ಬೆರಳಿಡುವಂತೆ ಬಗೆಬಗೆಯ ಹೂವುಗಳಲ್ಲಿ ಅರಳಿದ ವಿವಿಧ ಬಗೆಯ ಕಲಾಕೃತಿಗಳ ಎದುರು ಸೆಲ್ಫಿ ತೆಗೆದುಕೊಳ್ಳಲು ಜನರು

> ಎರಡು ವರ್ಷಗಳ ನಂತರ ನಡೆಯುತ್ತಿರುವ ಫಲಪುಷ್ಪ ಪ್ರದರ್ಶನ ವೀಕ್ಷಣೆಗೆ ಅತ್ಯಧಿಕ ಸಂಖ್ಯೆಯಲ್ಲಿ ಜನರು ಆಗಮಿಸಿದ್ದಾರೆ. ಒಂದು ರೀತಿಯ ಹಬ್ಬದ ವಾತಾವರಣ ರಾಜಾಸೀಟಿನಲ್ಲಿ ಕಂಡು ಬರುತ್ತಿದೆ. ಶಾಲಾ ವಿದ್ಯಾರ್ಥಿಗಳಿಗೆ ರಾಜಾಸೀಟ್‌ಗೆ ಉಚಿತ ಪ್ರವೇಶ ಕಲ್ಪಿಸಲಾಗಿದೆ. ಎಲ್ಲರೂ ಕುಟುಂಬ ಸಮೇತರಾಗಿ ಆಗಮಿಸಿ ಫಲಪುಷ್ಪ ಪ್ರದರ್ಶನ ವೀಕ್ಷಿಸಬಹುದು.
> – ಡಾ. ಬಿ.ಸಿ. ಸತೀಶ, ಕೊಡಗು ಡಿಸಿ

ಮುಗಿಬಿದ್ದರು. ಹೂವಿನ ಲೋಕದಲ್ಲಿ ವಿಹರಿಸಿದ ಸಾರ್ವಜನಿಕರು ಮತ್ತು ಪ್ರವಾಸಿಗರು ರಾಜರ ಕಾಲದ ನಾಲ್ಕುನಾಡು ಅರಮನೆ ಕಲಾಕೃತಿ ಸೇರಿದಂತೆ ವಿವಿಧ ಬಗೆಯ ಕಲಾಕೃತಿಗಳ ಎದುರು ನಿಂತು ಫೋಟೋಗೆ ಫೋಸ್ ನೀಡುತ್ತಿದ್ದುದು ಕಂಡುಬಂದಿತು.

ಜಿಲ್ಲಾಧಿಕಾರಿ ಡಾ. ಬಿ.ಸಿ.ಸತೀಶ ಅವರು ಕುಟುಂಬ ಸಮೇತರಾಗಿ ರಾಜಾಸೀಟ್‌ಗೆ ಭೇಟಿ ನೀಡಿ, ಫಲಪುಷ್ಪಪ್ರದರ್ಶನವನ್ನು ವೀಕ್ಷಿಸಿದರು. ಸಾಮಾನ್ಯರಂತೆ ರಾಜಾಸೀಟ್‌ಗೆ ಭೇಟಿ ನೀಡಿದ ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಅವರು, ಫಲಪುಷ್ಪ ಪ್ರದರ್ಶನ ವೀಕ್ಷಿಸುವುದರೊಂದಿಗೆ ಕಲಾಕೃತಿಗಳ ಫೋಟೋ ಕ್ಲಿಕ್ಕಿಸುತ್ತಿದ್ದ ಅಪರೂಪದ ದೃಶ್ಯಗಳು ಕಂಡು ಬಂದವು.

ನಗರದ ಗಾಂಧಿ ಮೈದಾನದಲ್ಲಿ ವೈನ್ ಉತ್ಸವ ಸಾರ್ವಜನಿಕರು ಮತ್ತು ಪ್ರವಾಸಿಗರನ್ನು ಕೈಬೀಸಿ ಕರೆಯುತ್ತಿವೆ. ಸ್ಥಳೀಯ ಹೋಮ್ ಮೇಡ್ ವೈನ್–ಜ್ಯೂಸ್ ಹಾಗೂ ವೈನ್ ಬೋರ್ಡ್ ವತಿಯಿಂದ ಬ್ರಾಂಡೆಡ್ ವೈನ್‌ಗಳ ಪ್ರದರ್ಶನ ಹಾಗೂ ಮಾರಾಟ ವೈನ್‌ಪ್ರಿಯರನ್ನು ಆಕರ್ಷಿಸುತ್ತಿದ್ದು, ಹೋಂಮೇಡ್ ವೈನ್‌ಗೆ ಭಾರಿ ಡಿಮ್ಯಾಂಡ್ ಸೃಷ್ಟಿಯಾಗಿದೆ. ಇದರೊಂದಿಗೆ ನರ್ಸರಿ ಗಿಡಗಳಿಗೆ ಭಾರಿ ಬೇಡಿಕೆ ಕಂಡುಬಂತು. ವಿವಿಧ ಬಗೆಯ ಹೂವಿನ ಬೀಜಗಳು, ಗೆಡ್ಡೆಗಳು, ತರಕಾರಿ ಬೀಜಗಳನ್ನು ಸಾರ್ವಜನಿಕರು ಖರೀದಿಸುತ್ತಿದ್ದುದು ಕಂಡುಬಂತು. ಒಟ್ಟಿನಲ್ಲಿ ಎರಡು ವರ್ಷಗಳಿಂದ ನಡೆಯದಿದ್ದ ಫಲಪುಷ್ಪ ಪ್ರದರ್ಶನ ಈ ಬಾರಿ ಅತ್ಯಧಿಕ ಸಂಖ್ಯೆಯಲ್ಲಿ ಜನರನ್ನು ತನ್ನತ್ತ ಸೆಳೆಯುವಲ್ಲಿ ಸಫಲವಾಗಿದೆ.




ಮೈಸೂರಿನಲ್ಲಿ ಇತ್ತೀಚೆಗೆ ನಡೆದ ನಕ್ಷತ್ರ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮ್ಯಾತ್ ಜೂನಿಯರ್ ಮೆಂಟಲ್ ಅರ್ಥಮೆಟಿಕ್ ಚಾಂಪಿಯನ್‌ಶಿಪ್–2022ರ ಜೂನಿಯರ್ ವಿಭಾಗದಲ್ಲಿ ನ್ಯಾಷನಲ್ ಚಾಂಪಿಯನ್‌ಶಿಪ್ ಪ್ರಶಸ್ತಿ ಗೆದ್ದುಕೊಂಡ 8 ವರ್ಷದ ಮಾಸ್ಟರ್ ಅರ್ಜುನ್ ಮಂದಣ್ಣ ಅವರಿಗೆ ರಾಜೀವ್ ಗಾಂಧಿ ವಿಶ್ವವಿದ್ಯಾನಿಲಯ ವಿಶ್ರಾಂತ ಕುಲಪತಿ ಡಾ.ಕೆ.ಸಿ.ಬೆಳ್ಳಿಯಪ್ಪ ಅವರು ಪ್ರಶಸ್ತಿ ಪ್ರದಾನ ಮಾಡಿದರು. ಈ ವೇಳೆ ಪ್ರಿನ್ಸಿಪಾಲ್ ಡಾ. ಶ್ರೀಕಾಂತ್ ಗುಪ್ತ, ಡಾ. ಆಶಾ ಕೃಪಾ ಅವರನ್ನು ಚಿತ್ರದಲ್ಲಿ ಕಾಣಬಹುದು. ಈತ ಕುಟ್ಟಾ ನಿವಾಸಿ ಗಣಪತಿ ಮುಕ್ಕಾಟೀರ ಮತ್ತು ಕಾವೇರಿ ಬೋಪಣ್ಣ ಅವರ ಪುತ್ರ.

## ಮೊಬೈಲ್‌ಗೆ ಕರೆನ್ಸಿ ಹಾಕಿಸದ ಪೋಷಕರು: ಬಾಲಕ ಆತ್ಮಹತ್ಯೆ

ನಾಪೋಕ್ಲು, ಫೆ.5– ಇಲ್ಲಿಗೆ ಸಮೀಪದ ಕಕ್ಕಬೆ – ನಾಲಡಿ ಗ್ರಾಮದ ಕಂಬೆಯಂಡ ಅಚ್ಚಪ್ಪ ಎಂಬವರ ಮಗ ಬಿಪಿನ್ ಬಿದ್ದಪ್ಪ (16) ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಪೋಷಕರು ಮೊಬೈಲ್‌ಗೆ ಕರೆನ್ಸಿ ಹಾಕಿಸಿಲ್ಲವೆಂಬ ಕಾರಣಕ್ಕಾಗಿ ಕಳೆದ ನಾಲ್ಕು ದಿನಗಳ ಹಿಂದೆ ವಿಷಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದ ಎನ್ನಲಾಗಿದ್ದು, ಆಸ್ಪತ್ರೆಗೆ ದಾಖಲಿಸಿದ್ದರೂ ಚಿಕಿತ್ಸೆ ಫಲಕಾರಿಯಾಗದೆ ಬಿಪಿನ್ ಸಾವನ್ನಪ್ಪಿದ್ದಾನೆ. ಈತ ನಾಪೋಕ್ಲುನ ಖಾಸಗಿ ಶಾಲೆಯಲ್ಲಿ 10ನೇ ತರಗತಿ ವ್ಯಾಸಂಗ ಮಾಡುತ್ತಿದ್ದ. ಗುರುವಾರ ನಾಲಡಿಯಲ್ಲಿ ಅಂತ್ಯಸಂಸ್ಕಾರ ನೆರವೇರಿತು. ಪ್ರಕರಣದ ಬಗ್ಗೆ ನಾಪೋಕ್ಲು ಪೊಲೀಸರು ಕೇಸು ದಾಖಲಿಸಿಕೊಂಡು ಕಾನೂನು ಕ್ರಮ ಜರುಗಿಸಿದ್ದಾರೆ.

## ಬೈಕ್‌ನಿಂದ ಬಿದ್ದು ಯುವಕ ಸಾವು

ವಿರಾಜಪೇಟೆ, ಫೆ.5– ಬೈಕ್‌ನಿಂದ ಬಿದ್ದು ತೀವ್ರವಾಗಿ ಗಾಯಗೊಂಡಿದ್ದ ಯುವಕ ನೋರ್ವ ಸಾವನ್ನಪ್ಪಿರುವ ಘಟನೆ ಗ್ರಾಮಾಂತರ ಠಾಣೆ ವ್ಯಾಪ್ತಿಯ ಕೆ.ಬೊಯಿಕೇರಿ ಗ್ರಾಮದ ಬಳಿ ಸಂಭವಿಸಿದೆ.

ತಾಲೂಕಿನ ಕೆದಮುಳ್ಳೂರು ಗ್ರಾಮದ ವಾಸಿ ದರ್ಶನ್(19) ಎಂಬಾತನೇ ಸಾವನ್ನಪ್ಪಿದ ಯುವಕ. ಈತ ತನ್ನ ಸ್ನೇಹಿತ ಸಚಿನ್ ಎಂಬುವರಿಂದ ಪಲ್ಸರ್ ಬೈಕ್ (ಕೆಎ–19 ಈಟಿ–2741) ಪಡೆದು ವಿರಾಜಪೇಟೆಗೆ ತೆರಳಿ ಪದಾರ್ಥಗಳನ್ನು ಖರೀದಿಸಿ ಗ್ರಾಮಕ್ಕೆ ಹಿಂತಿರುವಾಗ ಆಯತಪ್ಪಿ ಬಿದ್ದು, ತೀವ್ರವಾಗಿ ಗಾಯಗೊಂಡಿದ್ದ. ತಕ್ಷಣ ವಿರಾಜಪೇಟೆ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ, ವೈದ್ಯರ ಸಲಹೆ ಮೇರೆಗೆ ಮಡಿಕೇರಿ, ಮೈಸೂರು ಆಸ್ಪತ್ರೆಗೆ ದಾಖಲು ಮಾಡಲಾಯಿತು.

ಅಲ್ಲೆಲ್ಲೂ ಚಿಕಿತ್ಸೆಗೆ ಸ್ಪಂದಿಸದ ಕಾರಣ ದರ್ಶನ್‌ನನ್ನು ಮತ್ತೆ ವಿರಾಜಪೇಟೆ ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಕರೆತಂದು ದಾಖಲು ಮಾಡಲಾಯಿತು. ವೈದ್ಯರ ಸಲಹೆ ಮೇರೆಗೆ ಹೆಚ್ಚಿನ ಚಿಕಿತ್ಸೆಗಾಗಿ ನಿಮಾನ್ಸ್ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯದಲ್ಲಿ ದರ್ಶನ್ ಅಸುನೀಗಿದ ಎಂದು ಪೊಲೀಸರು ತಿಳಿಸಿದ್ದಾರೆ. ವಿರಾಜಪೇಟೆ ಗ್ರಾಮಾಂತರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

## ಹೃದಯ ಒಪ್ಪುವ ವೃತ್ತಿ ಆರಿಸಿಕೊಳ್ಳಿ: ರಾಜೇಂದ್ರ ಕುಮಾರ್ ಕಟಾರಿಯಾ



### ಗ್ರ್ಯಾಜುಯೇಷನ್ ಡೇನಲ್ಲಿ ಪ್ರಮಾಣಪತ್ರ ವಿತರಣೆ

ಗೋಣಿಕೊಪ್ಪ, ಫೆ.5– ಹೃದಯ ಒಪ್ಪಿಕೊಳ್ಳುವ ವೃತ್ತಿ ಆರಿಸಿಕೊಳ್ಳಿ ಎಂದು ತೋಟಗಾರಿಕೆ ಮತ್ತು ರೇಷ್ಮೆ ಕೃಷಿ ಇಲಾಖೆ ರಾಜ್ಯ ಮುಖ್ಯ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ ತಿಳಿಸಿದ್ದಾರೆ.

ಕಾಲ್ಸ್ ಶಾಲೆಯ 10 ನೇ ತರಗತಿ ವಿದ್ಯಾರ್ಥಿಗಳಿಗಾಗಿ ಶನಿವಾರ ಆಯೋಜಿಸಿದ್ದ ಗ್ರ್ಯಾಜುಯೇಷನ್ ಡೇ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ವಿತರಿಸಿ ಮಾತನಾಡಿದ ಅವರು, ವಿದ್ಯಾರ್ಥಿ ಜೀವನದಲ್ಲಿ ಗುರಿ, ಶ್ರಮ, ಶ್ರದ್ಧೆಯೊಂದಿಗೆ ಉತ್ಸಾಹ ಬೆರೆತರೆ ಯಶಸ್ಸು ಕಟ್ಟಿಟ್ಟಬುತ್ತಿ. ತಮ್ಮ ಮನಸ್ಸಿಗೆ ಹಿತ ತರುವಂತ ವೃತ್ತಿ ಆಯ್ಕೆ ಮಾಡಿಕೊಳ್ಳಬೇಕಿದೆ. ದೇಶದ ಕೌಟುಂಬಿಕ ಪದ್ಧತಿಯಲ್ಲಿ ಹಿರಿಯರು, ಕಿರಿಯರ ಸಮಾಗಮದಿಂದ ಮಕ್ಕಳ ಆತ್ಮವಿಶ್ವಾಸ ವೃದ್ಧಿಸಲು ಸಹಕಾರಿಯಾಗುತ್ತಿರುವುದು ಸಾಧನೆಗೂ ಹಾದಿಯಾಗಲಿದೆ. ಹಿರಿಯರ ಸಲಹೆ ಕೂಡ ಮುಖ್ಯ ಎಂದರು.

ಪ್ರಾಂಶುಪಾಲೆ ಬಾಚೆಟ್ಟೀರ ಗೌರಮ್ಮ ನಂಜಪ್ಪ ಮಾತನಾಡಿ, ಸೋಲಿಗೆ ಅಂಜದೆ ಗೆಲುವು ಪಡೆದುಕೊಳ್ಳುವ ಹಠ ಮುಖ್ಯವಾಗಬೇಕು. ಸ್ನೇಹ ಕೂಡ ಬದುಕಿಗೆ ಸಾಕಷ್ಟು ಯಶಸ್ಸು ತಂದುಕೊಡುತ್ತದೆ ಎಂದರು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಶುಭ ಕೋರಲಾಯಿತು. ವಿದ್ಯಾರ್ಥಿಗಳು ಅನುಭವ ಹಂಚಿಕೊಂಡರು. ಶಾಲಾ ಮುಖ್ಯಸ್ಥ ದತ್ತ ಕರುಂಬಯ್ಯ, ಮ್ಯಾನೇಜಿಂಗ್ ಟ್ರಸ್ಟಿ ಅಶ್ವಿನಿ ನಾಚಪ್ಪ ಇದ್ದರು.

## ರಕ್ತದಾನ ಮಾಡಿ ಜೀವ ಉಳಿಸಲು ಕರೆ

ಮಡಿಕೇರಿ, ಫೆ.5– ಕೊಡಗು ಜಿಲ್ಲಾ ಒಕ್ಕಲಿಗರ ಯುವ ವೇದಿಕೆ ವತಿಯಿಂದ ಶನಿವಾರ ಸಂತೆಯ ಗುಡುಗಳಲೆ ಗ್ರಾಮದಲ್ಲಿ ರಕ್ತದಾನ ಶಿಬಿರ ನಡೆಯಿತು. ಬಸಪ್ಪ ಕಲ್ಯಾಣ ಮಂಟಪದಲ್ಲಿ ನಡೆದ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಮನೆಹಳ್ಳಿ ಮಠದ ಶ್ರೀಮಹಾಂತ ಶಿವಲಿಂಗ ಸ್ವಾಮೀಜಿ, ಸಾರ್ವಜನಿಕರು ರಕ್ತದಾನ ಮಾಡಿ ಜೀವ ಉಳಿಸಬೇಕು. ಈ ರೀತಿಯ ಸಾಮಾಜಿಕ ಕಳಕಳಿಯ ಶಿಬಿರಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಬೇಕೆಂದು ಕರೆ ನೀಡಿದರು.

ರಕ್ತನಿಧಿ ಕೇಂದ್ರದ ವೈದ್ಯಾಧಿಕಾರಿ ಡಾ. ಕರುಂಬಯ್ಯ ಮಾತನಾಡಿ, ರಕ್ತಕ್ಕೆ ಯಾವುದೇ ಪರ್ಯಾಯ ವ್ಯವಸ್ಥೆಗಳಿಲ್ಲ. ಆದ್ದರಿಂದ ರಕ್ತದಾನ ಶಿಬಿರವನ್ನು ಹಮ್ಮಿಕೊಂಡು ರಕ್ತದ ಅಭಾವವನ್ನು ನೀಗಿಸುವ ಪ್ರಯತ್ನ ಮಾಡಲಾಗುತ್ತಿದೆ. ಜಿಲ್ಲೆಯ ವಿವಿಧ ಸಂಘ ಸಂಸ್ಥೆಗಳು ನಮ್ಮೊಂದಿಗೆ ಕೈಜೋಡಿಸಿವೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಯುವ ವೇದಿಕೆಯ ಅಧ್ಯಕ್ಷ ಗಿರೀಶ್ ಮಲ್ಲಪ್ಪ, ಮುಂದಿನ ದಿನಗಳಲ್ಲಿಯು ಈ ರೀತಿಯ ಆರೋಗ್ಯ ಶಿಬಿರ ಮತ್ತು ಜನೋಪಯೋಗಿ ಚಟುವಟಿಕೆಗಳನ್ನು ಆಯೋಜಿಸಲಾಗುವುದು ಎಂದು ತಿಳಿಸಿದರು. ವೇದಿಕೆಯ ನಿರ್ದೇಶಕ ರಕ್ಷಿತ್ ಶನಿವಾರಸಂತೆ, ನಿವೃತ್ತ ಯೋಧ ಪಿ.ಹೆಚ್. ಮಹೇಶ್, ಭರತ್ ಮತ್ತಿತರರು ಉಪಸ್ಥಿತರಿದ್ದರು.



# ಫೆ.8ರಿಂದ ಕೊಳ್ಳೇಗಾಲದಲ್ಲಿ ನುಡಿಹಬ್ಬ

## 2 ದಿನಗಳ ಕಾರ್ಯಕ್ರಮವೂ ವಿಭಿನ್ನ, ವಿಶಿಷ್ಟ, ಸರ್ವಾಧ್ಯಕ್ಷರಾಗಿ ಶಂಕನಪುರ ಆಯ್ಕೆ

ಕೊಳ್ಳೇಗಾಲ, ಫೆ.5– ಕೊಳ್ಳೇಗಾಲದಲ್ಲಿ ಫೆ.8 ಮತ್ತು 9ರಂದು ಜಿಲ್ಲಾಮಟ್ಟದ 12ನೇ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಲಿದ್ದು, ಕನ್ನಡಾಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಬೇಕು ಎಂದು ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷ ಕೊಂಗರಹಳ್ಳಿ ನಾಗರಾಜು, ತಾಲೂಕು ಕಾರ್ಯದರ್ಶಿ ಚಿಕ್ಕರಾಜು ತಿಳಿಸಿದ್ದಾರೆ.

ಗುರುಭವನದಲ್ಲಿ ಆಯೋಜಿಸಿದ್ದ ಜಂಟಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಬೆಳ್ಳಿ ಬೆಳಕಲ್ಲಿ ಕನ್ನಡದ ಜಾತ್ರೆ ಶೀರ್ಷಿಕೆಯಡಿ 12ನೇ ಸಾಹಿತ್ಯ ಸಮ್ಮೇಳನವು ಪಟ್ಟಣದ ಎಂಜಿಎಸ್‌ವಿ ಕಾಲೇಜು ಆವರಣದಲ್ಲಿ ಜರುಗುತ್ತಿದ್ದು, ಎರಡು ದಿನಗಳ ಕಾಲ ವಿಜೃಂಭಣೆಯಿಂದ ನಡೆಯಲಿದೆ. ಕಾರ್ಯಕ್ರಮಕ್ಕೆ ಎಲ್ಲಾ ಕನ್ನಡದ ಮನಸ್ಸುಗಳು, ಸಂಘ, ಸಂಸ್ಥೆ ಪದಾಧಿಕಾರಿಗಳು ಪಾಲ್ಗೊಂಡು ಯಶಸ್ವಿಗೊಳಿಸಬೇಕು, ಫೆ8ರಂದು ನಡೆಯುವ ಕಾರ್ಯಕ್ರಮವನ್ನು ಕಸಾಪ ರಾಜ್ಯಾಧ್ಯಕ್ಷ ನಾಡೋಜ



ಮಹೇಶ್ ಜೋಷಿ ಉದ್ಘಾಟಿಸಲಿದ್ದಾರೆ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಸೋಮಣ್ಣ ಅವರು ಕನ್ನಡಾಂಬೆಗೆ ಪುಷ್ಪಾರ್ಚನೆ ನೆರವೇರಿಸಲಿದ್ದಾರೆ. ಕೊಳ್ಳೇಗಾಲ ಶಾಸಕ ಎನ್. ಮಹೇಶ್ ಅಧ್ಯಕ್ಷತೆ ವಹಿಸಲಿದ್ದಾರೆ. ಜಿಲ್ಲಾಧ್ಯಕ್ಷ ಶೈಲಕುಮಾರ್, ವಿವಿಧ ತಾಲೂಕು ಅಧ್ಯಕ್ಷರು, ಪದಾಧಿಕಾರಿಗಳು ಮತ್ತು ಮಾಜಿ ಶಾಸಕರುಗಳು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

**ಸರ್ವಾಧ್ಯಕ್ಷರಾಗಿ ಶಂಕನಪುರ ಮಹದೇವ ಆಯ್ಕೆ:** ಈ ಸಮ್ಮೇಳನಕ್ಕೆ ಸರ್ವಾಧ್ಯಕ್ಷರಾಗಿ ಹಿರಿಯ ಸಾಹಿತಿ ಶಂಕನಪುರ ಮಹದೇವ ಅವರನ್ನು ಆಯ್ಕೆ ಮಾಡಲಾಗಿದ್ದು, ಅವರನ್ನು ಕನ್ನಡ ತೇರಿನ ಮೇಲೆ ಕುಳಿತು ಮೆರವಣಿಗೆ ಮೂಲಕ ವೇದಿಕೆಗೆ ಆಗಮಿಸುವರು. ವೇದಿಕೆ ಕಾರ್ಯಕ್ರಮದಲ್ಲಿ ಗುಂಡ್ಲುಪೇಟೆ ಶಾಸಕ ನಿರಂಜನ್ ಕುಮಾರ್, ಹನೂರು ಶಾಸಕ ಆರ್. ನರೇಂದ್ರ, ಚಾ.ನಗರ ಶಾಸಕ ಪುಟ್ಟರಂಗಶೆಟ್ಟಿ , ನಗರಸಭಾಧ್ಯಕ್ಷೆ ರೇಖಾ ರಮೇಶ್, ಉಪಾಧ್ಯಕ್ಷೆ ಸುಶೀಲ ಸೇರಿದಂತೆ ಅನೇಕ ಗಣ್ಯರು ಪಾಲ್ಗೊಳ್ಳಲಿದ್ದಾರೆ ಎಂದು ಅವರು ವಿವರಿಸಿದರು.

ಸಮಾರಂಭದಲ್ಲಿ ಮಹಾದ್ವಾರವನ್ನು ಕಾಡಾ ಅಧ್ಯಕ್ಷ ನಿಜಗುಣರಾಜು ಉದ್ಘಾಟಿಸುವರು, ಮುದ್ದು ಮಾದಪ್ಪ ಪ್ರಶಸ್ತಿಯನ್ನು ಹಿರಿಯ ಸಾಹಿತಿ ಹೊರೆಯಾಲ ದೊರೆಸ್ವಾಮಿ ಅವರಿಗೆ ಪ್ರದಾನ ಮಾಡಲಾಗುವುದು, ವಿಧಾನ ಪರಿಷತ್ ಸದಸ್ಯರುಗಳಾದ ಮರಿತಿಬ್ಬೆಗೌಡ, ಡಾ.ತಿಮ್ಮಯ್ಯ, ಮಧುಮಾದೇಗೌಡ, ಮಂಜೇಗೌಡ ಭಾಗವಹಿಸುವರು.

ವಿಚಾರಗೋಷ್ಠಿ, ಕವಿಗೋಷ್ಠಿ, ಸಾಧಕರಿಗೆ ಸನ್ಮಾನ, ಸರ್ವಾಧ್ಯಕ್ಷರೊಂದಿಗೆ ಸಂವಾದ, ಬಹಿರಂಗ ಅಧಿವೇಶನ, ಸಾಂಸ್ಕೃತಿಕ ಕಾರ್ಯಕ್ರಮಗಳು, ಮಿಮಿಕ್ರಿ ಕಲಾವಿದ ಗೋಪಿ ಅವರಿಂದ ಹಾಸ್ಯ ರಸದೌತಣ ಸೇರಿದಂತೆ ಇನ್ನಿತರೆ ಕಾರ್ಯಕ್ರಮ ಜರುಗಲಿದೆ ಎಂದು ವಿವರಿಸಿದರು. ಈ ಸಂದರ್ಭದಲ್ಲಿ ಕಾರ್ಯದರ್ಶಿ ಸಿ ನಾಗರಾಜು, ಪದಾಧಿಕಾರಿಗಳಾದ ಶಾಂತಮೂರ್ತಿ, ಬಸವರಾಜು, ರಘು, ಶಿಕ್ಷಕರ ಸಂಘದ ಕಾರ್ಯದರ್ಶಿ ನಂದೀಶ್ ಇನ್ನಿತರರು ಇದ್ದರು.

## ಚಾ.ನಗರ ರಸ್ತೆ–ವೃತ್ತಕ್ಕೆ ಪ್ರೊ. ಎಂಡಿಎನ್ ಹೆಸರು ನಾಮಕರಣ

### ಫೆ.13, ಪ್ರೊ. ಎಂ.ಡಿ. ನಂಜುಂಡಸ್ವಾಮಿ ದಿನಾಚರಣೆ, ಪ್ರೊ. ಎಂಡಿಎನ್ ಭಾವಚಿತ್ರ ಮೆರವಣಿಗೆ




> **ಮೇಧಾ ಪಾಟ್ಕರ್, ಯೋಗೇಂದ್ರ ಯಾದವ್ ಭಾಗಿ**
> ಪ್ರೊಫೆಸರ್ ಎಂಡಿಎನ್ ನೆನಪಿನ ದಿನಾಚರಣೆ ಅಂಗವಾಗಿ ಫೆ. 13ರಂದು ಮಧ್ಯಾಹ್ನ 2 ಗಂಟೆಗೆ ನಗರದ ನಂದಿ ಭವನದಲ್ಲಿ ಸಭಾ ಕಾರ್ಯಕ್ರಮ ನಡೆಯಲಿದೆ. ಪರಿಸರ ಹೋರಾಟಗಾರ್ತಿ ಮೇಧಾ ಪಾಟ್ಕರ್, ಸ್ವರಾಜ್ ಇಂಡಿಯಾದ ಯೋಗೇಂದ್ರ ಯಾದವ್, ರಾಜ್ಯ ರೈತ ಸಂಘದ ಮುಖಂಡರು, ಜಿಲ್ಲಾ ಉಸ್ತುವಾರಿ ಸಚಿವರು, ಕ್ಷೇತ್ರದ ಶಾಸಕರು ಭಾಗವಹಿಸಲಿದ್ದಾರೆ ಎಂದು ಮಹೇಶ್‌ಪ್ರಭು ತಿಳಿಸಿದರು.

ಚಾಮರಾಜನಗರ, ಫೆ.5– ರೈತ ನಾಯಕ, ಅಂತಾರಾಷ್ಟ್ರಿಯ ಮಟ್ಟದಲ್ಲಿ ರೈತ ಚಳವಳಿಗೆ ಮುನ್ನುಡಿ ಬರೆದ ವಿಶ್ವ ರೈತ ಚೇತನ ದಿ. ಪ್ರೊ.ಎಂ.ಡಿ. ನಂಜುಂಡಸ್ವಾಮಿ ಅವರ ನೆನಪಿನ ದಿನಾಚರಣೆ ಅಂಗವಾಗಿ ನಗರದಲ್ಲಿ ಫೆ.13 ರಂದು ನಗರದ ರಸ್ತೆ ಮತ್ತು ವೃತ್ತಕ್ಕೆ ಎಂಡಿಎನ್ ಹೆಸರನ್ನು ನಾಮಕರಣ ಮಾಡಲಾಗುವುದು ಎಂದು ರಾಜ್ಯ ರೈತ ಸಂಘದ ಉಪಾಧ್ಯಕ್ಷ ಎ.ಎಂ. ಮಹೇಶ್‌ಪ್ರಭು ತಿಳಿಸಿದರು.

ಇದೇ ಸಂದರ್ಭದಲ್ಲಿ ರಾಜ್ಯಮಟ್ಟದ ಯುವ ವಿಭಾಗದ ಕಾರ್ಯಕ್ರಮ ಹಾಗೂ ವಿಜ್ಞಾನ ಪರಿಷತ್ ಉದ್ಘಾಟನಾ ಕಾರ್ಯಕ್ರಮವನ್ನು ರೈತಸಂಘ ರಾಜ್ಯಸಮಿತಿ ಹಾಗೂ ಜಿಲ್ಲಾ ಸಮಿತಿ ವತಿಯಿಂದ ಹಮ್ಮಿಕೊಳ್ಳಲಾಗಿದೆ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ರೈತಸಂಘವನ್ನು ವೈಚಾರಿಕವಾಗಿ ಮುನ್ನಡೆಸಿ, ಅದನ್ನು ಗಟ್ಟಿಗೊಳಿಸಿದವರು ಪ್ರೊ. ನಂಜುಂಡಸ್ವಾಮಿ ಅವರು, ಅವರು ನಮ್ಮನ್ನಗಲಿ 19 ವರ್ಷಗಳೇ ಸಂದಿದೆ. ಸರ್ಕಾರದ ರೈತ ವಿರೋಧಿ ನೀತಿಗಳ ಬಗ್ಗೆ ಎಚ್ಚರಿಸಿ, ರೈತರ ಧನಿಯಾಗಿ ಹೋರಾಟ ನಡೆಸಿದ ಅವರ ಆದರ್ಶಗಳನ್ನು ಮುನ್ನಡೆಸಿಕೊಂಡು ಹೋಗುವುದು ಪಕ್ಷಾತೀತವಾಗಿ ಎಲ್ಲರ ಜವಾಬ್ದಾರಿಯಾಗಿದೆ. ಈಚಿನ ವರ್ಷಗಳಲ್ಲಿ ದೇಶದ ಯುವ ಜನತೆ ಕೃಷಿ ಲಾಭದಾಯಕ ಕ್ಷೇತ್ರವಲ್ಲ ಎಂಬ ದೃಷ್ಟಿಯಿಟ್ಟುಕೊಂಡು, ಕೃಷಿಯಿಂದ ವಿಮುಖರಾಗುತ್ತಿದ್ದಾರೆ. ಇದರಿಂದ ಮುಂದಿನ ದಿನಗಳಲ್ಲಿ ದೇಶಕ್ಕೆ ಆಹಾರದ ಕೊರತೆಯಾಗಲಿದ್ದು, ಇಂತಹ ಸಮಸ್ಯೆ ಎದುರಾಗದಂತೆ ತಡೆಯಲು ಯುವ ಜನರನ್ನು ಕೃಷಿಯಲ್ಲಿ ತೊಡಗಿಸಿಕೊಳ್ಳುವಂತ ಇಂತಹ ಕಾರ್ಯಕ್ರಮಗಳ ಅಗತ್ಯವಿದೆ. ಅದನ್ನು ಮನಗಂಡು, ಫೆ.13 ರಂದು ರಾಜ್ಯ ಮಟ್ಟದ ಯುವರೈತ ವಿಭಾಗ ಉದ್ಘಾಟನಾ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಹೇಳಿದರು.

ರಾಜ್ಯಮಟ್ಟದ ಯುವ ವಿಭಾಗದ ಕಾರ್ಯಕ್ರಮದ ಅಂಗವಾಗಿ ಅಂದು ಬೆಳಗ್ಗೆ 10ಕ್ಕೆ ನಗರದ ಪ್ರವಾಸಿಮಂದಿರದಿಂದ ಎಂಡಿಎನ್ ಅವರ ಭಾವಚಿತ್ರದ ಮೆರವಣಿಗೆಗೆ ಚಾಲನೆ ನೀಡಲಾಗುತ್ತದೆ. ಎತ್ತಿನಗಾಡಿ, ಟ್ರಾಕ್ಟರ್‌ಗಳ ಮೆರವಣಿಗೆ ಪ್ರವಾಸಿಮಂದಿರದ ಆವರಣದಿಂದ ನಗರದ ಪ್ರಮುಖ ಬೀದಿಗಳ ಮೂಲಕ ಸಾಗಿ, ಎಲ್‌ಐಸಿ ಕಚೇರಿ ಬಳಿ ಸಮಾವೇಶಗೊಂಡು, ರಸ್ತೆ ಅಥವಾ ವೃತ್ತಕ್ಕೆ ಎಂಡಿಎನ್ ಅವರ ಹೆಸರನ್ನು ನಾಮಕರಣ ಮಾಡುವ ಕಾರ್ಯಕ್ರಮ ನಡೆಯಲಿದೆ ಎಂದರು. ಮೆರವಣಿಗೆ ಹಿನ್ನೆಲೆಯಲ್ಲಿ ರೈತರು ತಮ್ಮ ತಮ್ಮ ಗ್ರಾಮಗಳಿಂದ ಎತ್ತಿನಗಾಡಿ, ಟ್ರಾಕ್ಟರ್ ಸಮೇತ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು. ಕಾರ್ಯಕ್ರಮದಲ್ಲಿ ಎಲ್ಲರೂ ಪಕ್ಷಾತೀತವಾಗಿ ಭಾಗಮಹಿಸ ಬೇಕು ಎಂದು ಮಹೇಶ್ ಪ್ರಭು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ರೈತ ಸಂಘದ ಜಿಲ್ಲಾಧ್ಯಕ್ಷ ಹೆಬ್ಬಸೂರು ಬಸವಣ್ಣ, ಜಿಲ್ಲಾ ಕಾಂರ್ಯಾಧ್ಯಕ್ಷ ಶೈಲೇಂದ್ರ, ಜಿಲ್ಲಾ ಗೌರವಾಧ್ಯಕ್ಷ ಚಿನ್ನಸ್ವಾಮಿ ಗೌಂಡರ್, ಪ್ರಧಾನ ಕಾರ್ಯದರ್ಶಿ ಸಿದ್ದರಾಜು, ಮರಿಯಾಲ ಮಹೇಶ್, ಬಾಬು ಉಪಸ್ಥಿತರಿದ್ದರು.

## ಅನಧಿಕೃತ ಫ್ಲೆಕ್ಸ್ ತೆರವಿಗೆ ಆಗ್ರಹಿಸಿ ಪ್ರತಿಭಟನೆ



ಚಾಮರಾಜನಗರ, ಫೆ5– ನಗರದ ವಿವಿಧ ಕಡೆಗಳಲ್ಲಿ ಅಳವಡಿಸಿರುವ ಅನಧಿಕೃತ ಫ್ಲೆಕ್ಸ್‌ಗಳನ್ನು ತೆರವುಗೊಳಿಸಬೇಕು ಎಂದು ಆಗ್ರಹಿಸಿ ನಗರದಲ್ಲಿ ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾದ ಜಿಲ್ಲಾ ಘಟಕದಿಂದ ಪ್ರತಿಭಟನೆ ನಡೆಯಿತು.

ನಗರದ ಬಿ.ರಾಚಯ್ಯ ಜೋಡಿ ರಸ್ತೆಯ ಡಿವೈಡರ್ ಮೇಲೆ ಅಳವಡಿಸಿರುವ ಫ್ಲೆಕ್ಸ್ ಮುಂಭಾಗ ಜಮಾಯಿಸಿದ ಎಸ್‌ಡಿಪಿಐನ ನಗರಸಭಾ ಸದಸ್ಯರು ಜಿಲ್ಲಾಡಳಿತ ಹಾಗೂ ನಗರಸಭೆಯ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಎಸ್‌ಡಿಪಿಐ ಜಿಲ್ಲಾಧ್ಯಕ್ಷ ಅಬ್ರಾರ್ ಅಹಮ್ಮದ್ ಮಾತನಾಡಿ, ಈಗಾಗಲೇ ಬಿ. ರಾಚಯ್ಯ ಜೋಡಿ ರಸ್ತೆಯ ಡಿವೈಡರ್ ಮೇಲೆ ಫ್ಲೆಕ್ಸ್‌ಗಳನ್ನು ಹಾಕಬಾರದು. ನಗರಸಭೆಯ ಸಾಮಾನ್ಯ ಸಭೆಯಲ್ಲಿ ಈ ಬಗ್ಗೆ ತೀರ್ಮಾನ ಕೈಗೊಳ್ಳಲಾಗಿದೆ. ಅಲ್ಲದೇ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರವು ಈ ನಿರ್ದಿಷ್ಟ ಸ್ಥಳದಲ್ಲಿ ಫ್ಲೆಕ್ಸ್ ಹಾಕದಿರುವಂತೆ ನಗರಸಭೆ ಪೌರಾಯುಕ್ತರಿಗೆ ಲಿಖಿತ ಪತ್ರ ನೀಡಿ ಕ್ರಮ ಜರುಗಿಸುವಂತೆ ಸೂಚನೆ ನೀಡಿದ್ದಾರೆ ಎಂದರು.

ಆದರೂ ಎಲ್ಲ ನೀತಿ–ನಿಯಮಗಳನ್ನು ಗಾಳಿಗೆ ತೂರಿ ಅನಧಿಕೃತ ಫ್ಲೆಕ್ಸ್‌ಗಳನ್ನು ಹಾಕಲಾಗಿದೆ. ರಾಜಕೀಯ ಒತ್ತಡಕ್ಕೆ ಮಣಿದಿರುವ ಪೌರಾಯುಕ್ತರ ನಡೆ ಅತ್ಯಂತ ಖಂಡನೀಯ. ಕೂಡಲೇ ಪೌರಾಯುಕ್ತರು ಎಚ್ಚೆತ್ತುಕೊಂಡು ಈ ಸಂಬಂಧ ಕ್ರಮ ಜರುಗಿಸಬೇಕು. ಇಲ್ಲದಿದ್ದರೆ ಪೌರಾಯುಕ್ತರ ಕಚೇರಿಗೆ ಬೀಗ ಜಡಿದು ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು. ಪ್ರತಿಭಟನೆಯಲ್ಲಿ ನಗರಸಭಾ ಸದಸ್ಯರಾದ ಎಂ. ಮಹೇಶ್, ಕಲೀಲ್‌ಉಲ್ಲಾ, ಮಹಮ್ಮದ್ ಅಮೀಕ್, ಮುಖಂಡ ಇಸ್ರಾರ್ ಪಾಷ ಸೇರಿದಂತೆ ಇತರರು ಇದ್ದರು.

## ರೋಟರಿ ಸಂಸ್ಥೆಯಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ ಯಶಸ್ವಿ

### 200 ಮಂದಿ ತಪಾಸಣೆ, 100 ಮಂದಿ ಶಸ್ತ್ರಚಿಕಿತ್ಸೆಗೆ ಆಯ್ಕೆ




ಚಾಮರಾಜನಗರ, ಫೆ.5– ರೋಟರಿ ಸಂಸ್ಥೆ ವತಿಯಿಂದ ನಗರದಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ ಬಹಳ ಯಶಸ್ವಿಯಾಗಿ ನಡೆಯಿತು.

ನಗರದ ಬಿ.ರಾಚಯ್ಯ ಜೋಡಿ ರಸ್ತೆಯಲ್ಲಿರುವ ರೋಟರಿ ಭವನದಲ್ಲಿ ಪ್ರತಿ ತಿಂಗಳ ಮೊದಲನೆಯ ಭಾನುವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಷ್ಟ್ರೀಯ ಅಂಧತ್ವ ನಿಯಂತ್ರಣ ಕಾರ್ಯಕ್ರಮ, ನಮ್ಮ ರೋಟರಿ ನಮ್ಮ ಆರೋಗ್ಯ ಸಿರಿ ಎಂಬ ಅಭಿಯಾನದಡಿ ರೋಟರಿ ಸಂಸ್ಥೆ, ಕಾವೇರಿ ಡಯಾಗ್ನೋಸ್ಟಿಕ್ ಸೆಂಟರ್, ಅರವಿಂದ ಕಣ್ಣಿನ ಆಸ್ಪತ್ರೆಯ ಸಂಯುಕ್ತಾಶ್ರಯದಲ್ಲಿ ನಡೆದ ಉಚಿತ ಕಣ್ಣಿನ ತಪಾಸಣೆ ಶಿಬಿರದಲ್ಲಿ 200 ಮಂದಿ ತಪಾಸಣೆಗೊಳಗಾದರು. 100 ಮಂದಿ ಶಸ್ತ್ರ ಚಿಕಿತ್ಸೆಗೆ ಆಯ್ಕೆಯಾಗಿದ್ದು, ಅವರನ್ನು ಕೊಯಂಬತ್ತೂರಿನ ಅರವಿಂದ ಕಣ್ಣಿನ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಶಿಬಿರದಲ್ಲಿ ವ್ಯವಸ್ಥೆ ಮಾಡಲಾಯಿತು.

ರೋಟರಿ ಅಧ್ಯಕ್ಷ ಕೆ.ಎಂ.ಮಹದೇವಸ್ವಾಮಿ ಮಾತನಾಡಿ, ಕಣ್ಣಿನ ದೃಷ್ಟಿ ಎಲ್ಲರಿಗೂ ಮಹತ್ವದ್ದು, ಅದರಲ್ಲೂ ವಿಶೇಷವಾಗಿ ಮಹಿಳೆಯರು, ವಯೋವೃದ್ಧರೇ ಹೆಚ್ಚಿನ ಸಂಖ್ಯೆಯಲ್ಲಿ ಕಣ್ಣಿನ ಪೊರೆಗೆ ತುತ್ತಾಗುತ್ತಿದ್ದಾರೆ. ಆರ್ಥಿಕವಾಗಿ ದುರ್ಬಲರಾಗಿದ್ದು ದಿನನಿತ್ಯ ಜೀವನದಲ್ಲಿ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಅವರಿಗೆ ಅನುಕೂಲ ಕಲ್ಪಿಸಲು ರೋಟರಿ ಸಂಸ್ಥೆಯು ಪ್ರತಿ ತಿಂಗಳು ಮೊದಲನೆಯ ಭಾನುವಾರ ಉಚಿತ ನೇತ್ರ ತಪಾಸಣಾ ಶಿಬಿರವನ್ನು ಆಯೋಜಿಸಿದ್ದು, ಇದರ ಸದುಪಯೋಗವನ್ನು ಜನತೆ ಪಡೆದುಕೊಳ್ಳಬೇಕು ಎಂದು ಮನವಿ ಮಾಡಿದರು.

ಕಾವೇರಿ ಡಯೊಗ್ನೋಸ್ಟಿಕ್ ಸೆಂಟರ್ ಮಾಲೀಕರು, ರೋಟರಿ ಸಂಸ್ಥೆಯ ಸದಸ್ಯ ರಾಮು ಅವರು ಶಿಬಿರದಲ್ಲಿ ಕಣ್ಣಿನ ಶಸ್ತ್ರಚಿಕಿತ್ಸೆಗೆ ಆಯ್ಕೆಯಾಗಿದ್ದು, ಕೊಯಂಬತ್ತೂರಿನ ಅರವಿಂದ ಕಣ್ಣಿನ ಆಸ್ಪತ್ರೆಗೆ ತೆರಳುತ್ತಿರುವವರಿಗೆ 100 ಮಂದಿಗೂ ಊಟದ ವ್ಯವಸ್ಥೆ ಮಾಡಿಸಿದರು. ಕಾರ್ಯಕ್ರಮದಲ್ಲಿ ರೋಟರಿ ಸಂಸ್ಥೆ ಸಂಸ್ಥಾಪಕ ಸದಸ್ಯ ಸಿ.ವಿ.ಶ್ರೀನಿವಾಸ ಶೆಟ್ಟಿ, ಜಿ ಆರ್ ಅಶ್ವಥ್ ನಾರಾಯಣ್, ಕಾರ್ಯದರ್ಶಿ ಕಾಗಲವಾಡಿಚಂದ್ರು, ಯೋಗರಾಜು, ಉಪಾಧ್ಯಕ್ಷ ಎಲ್.ನಾಗರಾಜು, ಮುಂದಿನ ಸಾಲಿನ ಅಧ್ಯಕ್ಷ ಚಂದ್ರಪ್ರಭು ಜೈನ್, ಉಚಿತ ಕಣ್ಣಿನ ಶಿಬಿರದ ಮೇಲ್ವಿಚಾರಕ ವಿಜಯಕಾಂತ್, ಡಾ. ಪರಮೇಶ್ವರಪ್ಪ ಇತರರು ಹಾಜರಿದ್ದರು.

## ವಿಜೃಂಭಣೆಯ ಶ್ರೀ ಓಂಕಾರ ಸಿದ್ದೇಶ್ವರ ಸ್ವಾಮಿಯ ಚಿಕ್ಕಜಾತ್ರೆ



ಬೇಗೂರು(ಗುಂಡ್ಲುಪೇಟೆ), ಫೆ.5– ಸಮೀಪದ ಹೊಣಕನಪುರ ಗ್ರಾಮದ ಶ್ರೀ ಓಂಕಾರ ಸಿದ್ದೇಶ್ವರ ಸ್ವಾಮಿಯ ಚಿಕ್ಕ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು.

ಓಂಕಾರ ಸಿದ್ದೇಶ್ವರ ಸ್ವಾಮಿ ಉತ್ಸವಮೂರ್ತಿಯು ಛತ್ರಿ–ಛಾಮರ, ತಮಟೆ, ಸತ್ತಿಗೆ ಬಿರುದುಗಳ ಸಮೇತ ದೇವಾಲಯದ ಸುತ್ತ ಪ್ರದಕ್ಷಿಣೆ ನಡೆಸಿದರೆ ಹಿಂಭಾಗದಲ್ಲಿ ಚಿಕ್ಕ–ಚಿಕ್ಕ ರಥಗಳು ಮತ್ತು ವಾಹನಗಳು ಮೂರ್‍ನಾಲ್ಕು ಬಾರಿ ಪ್ರದಕ್ಷಿಣೆ ಹಾಕುವುದು ವಿಶೇಷ. ಸಂಜೆ ವೇಳೆಗೆ ರಥಗಳನ್ನು ತಮ್ಮ ಗ್ರಾಮಕ್ಕೆ ಎಳೆದುಕೊಂಡು ಹೋಗುವುದು ಗ್ರಾಮದ ಛಾವಡಿಗಳಲ್ಲಿ ಗ್ರಾಮಸ್ಥರು ಪೂಜೆ ಸಲ್ಲಿಸುವುದು, ತೇರು ಹಾಗೂ ವಾನಗಳನ್ನು ಎಳೆದು ತರುವುದು ವಿಶೇಷ.

**ಮಹಿಳೆಯರಿಂದ ಎಡೆಪೂಜೆ:** ಸುತ್ತ–ಮುತ್ತಲ ಗ್ರಾಮಗಳ ಮಹಿಳೆಯರು ಉಪವಾಸದೊಂದಿಗೆ ದೇವಾಲಯದ ಆವರಣಕ್ಕೆ ತೆರಳಿ ಅಲ್ಲಿಯೇ ಬೆಲ್ಲದನ್ನದ ಪರ್ವ ತಯಾರಿಸಿ ನಂತರ ಈ ಅನ್ನವನ್ನು ದೇವಾಲಯದೊಳಗೆ ಕೊಂಡೊಯ್ದು ಪೂಜೆ ಸಲ್ಲಿಸಿದ ನಂತರ ಉಪಾಹಾರ ಸೇವಿಸುತ್ತಾರೆ. ನೆರೆಹೊರೆಯ ಗ್ರಾಮಗಳ ಭಕ್ತರು ಜಾತ್ರೆಯಲ್ಲಿ ಪಾಲ್ಗೊಂಡಿದ್ದರು.

## ನಾಗಮ್ಮ ನಿಧನ

ಚಾಮರಾಜನಗರ, ಫೆ.5– ತಾಲೂಕು ಕಮರವಾಡಿ ಗ್ರಾಮದ ಕಾಂಗ್ರೆಸ್ ನಾಯಕ ರಾಜಣ್ಣನವರ ತಾಯಿ ನಾಗಮ್ಮ (85) ಅವರು ಮಧ್ಯಾಹ್ನ ನಿಧನರಾಗಿದ್ದಾರೆ. ಮೃತರು ನಾಲ್ವರು ಪುತ್ರಿಯರು, ಮೂವರು ಪುತ್ರರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸೋಮವಾರ ಮಧ್ಯಾಹ್ನ 1 ಗಂಟೆಗೆ ಅವರ ತೋಟದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಒಂದನೇ ಪುಟದಿಂದ

## ಜಿಟಿಡಿ ಮಹಾ ಶಕ್ತಿ ಪ್ರದರ್ಶನ

**ಆರೋಪಕ್ಕೆ ಇದೇ ಉತ್ತರ:** ಕಾರ್ಯಕ್ರಮದಲ್ಲಿ ಶಾಸಕ ಜಿ.ಟಿ.ದೇವೇಗೌಡರು ಮಾತನಾಡಿ, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರ ಸುಪುತ್ರ ನಿಖಿಲ್ ಕುಮಾರಸ್ವಾಮಿ ಹಾಗೂ ನನ್ನ ಪುತ್ರ ಜಿ.ಡಿ.ಹರೀಶ್‌ಗೌಡರ ಹುಟ್ಟುಹಬ್ಬ ಆಚರಣೆಯಲ್ಲಿ ಭಾಗಿಯಾಗಲೆಂದು ಬೆಳಗ್ಗಿನಿಂದಲೇ ನೀವೆಲ್ಲಾ ನೆರೆದಿದ್ದೀರಿ. ನೀವೆಲ್ಲಾ ಯಾವ ಕ್ಷೇತ್ರದವರು, ಚಾಮುಂಡೇಶ್ವರಿ ಕ್ಷೇತ್ರದವರು ದಯಮಾಡಿ ಕೈಯೆತ್ತಿ ಎಂದಾಗ ನೆರೆದಿದ್ದವರೆಲ್ಲಾ ಕೈ ಮೇಲೆತ್ತಿದರು. ಕಾರ್ಯಕರ್ತರ ಹರ್ಷೋದ್ಗಾರದ ನಡುವೆ ಜಿಟಿಡಿ 'ಹೋ.. ಹೋ... ಯಾರೋ ಕೇಳಿದ್ದರಲ್ಲಪ್ಪ, ಇಲ್ಲಿ ನೋಡಿ. ನಾವು ಪ್ರೀತಿ ಮಾಡೋದೇ ತಪ್ಪಾ, ಎಲ್ಲರನ್ನೂ ನಂಬುವುದೇ ತಪ್ಪಾ. ಇಂದು ಇಡೀ ಇಡೀ ದೇಶಕ್ಕೆ ಚಾಮುಂಡೇಶ್ವರಿ ಕ್ಷೇತ್ರದ ಜನರ ಶಕ್ತಿ ಗೊತ್ತಾಗಿದೆ. ಕ್ಷೇತ್ರದ ಎಲ್ಲಾ ಕಡೆಯಿಂದ ತಾಯಂದಿರು, ಹಿರಿಯರು, ಸಹೋದರರು, ಯುವಕರು ಸೇರಿದಂತೆ ಒಂದು ಲಕ್ಷಕ್ಕೂ ಅಧಿಕ ಜನ ಬಂದಿದ್ದೀರಿ. ನಾವು ಯಾರ ವಿರುದ್ಧವೂ ಮಾತನಾಡಿಲ್ಲ, ಮೌನವಾಗಿದ್ದೇವೆ. ಆರೋಪ ಮಾಡಿದವರಿಗೆ ಇದೊಂದೇ ಉತ್ತರ' ಎಂದು ನಯವಾಗಿಯೇ ತಮ್ಮ ವಿರೋಧಿಗಳಿಗೆ ಟಾಂಗ್ ನೀಡಿದರು.

**ಜನರೇ ಹೇಳುತ್ತಾರೆ:** ಜಿ.ಟಿ.ದೇವೇಗೌಡ ಚಾಮುಂಡೇಶ್ವರಿ ಕ್ಷೇತ್ರಕ್ಕೆ ಶಾಸಕನಾದ ನಂತರ ಇಲ್ಲಿನ ಹಳ್ಳಿಗಳ ಅಭಿವೃದ್ಧಿ ಆಗಿದೆಯೋ ಅಥವಾ ಆದ್ಯಂತ ಏಂದರೆ ಇಲ್ಲವೋ ಎನ್ನುವುದನ್ನು ಜನರೇ ಹೇಳುತ್ತಾರೆ. ಪ್ರತಿ ಗ್ರಾಮಗಳಿಗೆ ಬೀದಿದೀಪ, ಚರಂಡಿ, ರಸ್ತೆ, ಕುಡಿಯುವ ನೀರು ಸೇರಿದಂತೆ ಎಲ್ಲಾ ಸೌಕರ್ಯಗಳು, ಕೆರೆಗಳಿಗೆ ನೀರು ತುಂಬಿಸುವುದು, ಉಂಡುವಾಡಿ, ಮೇಳಾಪುರ, ಕಬಿನಿ ಕುಡಿಯುವ ನೀರು ಯೋಜನೆ, ಹೊಸ ನಾಲ್ಕು ಪಟ್ಟಣ ಪಂಚಾಯಿತಿ, ಒಂದು ನಗರ ಸಭೆ ಸ್ಥಾಪನೆ, ಹೀಗೆ ಅಭಿವೃದ್ಧಿ ಕಾರ್ಯಗಳಲ್ಲಿ ಚಾಮುಂಡೇಶ್ವರಿ ಕ್ಷೇತ್ರ ದಾಖಲೆ ಮಾಡಿದೆ. ಕೊರೊನಾ ಸಂದರ್ಭದಲ್ಲಿ ಜಿಟಿಡಿ ಏನು ಮಾಡಿದರೆಂದು ಕೆಲವರು ಪ್ರಶ್ನಿಸಿದ್ದಾರೆ. ಆ ವೇಳೆ ಪಂಚಾಯ್ತಿ ಅಧಿಕಾರಿಗಳ ಮೂಲಕ ಮನೆ ಮನೆಗೆ ಅಗತ್ಯ ವಸ್ತು ತಲುಪಿಸಿದ್ದು ಸರ್ಕಾರದಲ್ಲ, ಜಿ.ಟಿ.ದೇವೇ ಗೌಡ ಹಾಗೂ ಹರೀಶ್‌ಗೌಡ ಸ್ವಂತ ಹಣದಿಂದ ನೀಡಿದ್ದು. ಆದರೂ ಕೆಲವರು ಆರೋಪ ಮಾಡುತ್ತಾರೆ. ಆದರೆ ಕ್ಷೇತ್ರದ ಜನ ಅವರ ಮಾತುಗಳನ್ನು ನಂಬುವುದಿಲ್ಲ. ತಮ್ಮ ಶಕ್ತಿ ಪ್ರದರ್ಶನವನ್ನು ಸವಾಲಾಗಿ ಸ್ವೀಕರಿಸಿ ಜನರೇ ಉತ್ತರ ನೀಡಿದ್ದಾರೆ. ನಮಗೆ ನಾವೇ ಸಾಟಿ ಎನ್ನುವುದನ್ನು ಮತ್ತೆ ನಿರೂಪಿಸಿದ್ದೀರಿ ಎಂದು ಕೃತಜ್ಞತೆ ಸಲ್ಲಿಸಿದರು.

**ಪಕ್ಷಕ್ಕಾಗಿ, ನಮಗಾಗಿ ಬಂದಿದ್ದೀರಿ:** ರೋಡ್ ಶೋನಲ್ಲಿ ಆಗಮಿಸಿದ ನಿಖಿಲ್ ಹಾಗೂ ಹರೀಶ್‌ಗೌಡರನ್ನು ನಾಗನಹಳ್ಳಿ, ಸಿದ್ದಲಿಂಗಪುರ, ಕೆ.ಆರ್.ಮಿಲ್ ಕಾಲೋನಿ, ಪಿನಕಲ್, ಬೋಗಾದಿ, ಶ್ರೀರಾಂಪುರ, ಕೋಟೆಮಂಡಿ, ಗೋಪಾಲಪುರ, ಸಾಲುಂಡಿ ಸೇರಿದಂತೆ ಹಲವು ಗ್ರಾಮಗಳಲ್ಲಿ ಸಂಭ್ರಮದಿಂದ ಸ್ವಾಗತಿಸಿದ್ದಾರೆ. ಕ್ರೇನ್ ಮೂಲಕ ನೂರಾರು ರೀತಿಯ ಬೃಹತ್ ಹಾರ ಹಾಕುವ ಮೂಲಕ ಸಂಭ್ರಮಿಸಿದ್ದೀರಿ. ಕ್ಷೇತ್ರದ ಮೂಲೆ ಮೂಲೆಗಳಿಂದಲೂ ಕಾರ್ಯಕರ್ತರು ಕಾರ್ಯಕ್ರಮಕ್ಕೆ ಆಗಮಿಸಿದ್ದೀರಿ. ಹಣದಿಂದಲೇ ಚುನಾವಣೆಗಳನ್ನು ಗೆಲ್ಲುತ್ತೇವೆ ಎನ್ನುವ ಭಾವನೆವುಳ್ಳವರಿಗೆ ಸರಿಯಾದ ಪ್ರತಿಕ್ರಿಯೆ ನೀಡಿದ್ದೀರಿ. ವರಿಷ್ಠರಾದ ಹೆಚ್.ಡಿ.ದೇವೇಗೌಡರು, ಕುಮಾರಸ್ವಾಮಿ, ಜಿಟಿಡಿ, ಹರೀಶ್‌ಗೌಡ, ನಿಖಿಲ್‌ರನ್ನು, ಜೆಡಿಎಸ್ ಪಕ್ಷಕ್ಕಾಗಿ ನೀವೆಲ್ಲಾ ಸೇರಿದ್ದೀರಿ. ನಿಮಗೆ ಅನಂತ ಧನ್ಯವಾದಗಳು ಎಂದು ಹೇಳಿದರು.

**ಆಶೀರ್ವದಿಸಿ:** ತಾಯಿ ಚಾಮುಂಡೇಶ್ವರಿ ಹಾಗೂ ಉತ್ತನಹಳ್ಳಿ ಅಮ್ಮನ ಸನ್ನಿಧಿಯಲ್ಲಿ ಹೆಚ್.ಡಿ.ದೇವೇಗೌಡರು ಕುಟುಂಬ ಸಮೇತ ಪೂಜೆ ಸಲ್ಲಿಸಿ, 2018ರಲ್ಲಿ 'ಕುಮಾರ ಪರ್ವ' ಯಾತ್ರೆಗೆ ಚಾಲನೆ ನೀಡಿದ್ದರು. ಆ ಅವಧಿಯಲ್ಲಿ ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದರು. ಅವರು ಮೊದಲ ಬಾರಿ ಸಿಎಂ ಆಗುವ ಮೊದಲೂ ನೀವು ಆಶೀರ್ವದಿಸಿದ್ದೀರಿ. ಮುಂದಿನ ಮಾರ್ಚ್‌ನಲ್ಲಿ 'ಪಂಚರತ್ನ' ಯಾತ್ರೆ ಆರಂಭವಾಗುತ್ತದೆ. ಎರಡು ಬಾರಿ ಸಿಎಂ ಆಗಲು ಕುಮಾರಸ್ವಾಮಿಗೆ ಹರಸಿದ ನೀವು, ಮೂರನೇ ಬಾರಿ ಸಿಎಂ ಆಗಲು ಆಶೀರ್ವದಿಸಬೇಕು. ಈ ನಿಟ್ಟಿನಲ್ಲಿ ಚಾಮುಂಡೇಶ್ವರಿ ಕ್ಷೇತ್ರ ಜೊತೆಗೆ ಜಿಲ್ಲೆಯ ಎಲ್ಲಾ ಕ್ಷೇತ್ರಗಳಲ್ಲೂ ಜೆಡಿಎಸ್ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಡಬೇಕೆಂದು ಮನವಿ ಮಾಡಿದರು.

**ನಿಮ್ಮ ಮತ ವಜ್ರದ ಹಾರವಿದ್ದಂತೆ:** ಚಾಮುಂಡೇಶ್ವರಿ ಕ್ಷೇತ್ರದ ಜನ ನನಗೆ ನೀಡುವ ಪ್ರತಿಯೊಂದು ಅತ್ಯಮೂಲ್ಯ ಮತವೂ ಕುಮಾರಸ್ವಾಮಿ ಅವರಿಗೆ ನೀಡಿದಂತೆ. ಶಾಸಕರಾಗಿ, ಮುಖ್ಯಮಂತ್ರಿಯಾಗಿ, ಪ್ರಧಾನಿಯಾಗಿದ್ದ 91 ವರ್ಷದ ಹೆಚ್.ಡಿ.ದೇವೇಗೌಡರು, ರೈತರು, ಮಹಿಳೆಯರು, ಹಿಂದುಳಿದವರು, ದಲಿತರು, ನೊಂದವರ ಪರವಾಗಿ ಕೆಲಸ ಮಾಡಿದ್ದಾರೆ. ರಾಜ್ಯದ ನೀರಾವರಿ ಯೋಜನೆಗಳಿಗೆ ನಿರಂತರ ಹೋರಾಟ ಮಾಡಿದ್ದಾರೆ. ನಿಮ್ಮ ಒಂದೊಂದು ಮತವೂ ಹೆಚ್.ಡಿ.ದೇವೇಗೌಡರ ಕೊರಳಿಗೆ ಹಾಕುವ ವಜ್ರದ ಹಾರ ಇದ್ದಂತೆ. ಮುಂದಿನ ಚುನಾವಣೆಯಲ್ಲಿ ಜೆಡಿಎಸ್ ಅಧಿಕಾರಕ್ಕೆ ತರಲು ನೀವು ತೀರ್ಮಾನಿಸಿದ್ದೀರಿ ಎನ್ನುವುದು ನನ್ನ ಅಚಲ ವಿಶ್ವಾಸ ಎಂದು ನುಡಿದರು.

ಶಾಸಕರಾದ ಕೆ.ಮಹದೇವ್, ಅಶ್ವಿನ್ ಕುಮಾರ್, ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಶ್ರೀಮತಿ ಲಲಿತಾ ಜಿ.ಟಿ.ದೇವೇಗೌಡ, ಮೈಮುಲ್ ಅಧ್ಯಕ್ಷ ಪ್ರಸನ್ನ, ಕೆ.ವಿ.ಮಲ್ಲೇಶ್ ಮತ್ತಿತರರಿದ್ದರು.

## ಪ್ರಹ್ಲಾದ್ ಜೋಶಿ ಸಿಎಂ

ಕಟ್ಟುವವರಲ್ಲ. ಅವರು ಮರಾಠ ಪೇಶ್ವೆ ಕಾಲದ ಬ್ರಾಹ್ಮಣರು. ಅವರು ಶೃಂಗೇರಿ ಮಠ ಒಡೆದ ವರ್ಗದವರು. ಗಾಂಧಿ ಕೊಂದ ಬ್ರಾಹ್ಮಣರು ಇವರು. ಬಿಜೆಪಿಯ ಹುನ್ನಾರ ಆರೆಸ್‌ಎಸ್ ಕುತಂತ್ರಕ್ಕೆ ಬಲಿಯಾಗಬೇಡಿ. ಇವರು ದೇಶವನ್ನ ಹಾಳು ಮಾಡ್ತಾರೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಟೀಕೆ ಮಾಡಿದ್ದಾರೆ.

ದೆಹಲಿಯಲ್ಲಿ ಎಂಟು ಜನ ಉಪ ಮುಖ್ಯಮಂತ್ರಿ ಮಾಡುವ ಸಭೆ ಮಾಡಿದ್ದಾರೆ. ಅದು ನನ್ನ ಗಮನಕ್ಕೆ ಬಂದಿದೆ. ಎಂಟು ಜನ ಯಾರು ಅಂತ ಹೆಸರು ಬೇಕಾದ್ರೂ ಕೊಡ್ತೀನಿ ಎಂದು ಹೆಚ್.ಡಿ.ಕುಮಾರಸ್ವಾಮಿ ವಾಗ್ದಾಳಿ ನಡೆಸಿದ್ದಾರೆ.

## ಆರೋಗ್ಯ ಸೇವೆ ಆರಂಭ

ಹೊಸ ಆಸ್ಪತ್ರೆಗಳಲ್ಲಿ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಕೋವಿಡ್–19 ಮೊದಲ ಹಾಗೂ 2ನೇ ಅಲೆ ವೇಳೆ ಕೊರೋನಾ ಸೋಂಕಿತರ ಚಿಕಿತ್ಸೆಗಾಗಿ ಬಳಸಿಕೊಳ್ಳಲಾಗಿದ್ದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಹಾಗೂ ಟ್ರಾಮಾ ಕೇರ್ ಸೆಂಟರ್ ಕಟ್ಟಡಗಳು ಕೆಲವು ತಿಂಗಳಿಂದ ಯಾವುದೇ ಚಟುವಟಿಕೆ ಇಲ್ಲದ ಸ್ತಬ್ಧವಾಗಿದ್ದವು. ಪಿಕೆಟಿಬಿ ಆಸ್ಪತ್ರೆ ಆವರಣದಲ್ಲಿ ನಿರ್ಮಿಸಲಾಗಿರುವ ಹೊಸ ಆಸ್ಪತ್ರೆಗಳ ನೂತನ ಕಟ್ಟಡದಲ್ಲಿ ಆರೋಗ್ಯ ಸೇವೆ ಆರಂಭಿಸುತ್ತಿರುವುದರಿಂದ ಮೈಸೂರಿನ ಜನತೆಗೆ ಆರೋಗ್ಯ ಸೇವೆ ಪಡೆದುಕೊಳ್ಳಲು ಸಹಕಾರಿಯಾಗಲಿದೆ.

**ಭರದಿಂದ ಸಾಗಿದ ಸಿದ್ಧತೆ:** ಕಳೆದ ನಾಲ್ಕೈದು ತಿಂಗಳಿಂದ ಬೀಗ ಹಾಕಿದ ಸ್ಥಿತಿಯಲ್ಲಿದ್ದ



ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಹಾಗೂ ಟ್ರಾಮಾ ಕೇರ್ ಸೆಂಟರ್ ಕಟ್ಟಡಗಳಲ್ಲಿ ಕಳೆದ 2 ದಿನಗಳಿಂದ ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಎರಡೂ ಹೊಸ ಕಟ್ಟಡಗಳಾಗಿದ್ದರೂ ಬಳಕೆಯಾಗದ ಹಿನ್ನೆಲೆಯಲ್ಲಿ ದೂಳು ತುಂಬಿಕೊಂಡಿದೆ. ಆಸ್ಪತ್ರೆಯ ಕಟ್ಟಡದಲ್ಲಿರುವ ದೂಳನ್ನು ಸ್ವಚ್ಛಗೊಳಿಸಿ, ತಪಾಸಣೆಗೆಂದು ಬರುವ ರೋಗಿಗಳಿಗೆ ಕುಳಿತುಕೊಳ್ಳಲು ಆಸನ, ಹೆಸರು, ವಿಳಾಸ ನಮೂದು ಮಾಡಿಕೊಳ್ಳಲು ಕೌಂಟರ್, ಕುಡಿಯುವ ನೀರು, ವಾರ್ಡ್ ಗಳಿಗೆ ಆಮ್ಲಜನಕ ಪೂರೈಕೆ. ವಿದ್ಯುತ್ ಸರಬರಾಜು ವ್ಯವಸ್ಥೆ, ಜನರೇಟರ್ ವ್ಯವಸ್ಥೆ, ವಿವಿಧ ವಿಭಾಗಗಳ ತಪಾಸಣಾ ಕೊಠಡಿಗಳ ಸಿದ್ಧತೆ ಮಾಡಿಕೊಳ್ಳಲಾಗಿದೆ. ಈ ಎರಡೂ ಹೊಸ ಆಸ್ಪತ್ರೆಗಳು ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ (ಎಂಎಂಸಿಆರ್‌ಐ)ಆಡಳಿತದ ಅಧೀನದಲ್ಲಿ ಬರುವುದರಿಂದ ನಾಳೆಯಿಂದ ಆರೋಗ್ಯ ಸೇವೆ ಆರಂಭಿಸಲು ಎಂಎಂಸಿಆರ್‌ಐ ಸಿಬ್ಬಂದಿಗಳನ್ನು ನಿಯೋಜನೆ ಮಾಡಿದೆ.

**ಯಾವೆಲ್ಲಾ ಸೇವೆ ಲಭ್ಯ:** ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಫೆ.6ರಿಂದ ಪ್ಲಾಸ್ಟಿಕ್ ಸರ್ಜರಿ, ಮೂಳೆಚಿಕಿತ್ಸೆ(ಆರ್ಥೋಪೆಡಿಕ್), ಮಕ್ಕಳ ಶಸ್ತ್ರಚಿಕಿತ್ಸೆ ವಿಭಾಗ(ಪೀಡಿಯಾಟ್ರಿಕ್ಸ್), ನರವಿಜ್ಞಾನ(ನ್ಯೂರಾಲಜಿ), ನರ–ಶಸ್ತ್ರಚಿಕಿತ್ಸೆ(ನ್ಯೂರೋ ಸರ್ಜರಿ), ಮೂತ್ರಶಾಸ್ತ್ರ, ನೆಫ್ರಾಲಜಿ, ಗ್ಯಾಸ್ಟ್ರೋ–ಎಂಟರಾಲಜಿ, ಮೆಡಿಕಲ್ ಆಂಕಾಲಜಿ, ಸರ್ಜಿಕಲ್ ಆಂಕಾಲಜಿ ವಿಭಾಗದ ಹೊರರೋಗಿ ವಿಭಾಗ ಕಾರ್ಯಾರಂಭ ಮಾಡಲಾಗುತ್ತಿದೆ. 130 ಹಾಸಿಗೆ ಸೌಲಭ್ಯವಿರುವ ಟ್ರಾಮಾ ಕೇರ್ ಸೆಂಟರ್‌ನಲ್ಲಿ ಶಸ್ತ್ರಚಿಕಿತ್ಸೆ ವಿಭಾಗ ಹಾಗೂ ಒಳರೋಗಿ ವಿಭಾಗ ಕಾರ್ಯಾರಂಭ ಮಾಡಲಿದೆ. ಈ ಹೊಸ ಆಸ್ಪತ್ರೆಯಲ್ಲಿ ಆರೋಗ್ಯ ಸೇವೆ ಆರಂಭಿಸಲು ಅಗತ್ಯವಾಗಿರುವ ಪ್ರಯೋಗಾಲಯದ ಉಪಕರಣ ಹಾಗೂ ಇನ್ನಿತರ ಸೌಲಭ್ಯವನ್ನು ಪಿಕೆಟಿಬಿ ಹಾಗೂ ಸಿಡಿ ಆಸ್ಪತ್ರೆಯಿಂದ ಸೌಲಭ್ಯ ಪಡೆದುಕೊಳ್ಳಲು ನಿರ್ಧರಿಸಲಾಗಿದೆ. ಹೊರರೋಗಿ ವಿಭಾಗವು ಪ್ರತಿದಿನ ಬೆಳಿಗ್ಗೆ 9 ರಿಂದ ಸಂಜೆ 4 ರವರೆಗೆ ಕಾರ್ಯ ನಿರ್ವಹಿಸುತ್ತವೆ. ಹಂತ ಹಂತವಾಗಿ ಸೇವಾ ಅವಧಿಯನ್ನು ವಿಸ್ತರಿಸಲು ಚಿಂತಿಸಲಾಗಿದೆ.

134 ಕೋಟಿ ರೂ. ವೆಚ್ಚದಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ನಿರ್ಮಿಸಿ ಮೈಸೂರು ರಾಜಮನೆತನದ ರಾಜಕುಮಾರಿ ಕೃಷ್ಣಾಜಮ್ಮಣ್ಣಿ ಅವರಿಗೆ ಸಮರ್ಪಿಸಲಾಗಿದೆ. ಈ ಆಸ್ಪತ್ರೆಯಲ್ಲಿ 250 ಹಾಸಿಗೆ ಸೌಲಭ್ಯವಿದೆ. ಕಟ್ಟಡವು ಮೂರು ಮಹಡಿಯನ್ನು ಹೊಂದಿದೆ. ಪ್ರತಿಯೊಂದು ಮಹಡಿಯಲ್ಲಿಯೂ ವಾರ್ಡ್ ಹಾಗೂ ತಪಾಸಣಾ ಕೊಠಡಿಗಳಿವೆ. 30 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ ಟ್ರಾಮಾ ಕೇರ್ ಸೆಂಟರ್‌ನಲ್ಲಿ 135 ಹಾಸಿಗೆ ಸೌಲಭ್ಯವಿರುವ ವಾರ್ಡ್‌ಗಳಿವೆ. ಅಲ್ಲದೆ, ಈ ಕಟ್ಟಡದಲ್ಲೂ ವೈದ್ಯಕೀಯ ತಪಾಸಣಾ ಕೊಠಡಿಗಳಿವೆ. ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ಅಂದಾಜು ಅಪಘಾತಕ್ಕೆ ಒಳಗಾದ 1,500 ಮಂದಿ ದಾಖಲಾಗುತ್ತಾರೆ. ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ ಮತ್ತು ಕೊಡಗು ಜಿಲ್ಲೆಗಳಿಂದಲೂ ರಸ್ತೆ ಅಪಘಾತ ಸಂತ್ರಸ್ತರು ಕೆ.ಆರ್.ಆಸ್ಪತ್ರೆ ಬಂದು ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ರಸ್ತೆ ಅಪಘಾತದಿಂದ ಗಾಯಗೊಂಡವರಿಗೆ ಸೂಕ್ತ ಚಿಕಿತ್ಸೆ ನೀಡಲು ಕೆ.ಆರ್.ಆಸ್ಪತ್ರೆಯೊಂದಿಗೆ ಟ್ರಾಮಾ ಕೇರ್ ಸೆಂಟರ್ ಸೇವೆ ಸಹಕಾರಿಯಾಗಲಿದೆ. ಆಮ್ಲಜನಕ ಸರಬರಾಜು ವ್ಯವಸ್ಥೆಯಿರುವ ಹಾಸಿಗೆ, ವೆಂಟಿಲೇಟರ್ ಸೌಲಭ್ಯ ಇರುವುದರಿಂದ ಆರೋಗ್ಯ ಸೇವೆ ಇನ್ನಷ್ಟು ಸಂತ್ರಸ್ತರಿಗೆ ದೊರೆಯಲಿದೆ.

'ನವಭಾರತದ ಆಶಾಕಿರಣ ನರೇಂದ್ರ ಮೋದಿ' ಕೃತಿ ಬಿಡುಗಡೆ

# ಪ್ರಧಾನಿ ನರೇಂದ್ರ ಮೋದಿ ಕಾಯಕ ತಪಸ್ವಿ



ಮೈಸೂರು, ಫೆ.5(ಪಿಎಂ)– ಭಾರತವನ್ನು ವಿಶ್ವಗುರು ಸ್ಥಾನಕ್ಕೇರಿಸಲು ಶ್ರಮಿಸುತ್ತಿರುವ 'ಕಾಯಕ ತಪಸ್ವಿ' ಪ್ರಧಾನಿ ನರೇಂದ್ರ ಮೋದಿ ಎಂದು ಸಾಹಿತಿ ಡಾ.ಜಯಪ್ಪ ಹೊನ್ನಾಳಿ ಹೇಳಿದರು.

ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆ ಆವರಣದ ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಡೆಮಾಕ್ರಸಿ ಡೆವಲಪ್‌ಮೆಂಟ್ ಟ್ರಸ್ಟ್–ಮಿಷನ್ ಮೋದಿ ಮತ್ತೊಮ್ಮೆ ಪಿಎಂ ಸಂಘಟನೆ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಸಂಘಟನೆಯ ರಾಜ್ಯ ಪ್ರಶಿಕ್ಷಣ ಕಾರ್ಯಾಗಾರದಲ್ಲಿ 'ನವಭಾರತದ ಆಶಾಕಿರಣ ನರೇಂದ್ರ ಮೋದಿ' ಕೃತಿ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಕಾಯಕ ತಪಸ್ವಿ ನರೇಂದ್ರ ಮೋದಿಯವರ ಕುರಿತಂತೆ 12 ಪ್ರೌಢ ಲೇಖನಗಳ ಗುಚ್ಛವಿರುವ ಕೃತಿ ಇದು. ಕೃತಿಯಲ್ಲಿ ಖ್ಯಾತ ಕಾದಂಬರಿಕಾರ ಡಾ.ಎಸ್.ಎಲ್.ಭೈರಪ್ಪ ಅವರ ಲೇಖನ ಮೊದಲುಗೊಂಡಿದ್ದು, ಇಲ್ಲಿನ ಎಲ್ಲಾ ಲೇಖನಗಳ ಸದಾಶಯ 'ನವಭಾರತದ ಆಶಾಕಿರಣ ನರೇಂದ್ರ ಮೋದಿ' ಎಂಬುದಾಗಿದೆ. ಅದಕ್ಕೆ ಪೂರಕ ಸಾಕ್ಷ್ಯ–ಪುರಾವೆ ಒದಗಿಸಲಾಗಿದೆ. ಮೋದಿಯವರ ಹಾದಿಯ ವೈವಿಧ್ಯತೆಯ ಚಿತ್ರಣವನ್ನು ಈ ಕೃತಿ ಒಳಗೊಂಡಿದೆ. ಇದರಲ್ಲಿ ಮೋದಿಯವರ ಸಾಧನೆಗಳ ಅನಾವರಣವಾಗಿದೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಹಿತಮಿತವಾಗಿ ಮತ್ತು ಪೂರ್ವಗ್ರಹ ಮನಸ್ಸು ಮುಕ್ತವಾಗಿ ಯಾರನ್ನೂ ತೇಜೋವಧೆ ಮಾಡುವ ಭರಾಟೆಗೆ ಹೋಗದೇ ಮೋದಿ ಹಾದಿಯಲ್ಲಿ ಸಮಾಜಕ್ಕೆ ಸಿಕ್ಕಿರುವ ಮೈಲುಗಲ್ಲುಗಳನ್ನು ಕೃತಿಯಲ್ಲಿ ಅನಾವರಣ ಮಾಡಲಾಗಿದೆ. ಅತ್ಯಂತ ಔಚಿತ್ಯ ಪ್ರಜ್ಞೆ ಮತ್ತು ಮೃದು ಭಾಷೆಯಲ್ಲಿ ಎಲ್ಲಾ 12 ಲೇಖನಗಳು ಮೂಡಿ ಬಂದಿವೆ. ಮೋದಿಯವರ ಸಾಧನೆಗಳನ್ನು ವರ್ಣಿಸಲು ಇಂತಹ ಹತ್ತಾರು ಕೃತಿಗಳು ಬಂದರೂ ಸಾಲದು. ಕೃತಿ ಸಂಪಾದಕ ಮೈ.ನಾ.ಲೋಕೇಶ್ ಸಹ ತಮ್ಮದೊಂದು ಲೇಖನ ಬರೆದಿದ್ದಾರೆ. ಮೈಸೂರಿಗೆ ಮೋದಿಯವರ ಕೊಡುಗೆಗಳನ್ನು ಸಂಸದ ಪ್ರತಾಪ್ ಸಿಂಹ ತಮ್ಮ ಲೇಖನದಲ್ಲಿ ವಿವರಿಸಿದ್ದಾರೆ. ನಿಜಕ್ಕೂ ಇದೊಂದು ಶ್ರೇಷ್ಠ ಕೃತಿ ಎಂದು ಶ್ಲಾಘಿಸಿದರು.

ಇದಕ್ಕೂ ಮುನ್ನ ಪ್ರಾಸ್ತಾವಿಕವಾಗಿ ಮಾತನಾಡಿದ ಡೆಮಾಕ್ರಸಿ ಡೆವಲಪ್‌ಮೆಂಟ್ ಟ್ರಸ್ಟ್–ಮಿಷನ್ ಮೋದಿ ಮತ್ತೊಮ್ಮೆ ಪಿಎಂ ಸಂಘಟನೆಯ ರಾಜ್ಯಾಧ್ಯಕ್ಷ ಗೋವಿಂದ ಕೃಷ್ಣಾಜಿ ಕುಲಕರ್ಣಿ, ದೇಶದ ಬಗ್ಗೆ ಹಿತಚಿಂತನೆ ಹೊಂದಿರುವ ಪ್ರಧಾನಿ ಸಿಕ್ಕಾಗ ಅವರೊಂದಿಗೆ ಕೈಜೋಡಿಸಬೇಕೆಂಬ ನಿಟ್ಟಿನಲ್ಲಿ 2017ರಲ್ಲಿ ಡೆಮಾಕ್ರಸಿ ಡೆವಲಪ್‌ಮೆಂಟ್ ಟ್ರಸ್ಟ್ ಪ್ರಾರಂಭವಾಯಿತು. 2019ರ ಲೋಕಸಭಾ ಚುನಾವಣೆ ವೇಳೆ ಮತ್ತೊಮ್ಮೆ ಮೋದಿ ಪ್ರಧಾನಿ ಆಗಬೇಕೆಂಬ ಉದ್ದೇಶದೊಂದಿಗೆ 'ಮಿಷನ್ ಮೋದಿ ಮತ್ತೊಮ್ಮೆ ಪಿಎಂ' ಘೋಷವಾಕ್ಯದೊಂದಿಗೆ ಟ್ರಸ್ಟ್ ಉತ್ತರ ಭಾರತದಲ್ಲಿ ಕೆಲಸ ಮಾಡಿತು. ಈ ಚುನಾವಣೆಯಲ್ಲಿ ಬಿಜೆಪಿಗೆ ಅಭೂತಪೂರ್ವ ಬೆಂಬಲ ವ್ಯಕ್ತವಾಗಲು ನಮ್ಮ ಸಂಘಟನೆಯೂ ಪರೋಕ್ಷವಾಗಿ ಕಾರಣ ಎಂದು ಹೇಳಿದರು.

ಭಾರತ ವಿಶ್ವಗುರು ಆಗಬೇಕೆಂಬ ಮೋದಿಯವರ ಕನಸು ಸಾಕಾರಗೊಳಿಸಲು ದಕ್ಷಿಣ ಭಾರತದಲ್ಲಿಯೂ ನಮ್ಮ ಸಂಘಟನೆ ಚಟುವಟಿಕೆ ಆರಂಭಿಸಿತು. ಅಂತೆಯೇ ಕರ್ನಾಟಕದಲ್ಲೂ ಕಾರ್ಯಾರಂಭ ಮಾಡಿತು. ಪ್ರಾಚೀನ ಕಾಲದಲ್ಲಿ ಹಿಂದೂಸ್ತಾನ ವಿಶ್ವಕ್ಕೆ ಗುರುವಾಗಿತ್ತು. ಅದನ್ನು ಪುನರ್ ಸ್ಥಾಪಿಸಲು ಪ್ರಧಾನಿ ಮೋದಿ ಹೊರಟಿದ್ದಾರೆ. ನಮ್ಮದು ರಾಜಕೀಯೇತರ ಸಂಘಟನೆ. ಇದರಲ್ಲಿ ಆಸಕ್ತರು ದಿನಕ್ಕೆ ಒಂದು ತಾಸು ಕೆಲಸ ಮಾಡಬಹುದು. ಇಂದು ಮೋದಿಯವರು ದೇಶದ ಅಭಿವೃದ್ಧಿ ಮತ್ತು ಭದ್ರತೆ ದೃಷ್ಟಿಯಿಂದ ಸೂಕ್ತ ನಾಯಕರಾಗಿದ್ದಾರೆ. ಹಾಗಾಗಿ ನಮ್ಮ ಸಂಘಟನೆ ಅವರಿಗೆ ಬೆಂಬಲವಾಗಿ ನಿಂತಿದೆ. ವೈಯಕ್ತಿಕ ಹಿತದೃಷ್ಟಿಯಿಂದ ಈ ಸಂಘಟನೆ ಪ್ರಾರಂಭಿಸಿಲ್ಲ. ಬದಲಿಗೆ ದೇಶ ಮತ್ತು ದೇಶದ ಜನತೆಯ ಹಿತಕ್ಕಾಗಿ ಸ್ಥಾಪನೆಗೊಂಡು ಕಾರ್ಯನಿರ್ವಹಿಸುತ್ತಿರುವ ಸಂಘಟನೆ ನಮ್ಮದು ಎಂದು ವಿವರಿಸಿದರು.

ಡೆಮಾಕ್ರಸಿ ಡೆವಲಪ್‌ಮೆಂಟ್ ಟ್ರಸ್ಟ್–ಮಿಷನ್ ಮೋದಿ ಮತ್ತೊಮ್ಮೆ ಪಿಎಂ ರಾಷ್ಟ್ರೀಯ ಅಧ್ಯಕ್ಷ ರಾಮ್‌ಗೋಪಾಲ್ ಕಾಕ, ಚುಕ್ಕಿಚಿತ್ರ ಕಲಾವಿದ ಮೋಹನ್ ವರ್ಣೇಕರ್, ಮೈಸೂರು ಮಹಾನಗರ ಪಾಲಿಕೆ ನಾಮನಿರ್ದೇಶಿತ ಸದಸ್ಯ ಜಗದೀಶ್, ಕೃತಿ ಸಂಪಾದಕ ಮತ್ತು ಸಂಘಟನೆ ಜಿಲ್ಲಾಧ್ಯಕ್ಷ ಮೈ.ನಾ.ಲೋಕೇಶ್ ಮತ್ತಿತರರು ಹಾಜರಿದ್ದರು.

### ಪ್ರಧಾನಿ ಮತ್ತೆ ಮೋದಿಯವರೇ ಆಗಬೇಕೆಂಬ ಆಶಯ


ಮೈಸೂರು, ಫೆ.5(ಪಿಎಂ)– 'ನವಭಾರತದ ಆಶಾಕಿರಣ ನರೇಂದ್ರ ಮೋದಿ' ಕೃತಿಯಲ್ಲಿ 'ನವರಾಜಕೀಯ ಸಂಸ್ಕೃತಿಯ ಹರಿಕಾರ ; ನರೇಂದ್ರ ಮೋದಿ' ಶೀರ್ಷಿಕೆಯ ತಮ್ಮ ಲೇಖನದಲ್ಲಿ ಪದ್ಮಭೂಷಣ ಪುರಸ್ಕೃತ ಡಾ. ಎಸ್.ಎಲ್.ಭೈರಪ್ಪ, ಭಾರತದ ಪ್ರಧಾನಿ ಮತ್ತೆ ಮೋದಿಯವರೇ ಆಗಬೇಕೆಂಬ ಆಶಯ ವ್ಯಕ್ತಪಡಿಸಿ, ಅದಕ್ಕೆ ಸಕಾರಣಗಳನ್ನು ಸಾಕಷ್ಟು ನೀಡಿ, ಸಮರ್ಥನೆಯನ್ನು ಗಟ್ಟಿಧ್ವನಿಯಲ್ಲಿ ಪ್ರತಿಪಾದಿಸಿದ್ದಾರೆ ಎಂದು ಸಾಹಿತಿ ಡಾ.ಜಯಪ್ಪ ಹೊನ್ನಾಳಿ ತಿಳಿಸಿದರು.

'ಪ್ರಧಾನಿ ಹುದ್ದೆ ಅಂದರೆ ಅದು ದೇಶದ ಅಧಿಕಾರ ಕೇಂದ್ರಿತ ಗೌರವದ ಹುದ್ದೆ ಮಾತ್ರವಲ್ಲ. ಪ್ರಜೆಗಳ ನಿರೀಕ್ಷೆಗೆ ತಕ್ಕಂತೆ ದಕ್ಷತೆ, ಪ್ರಾಮಾಣಿಕತೆಯಿಂದ ಕೆಲಸ ಮಾಡುವ 'ಜನಸೇವಕರಾಗಿಯೂ' ಪ್ರಧಾನಿ ಕಾರ್ಯ ನಿರ್ವಹಿಸಬೇಕು. ಈ ಕಾರ್ಯವನ್ನು ನರೇಂದ್ರ ಮೋದಿಯವರು ಅತ್ಯಂತ ಬದ್ಧತೆಯಿಂದ ನಿರ್ವಹಿಸಿದ್ದಾರೆ. ಬಹಳ ವರ್ಷಗಳ ನಂತರ ಭಾರತವು ಶಕ್ತಿಶಾಲಿ, ಧೈರ್ಯಶಾಲಿ ಪ್ರಧಾನಿಯನ್ನು ಮೋದಿಯವರಲ್ಲಿ ಕಾಣುತ್ತಿದೆ. ಇದು ಕಾರಣವಿಲ್ಲದೆ ಮಾಡಿದ ಪ್ರಶಂಸೆ ಎಂದು ಭಾವಿಸಬೇಕಿಲ್ಲ' ಎಂದು ಭೈರಪ್ಪನವರು ಉಲ್ಲೇಖಿಸಿದ್ದಾರೆ ಎಂದು ಹೇಳಿದರು.

'ಮೋದಿಯವರು ಪ್ರಧಾನಿಯಾಗಿ 8 ವರ್ಷಗಳ ಆಡಳಿತವನ್ನು ಪೂರ್ಣಗೊಳಿಸಿದ್ದರೂ ಅವರ ಮೇಲೆ ಭ್ರಷ್ಟಾಚಾರದ ಒಂದೇ ಒಂದು ಕಳಂಕವಿಲ್ಲ. ಸದ್ಯಕ್ಕಂತೂ ಮೋದಿಯವರ ಸಾಮರ್ಥ್ಯಕ್ಕೆ ಸರಿಸಾಟಿಯಾಗಬಲ್ಲ ಪರ್ಯಾಯ ನಾಯಕ ಭಾರತೀಯ ರಾಜಕೀಯದಲ್ಲಿ ಕಂಡು ಬರುತ್ತಿಲ್ಲ. ದೇಶಕ್ಕೆ ಮೋದಿಯವರ ಆಡಳಿತದಲ್ಲಿ ಹೆಚ್ಚಿನ ಒಳಿತಾಗಲಿದೆ. ಭಾರತವನ್ನು ವಿಶ್ವಗುರು ಸ್ಥಾನಕ್ಕೇರಿಸಬಲ್ಲ ಎಲ್ಲಾ ದೂರದೃಷ್ಟಿ, ಛಾತಿ, ಸಾಮರ್ಥ್ಯ ಮೋದಿಯವರಲ್ಲಿದೆ. ದೇಶದ ಜನರಲ್ಲಿ ಸರ್ಕಾರದಿಂದ ನಿರೀಕ್ಷೆಗಳು ಹೆಚ್ಚಿದೆಯಾದರೂ ದೇಶವು ಮೋದಿಯವರ ಕೈಯಲ್ಲಿ ಭದ್ರವಾಗಿದೆ, ದೇಶದ ಭವಿಷ್ಯ ಉಜ್ವಲವಾಗಿದೆ' ಎಂದು ಭೈರಪ್ಪನವರು ಕೃತಿಯಲ್ಲಿನ ತಮ್ಮ ಲೇಖನದ ಬಣ್ಣಿಸಿರುವ ಕೆಲ ವಾಕ್ಯಗಳನ್ನು ಜಯಪ್ಪ ಹೊನ್ನಾಳಿ ಪ್ರಸ್ತಾಪಿಸಿದರು.

# ಸಂಗೀತದಿಂದ ಉತ್ತಮ ಪ್ರಜೆ ರೂಪಿಸಲು ಸಾಧ್ಯ

### ಸುತ್ತೂರು ಶ್ರೀಗಳ ವಿಶ್ವಾಸ



ಮೈಸೂರು, ಫೆ.5(ಎಸ್‌ಪಿಎನ್)– ನಮ್ಮ ವಿದ್ಯಾರ್ಥಿಗಳು, ಭಾರತೀಯ ಕಲೆಗಳಾದ ಕರ್ನಾಟಕ ಮತ್ತು ಹಿಂದೂಸ್ತಾನಿ ಸಂಗೀತ ಸೇರಿದಂತೆ ನೃತ್ಯದ ವಿವಿಧ ಪ್ರಕಾರಗಳ ಕಲಿಕೆಯಿಂದ ಉತ್ತಮ ಪ್ರಜೆಯಾಗಿ ರೂಪುಗೊಳ್ಳಲು ಸಾಧ್ಯವಿದೆ ಎಂದು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅಭಿಪ್ರಾಯಪಟ್ಟರು.

ಮೈಸೂರು ಆದಿಚುಂಚನಗಿರಿ ರಸ್ತೆಯ ಗಾನಭಾರತಿ ಸಭಾಂಗಣದಲ್ಲಿ ಲಯವಿದ್ಯಾ ಪ್ರತಿಷ್ಠಾನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಆಯೋಜಿಸಿದ್ದ ಎರಡು ದಿನಗಳ ಲಯವಿದ್ಯಾ ಪ್ರತಿಷ್ಠಾನದ ವಿದ್ಯಾರ್ಥಿಗಳ ಸಂಗೀತ, ನೃತ್ಯ, ಲಯ ವಿನ್ಯಾಸ ಹಾಗೂ 'ಹರಿದಾಸಮೃತ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಶ್ರೀಗಳು, ಪ್ರತಿಯೊಬ್ಬರು ನಿತ್ಯ ಕರ್ತವ್ಯದ ಜೊತೆಗೆ ಕಲೆಗಳ ಮೈಗೂಡಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ವಿದ್ಯಾರ್ಥಿ ದೆಸೆಯಿಂದಲೇ ಸಂಗೀತ, ಸಾಹಿತ್ಯ, ಚಿತ್ರಕಲೆ ಸೇರಿದಂತೆ ಇತರೆ ಕಲೆಗಳ ಕಲಿಕೆಗೆ ವಿಶೇಷ ಆಸಕ್ತಿ ವಹಿಸಿದರೆ, ದೇಶದ ಉನ್ನತಿಗೆ ಸಹಕರಿಸಿದಂತೆ. ಚಿಕ್ಕ ವಯಸ್ಸಿಂದಲೇ ವಿದ್ಯಾರ್ಥಿಗಳಿಗೆ ಸಂಗೀತ, ನೃತ್ಯ ಕಲಿಕೆಗೆ ಆದ್ಯತೆ ನೀಡಿದರೆ ಒಳಿತು ಎಂದು ಹೇಳಿದರು.

ಸಂಗೀತಕ್ಕೆ ಎಲ್ಲವನ್ನು ಮರೆಸುವ ಶಕ್ತಿಯಿದೆ. ಹಾಗೆಯೇ ಸಂಗೀತ ಕಲಿತ ವಿದ್ಯಾರ್ಥಿಯಲ್ಲಿ ಉತ್ತಮ ವ್ಯಕ್ತಿತ್ವ, ಸ್ವಂತಿಕೆ ಬೆಳೆಯುತ್ತದೆ. ಹಾಗಾಗಿ ಪೋಷಕರು ತಮ್ಮ ಮಕ್ಕಳಿಗೆ ಓದಿನ ಜೊತೆಗೆ, ಸಂಗೀತ ಕಲಿಕೆಗೆ ಪ್ರೋತ್ಸಾಹಿಸುವಂತೆ ಸಲಹೆ ನೀಡಿದರಲ್ಲದೆ, ಲಯವಿದ್ಯಾ ಪ್ರತಿಷ್ಠಾನದ ಹಿರಿಯ ಕಲಾವಿದ ಹೆಚ್.ಎಲ್. ಶಿವಶಂಕರ ಸ್ವಾಮಿ, ಕಳೆದ ಹದಿನೈದು ವರ್ಷಗಳಿಂದ ಮಕ್ಕಳಿಗೆ ವಾದ್ಯಗಳ ಮೂಲಕ ಸಂಗೀತ ಕಲಿಕೆ ವಿಶೇಷ ಆಸಕ್ತಿ ತೋರುತ್ತಿರುವುದರಿಂದ ಮೈಸೂರಿನ ಹಲವಾರು ವಿದ್ಯಾರ್ಥಿಗಳು ಇವರಿಂದ ಸಂಗೀತ ವಿದ್ಯೆ ಕಲಿಯುತ್ತಿರುವುದು ಮೆಚ್ಚುಗೆಯ ವಿಷಯ ಎಂದರು.

ಗಾಯನ ಕ್ಷೇತ್ರದಲ್ಲಿ ಕೀರ್ತಿ ಶೇಷರಾಗಿದ್ದ ಖ್ಯಾತ ಗಾಯಕಿ ಹಾಗೂ ಪದ್ಮಭೂಷಣ ಪುರಸ್ಕೃತರಾದ ವಾಣಿ ಜಯರಾಂ ನಿಧನದಿಂದ ಸಂಗೀತ ಕ್ಷೇತ್ರದ ಅಮೂಲ್ಯ ರತ್ನ ಕಳೆದುಕೊಂಡು ಕಲಾ ಕ್ಷೇತ್ರ ಬಡವಾಗಿದೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಶಾಸಕ ಎಸ್.ಎ.ರಾಮದಾಸ್, ದೇಶ–ವಿದೇಶಗಳಲ್ಲಿ ಭಾರತೀಯ ಕಲೆಗಳಿಗೆ ವಿಶೇಷ ಮನ್ನಣೆಯಿದೆ. ಈ ಕೀರ್ತಿಯನ್ನು ಉಳಿಸಿಕೊಳ್ಳುವುದು ನಮ್ಮ–ನಿಮ್ಮೆಲ್ಲರ ಜವಾಬ್ದಾರಿಯಾಗಿದೆ. ಈಗಾಗಲೇ ಅನೇಕ ಸಂಶೋಧಕರು, ವೈದ್ಯಕೀಯ ಕ್ಷೇತ್ರದಲ್ಲಿ ಸಂಗೀತದಿಂದ ರೋಗ ಗುಣ ಪಡಿಸುವ ಬಗ್ಗೆ ಸಂಶೋಧನೆಗಳು ನಡೆಯುತ್ತಿವೆ. ಸಂಗೀತ ಥೆರಪಿ ಮೂಲಕ ಖಿನ್ನತೆಯಲ್ಲಿರುವವರನ್ನು ಸಮಾಜಮುಖಿಯಾಗಿಸುವಲ್ಲಿ ಸಂಗೀತ ಪ್ರಬಲ ಅಸ್ತ್ರವಾಗಿದೆ ಎಂದರು.

ಮೈಸೂರು ರಾಜರ ಆಶ್ರಯದಲ್ಲಿ ಸಂಗೀತ ಕ್ಷೇತ್ರಕ್ಕೆ ಉತ್ತಮ ಅವಕಾಶವಿತ್ತು. ಇದೀಗ ಪ್ರಜಾಪ್ರಭುತ್ವ ಆಡಳಿತಾವಧಿಯಲ್ಲಿ ಪ್ರಜೆಗಳು ಕಲೆಗಳನ್ನು ಪೋಷಿಸುತ್ತಿದ್ದಾರೆ. ಹಾಗಾಗಿ ಸಾಂಸ್ಕೃತಿಕ ನಗರಿ ಮೈಸೂರಿಗೆ ಯಾವುದೇ ಅಡೆ–ತಡೆಗಳಿಲ್ಲ. ಕಲೆ, ಸಾಹಿತ್ಯ, ಸಂಗೀತ, ನೃತ್ಯಗಳನ್ನು ಕಲಿಯುವುದರಿಂದ ಭಾರತೀಯ ಸಾಂಪ್ರದಾಯಿಕ ಕಲೆಗಳಿಗೆ ವಿಶ್ವ ಮನ್ನಣೆ ದೊರಕುತ್ತವೆ. ಇದನ್ನು ಉಳಿಸಿ–ಬೆಳೆಸುವ ಜವಾಬ್ದಾರಿ ಇಂದಿನ ಪೀಳಿಗೆ ಮೇಲಿದೆ ಎಂದರು.

ನಂತರ ಸಂಗೀತ ವಿದ್ಯಾನಿಧಿ ಡಾ.ವಿದ್ಯಾಭೂಷಣ ತಂಡದಿಂದ ಹರಿದಾಸಾಮೃತ ಕಾರ್ಯಕ್ರಮ ಪ್ರಯುಕ್ತ ಭಕ್ತಿಗೀತೆಗಳ ಗಾನ ಸುಧೆಯನು ಹರಿಸಿ, ನೆರೆದಿದ್ದ ಪ್ರೇಕ್ಷಕರಿಗೆ ರಸದೌತಣ ನೀಡಿದರು. ಮೊದಲಿಗೆ 'ನಮ್ಮಮ್ಮ ಶಾರದೇ' ಭಕ್ತಿಗೀತೆ ಹಾಡುವ ಮೂಲಕ ಸಂಗೀತ ಕಛೇರಿ ಆರಂಭಿಸಿದರು. ನಂತರ ಅನೇಕ ದಾಸರ ಗೀತೆಗಳನ್ನು ಹಾಡಿ, ಪ್ರೇಕ್ಷಕರ ಮನಸೂರೆಗೊಂಡರು.

ಈ ವೇಳೆ ಬಿ.ಎಸ್.ವೇಣುಗೋಪಾಲರಾಜು (ತಬಲ), ಹೆಚ್.ಎಲ್. ಶಿವಶಂಕರಸ್ವಾಮಿ (ಮೃದಂಗ ಹಾಗೂ ಕೊನ್ನಕೋಲ್), ಆರ್. ಕಾರ್ತಿಕ್ (ಖಂಜಿರ), ಎಸ್.ಶ್ರೀನಿವಾಸ್ (ಘಟಂ), ಹೆಚ್.ಎಲ್.ಅನಂತ ಕೃಷ್ಣಸ್ವಾಮಿ, ಗುರುದತ್ತ, ಎ. ಅಮೋಘ ವರ್ಷ ಸೇರಿದಂತೆ ಇತರೆ ಕಲಾವಿದರು ನಾದಮಂಜ ನುಡಿಸಿ, 'ಹರಿದಾಸಾಮೃತ' ಸಂಗೀತ ಕಾರ್ಯಕ್ರಮಕ್ಕೆ ವಿಶೇಷ ಮೆರಗು ತಂದರು.

### ಹಿರಿಯ ನಾಗರಿಕರಿಗೆ ರೈಲ್ವೆ ಟಿಕೆಟ್ ರಿಯಾಯಿತಿ ಕಡಿತಕ್ಕೆ ಬೇಸರ

ಮೈಸೂರು, ಫೆ.5– ಕೇಂದ್ರ ಬಜೆಟ್‌ನಲ್ಲಿ ರೈಲ್ವೆ ಇಲಾಖೆ ಹೆಚ್ಚಿನ ಹಣ ನೀಡಿದ್ದರೂ ಹಿರಿಯ ನಾಗರಿಕರಿಗೆ ನೀಡುತ್ತಿದ್ದ ಟಿಕೆಟ್ ರಿಯಾಯಿತಿ ಮುಂದುವರೆಸದೆ ಇರುವುದಕ್ಕೆ ಕರ್ನಾಟಕ ರಾಜ್ಯ ಹಿರಿಯ ನಾಗರಿಕರ ಸಂಘ ಎನ್‌ಜಿಒ ತೀವ್ರ ಬೇಸರ ವ್ಯಕ್ತಪಡಿಸಿದೆ.

ಹಲವು ವರ್ಷಗಳಿಂದಲೂ ರೈಲ್ವೆ ಪ್ರಯಾಣದಲ್ಲಿ ಹಿರಿಯ ನಾಗರಿಕರಿಗೆ ರಿಯಾಯಿತಿ ನೀಡಲಾಗುತ್ತಿತ್ತು. ಕೊರೊನಾ ಸಂದರ್ಭದಲ್ಲಿ ನೀಡುತ್ತಿದ್ದ ರಿಯಾಯಿತಿಯನ್ನು ಸ್ಥಗಿತಗೊಳಿಸಿದ್ದು ಸಮಂಜಸವಾದರೂ ಕೊರೊನಾ ನಂತರ ಮುಂದುವರೆಸದಿರುವುದು ವಿಷಾದನೀಯ. ಈ ಬಗ್ಗೆ ರೈಲ್ವೆ ಇಲಾಖೆ ಅಧಿಕಾರಿಗಳು ಗಮನಹರಿಸಿ ಹಿರಿಯ ನಾಗರಿಕರಿಗೆ ರೈಲ್ವೆ ಟಿಕೆಟ್‌ನಲ್ಲಿ ನೀಡುತ್ತಿದ್ದ ರಿಯಾಯಿತಿ ಮುಂದುವರೆಸಬೇಕು ಎಂದು ಕರ್ನಾಟಕ ರಾಜ್ಯ ಹಿರಿಯ ನಾಗರಿಕರ ಸಂಘ ಎನ್‌ಜಿಒ ಮೈಸೂರು ಜಿಲ್ಲಾ ಘಟಕ ಮನವಿ ಮಾಡಿದೆ.

### ನಾಳೆ ಮಹಿಳೆಯರಿಗೆ ರಸಪ್ರಶ್ನೆ ಸ್ಪರ್ಧೆ

ಮೈಸೂರು, ಫೆ.5(ಆರ್‌ಕೆಬಿ)– ಮೈಸೂರಿನ ವಾಣಿವಿಲಾಸ್ ಲೇಡೀಸ್ ಕ್ಲಬ್, ಮೈಸೂರು ಬುಕ್ ಕ್ಲಬ್ಸ್–2015 ಜಂಟಿಯಾಗಿ ಫೆ.7ರಂದು ಬೆಳಗ್ಗೆ 11.15 ಗಂಟೆಗೆ ಮೈಸೂರಿನಲ್ಲಿ ಮಹಿಳೆಯರಿಗಾಗಿ 'ರಸಪ್ರಶ್ನೆ ಸ್ಪರ್ಧೆ' ಏರ್ಪಡಿಸಿದೆ.

ಮೈಸೂರಿನ ನಜರ್‌ಬಾದ್ ತಾಲೂಕು ಕಚೇರಿ ಹಿಂಭಾಗದಲ್ಲಿರುವ ವಾಣಿವಿಲಾಸ್ ಲೇಡೀಸ್ ಕ್ಲಬ್ ಆವರಣದಲ್ಲಿ ಸ್ಪರ್ಧೆ ನಡೆಯಲಿದೆ ಆಸಕ್ತರು ಹೆಸರು ನೋಂದಾಯಿಸಲು ಪ್ರೇಮಾ ಡಿ.ಸಿಲ್ವ ಮೊಬೈಲ್– 9886976324, ಶುಭಾ ನಾಯಕ್, ಮೊಬೈಲ್– 99450 47990 ಸಂಖ್ಯೆಯನ್ನು ಸಂಪರ್ಕಿಸಬಹುದು.


### ಪಕ್ಷದ ಹೆಸರಿನಲ್ಲಿ ನಕಲಿ ವೆಬ್‌ಸೈಟ್: ಪೊಲೀಸರಿಗೆ ದೂರು

ಬೆಂಗಳೂರು: ಪಕ್ಷದ ಹೆಸರಿನಲ್ಲಿ ಕೆಲವು ಅಪರಿಚಿತರು ನಕಲಿ ವೆಬ್‌ಸೈಟ್ ತೆರೆದಿರುವುದಾಗಿ ರಾಜ್ಯ ಕಾಂಗ್ರೆಸ್ ಪೊಲೀಸರಿಗೆ ದೂರು ಸಲ್ಲಿಸಿದೆ. ನಕಲಿ ವೆಬ್‌ಸೈಟ್‌ನಲ್ಲಿ ಪಕ್ಷ ಹಾಗೂ ಅದರ ನಾಯಕರಿಗೆ ಅಗೌರವ ತರುವಂತಹ ಹೇಳಿಕೆಗಳನ್ನು ಪೋಸ್ಟ್ ಮಾಡಲಾಗುತ್ತಿದೆ ಎಂದು ಕೆಪಿಸಿಸಿ ಕಾನೂನು ವಿಭಾಗದ ಕಾರ್ಯಕಾರಿ ಸಮಿತಿ ಸದಸ್ಯ ಶತಭಾಷ್ ಶಿವಣ್ಣ ಸೈಬರ್ ಕ್ರೈಮ್ ಪೊಲೀಸರಿಗೆ ನೀಡಿರುವ ದೂರಿನಲ್ಲಿ ಆರೋಪಿಸಿದ್ದಾರೆ.

ನಕಲಿ ವೆಬ್‌ಸೈಟ್ ತೆರೆದಿರುವವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಅವರು ಆಗ್ರಹಿಸಿದ್ದಾರೆ. ಮಾಹಿತಿ ತಂತ್ರಜ್ಞಾನ ಕಾಯ್ದೆ ಅಡಿಯಲ್ಲಿ ಪೊಲೀಸರು ದೂರು ದಾಖಲಿಸಿ ಕೊಂಡಿದ್ದು, ಮುಂದಿನ ತನಿಖೆ ಕೈಗೊಂಡಿ ದ್ದಾರೆ ಈ ಸಂಬಂಧ ಬೆಂಗಳೂರು ನಗರ ಪೊಲೀಸ್ ಆಯುಕ್ತ ಪ್ರತಾಪ್ ರೆಡ್ಡಿ ಅವರಿಗೂ ದೂರು ಸಲ್ಲಿಸಲಾಗಿದೆ ಎಂದು ಪ್ರಿಯಾಂಕ್ ಖರ್ಗೆ ಟ್ವೀಟರ್‌ನಲ್ಲಿ ತಿಳಿಸಿದ್ದಾರೆ.

# ಕೇಂದ್ರ ಬಜೆಟ್‌ನಲ್ಲಿ ಆಹಾರ, ಆರೋಗ್ಯ, ಅಕ್ಷರಕ್ಕೆ ಆದ್ಯತೆ ಇಲ್ಲ

● ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ವಿಷಾದ ● ಪ್ರಮುಖ ಕ್ಷೇತ್ರಗಳಿಗೆ ನೀಡುವ ಅನುದಾನದಲ್ಲಿ ಕಡಿತ



ಮೈಸೂರು,ಫೆ.5(ಎಂಟಿವೈ)– ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ ಆಹಾರ, ಆರೋಗ್ಯ, ಶಿಕ್ಷಣ ಕ್ಷೇತ್ರವನ್ನು ಕಡೆಗಣಿಸುವ ಮೂಲಕ ದೇಶದ ಅಭಿವೃದ್ಧಿಯನ್ನು ಕುಂಠಿತಗೊಳಿಸಲಾಗಿದೆ ಎಂದು ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಕಿಡಿಕಾರಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶದ ಪ್ರಗತಿಯಲ್ಲಿ ಪ್ರಮುಖ ಪಾತ್ರ ವಹಿಸುವ ಆರೋಗ್ಯ, ಶಿಕ್ಷಣ ಹಾಗೂ ಆಹಾರ ಕ್ಷೇತ್ರವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ. ಸಂವಿಧಾನದ ಆಶಯಗಳನ್ನು ಗಾಳಿಗೆ ತೂರಲಾಗಿದೆ. ಇದೇ ಮೊದಲ ಬಾರಿಗೆ ಈ ಮೂರು ಕ್ಷೇತ್ರವನ್ನು ಕಡೆಗಣಿಸಲಾಗಿದೆ. ಇದರಿಂದ ಮುಂದಿನ ದಿನಗಳಲ್ಲಿ ದೇಶದ ಪ್ರಗತಿ ಮೇಲೆ ದುಷ್ಪರಿಣಾಮ ಬೀರುತ್ತದೆ. ಇದನ್ನು ಯಾರೂ ಗಮನಿಸಿಲ್ಲ. ಮೋದಿ... ಮೋದಿ... ಎಂದು ಬೊಬ್ಬೆ ಹೊಡೆಯುವ ಜನರು ಬಜೆಟ್‌ನಲ್ಲಿನ ನ್ಯೂನತೆಗಳ ಬಗ್ಗೆ ಯಾಕೆ ತುಟಿ ಬಿಚ್ಚುತ್ತಿಲ್ಲ ಎಂದು ಪ್ರಶ್ನಿಸಿದರು.

ದೇಶದ ಪ್ರಧಾನಿಯಾಗಿ ಮೋದಿ ಅಧಿಕಾರ ವಹಿಸಿಕೊಂಡ ನಂತರ ಹಂತ ಹಂತವಾಗಿ ಎಲ್ಲಾ ಕ್ಷೇತ್ರಗಳಲ್ಲೂ ಪ್ರಗತಿ ಕುಂಠಿತವಾಗಿದೆ. ಈ ಸಾಲಿನ ಬಜೆಟ್‌ನಲ್ಲಿ ಹಲವು ಕ್ಷೇತ್ರಗಳಿಗೆ ನೀಡಿರುವ ಅನುದಾನದ ಪ್ರಮಾಣ ಕಡಿಮೆ ಮಾಡಲಾಗಿದೆ. ಕೇಂದ್ರ ಸರ್ಕಾರ ಕಳೆದ ಐದು ವರ್ಷಗಳಲ್ಲಿ ಅನುದಾನ ಕಡಿಮೆ ಮಾಡುವ ಪ್ರಮಾಣ ವರ್ಷದಿಂದ ವರ್ಷಕ್ಕೆ ಹೆಚ್ಚಿಸಲಾಗಿದೆ. ಈ ಧೋರಣೆಯಿಂದ ಪ್ರಗತಿ ಸಾಧಿಸಲು ಸಾಧ್ಯವೇ ಎಂದು ಪ್ರಶ್ನಿಸಿದ ಅವರು, ಬಡವರು, ಕೂಲಿ ಕಾರ್ಮಿಕರು, ದೌರ್ಜನ್ಯಕ್ಕೆ ಒಳಗಾದವರು, ಅಲ್ಪಸಂಖ್ಯಾತರು, ದಲಿತರ ಸ್ಥಿತಿಗತಿ ಸುಧಾರಿಸಲು ಸಾಧ್ಯವಾಗುವುದಿಲ್ಲ ಎಂದು ಕಿಡಿಕಾರಿದರು.

ಶಿಕ್ಷಣ ಕ್ಷೇತ್ರಕ್ಕೆ ಕೇವಲ 31 ಸಾವಿರ ಕೋಟಿ ಮೀಸಲಿಡಲಾಗಿದೆ. ಇದರಿಂದ ರಾಜ್ಯಕ್ಕೊಂದು ಕೋಟಿ ಕೊಟ್ಟರೂ ಶಾಲಾ ವಿದ್ಯಾರ್ಥಿಗಳಿಗೆ ಸೌಲಭ್ಯ ಕಲ್ಪಿಸಲು ಸಾಧ್ಯವಾಗುವುದಿಲ್ಲ. ಬಿಸಿಯೂಟ ಯೋಜನೆ ನಡೆಸುವುದಕ್ಕೆ ಕಷ್ಟವಾಗುತ್ತದೆ. ಇದರಿಂದಾಗಿ ಶಿಕ್ಷಣ ಕ್ಷೇತ್ರಕ್ಕೆ ದೊಡ್ಡ ಹೊಡೆತ ಬೀಳುವುದು ಖಚಿತ ಎಂದರು.

ದೇಶದಲ್ಲಿ 150 ವಿಮಾನ ನಿಲ್ದಾಣಗಳನ್ನು ನಿರ್ಮಿಸುವುದಾಗಿ ಹೇಳಿದ್ದಾರೆ. ಹೊಟ್ಟೆಗೆ ಅನ್ನವೇ ಇಲ್ಲದ ಮೇಲೆ ವಿಮಾನ ನಿಲ್ದಾಣ ನಿರ್ಮಿಸಿ ಏನು ಪ್ರಯೋಜನ ಪ್ರಜ್ಞಾವಂತರು, ದಲಿತ ಮುಖಂಡರು, ತಿಳಿದಿರುವವರು ಬಜೆಟ್ ಹಾಗೂ ಪರಿಸ್ಥಿತಿಯ ವಾಸ್ತವತೆಯನ್ನು ಜನ ಸಾಮಾನ್ಯರಿಗೆ ತಿಳಿಸಲು ಮುಂದೆ ಬರುತ್ತಿಲ್ಲ. ಮಂತ್ರಿಗಳು, ಶಾಸಕರು, ರಾಜಕಾರಣಿಗಳು ಕಾನ್ವೆಂಟ್‌ಗಳಲ್ಲಿ ಶಿಕ್ಷಣ ಪಡೆಯುತ್ತಾರೆ. ಹೈಟೆಕ್ ಆಸ್ಪತ್ರೆಗಳಲ್ಲಿ ಆರೋಗ್ಯ ಸೇವೆ ಪಡೆದುಕೊಳ್ಳುತ್ತಾರೆ. ಊಟ, ತಿನಿಸಿನ ಬಗ್ಗೆ ತೊಂದರೆಯಾಗುವುದಿಲ್ಲ ಅದಕ್ಕಾಗಿ ಬಜೆಟ್‌ನಲ್ಲಿ ನಿರ್ಲಕ್ಷಿಸಿರುವುದನ್ನು ಜನರ ಮುಂದೆ ಹೇಳುತ್ತಿಲ್ಲ ಅವರೆಲ್ಲಾ ಹೊಟ್ಟೆತುಂಬಿದ ಜನರಾಗಿದ್ದಾರೆ. ತಳ ಸಮುದಾಯ, ಬಡವರ ಬಗ್ಗೆ ಕಾಳಜಿ ಅವರಿಗಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

### ರಾಜ್ಯದ ಆಸ್ತಿ ಮಾರ್ವಾಡಿಗಳ ಪಾಲಾಗುತ್ತಿದೆ

ಮೈಸೂರು ಮಹಾರಾಜರು ನಿರ್ಮಿಸಿದ್ದ ಭದ್ರಾವತಿ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ ಸುಸ್ಥಿತಿಯಲ್ಲಿದ್ದರೂ ಅದನ್ನು ಮುಚ್ಚಲು ಸಂಚು ನಡೆಸಲಾಗಿದೆ. ರಾಜರ ಕಾಲದಲ್ಲಿ 1923ರಲ್ಲಿ ಸ್ಥಾಪಿತವಾದ ಈ ಕಾರ್ಖಾನೆಯಲ್ಲಿ 16 ಸಾವಿರ ಖಾಯಂ ಹಾಗೂ 21 ಸಾವಿರ ಸೀಜನ್ ನೌಕರರಿಗೆ ಕೆಲಸ ನೀಡಿದ್ದರು. ಪ್ರಸ್ತುತ 220 ಖಾಯಂ, 1200 ಮಂದಿ ಗುತ್ತಿಗೆ ನೌಕರರು ದುಡಿಯುತ್ತಿದ್ದಾರೆ. ಇಂದಿಗೂ 300 ಕೋಟಿ ರೂ. ಲಾಭಗಳಿಸುತ್ತಿದೆ. ಆದರೂ ಈ ಕಾರ್ಖಾನೆಯನ್ನು ಮುಚ್ಚಲು ಹೊರಟಿರುವುದು ಯಾಕೆ. ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ, ಆ ಭಾಗದ ಸಂಸದ ಬಿ.ವೈ.ರಾಘವೇಂದ್ರ, ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಏನು ಮಾಡುತ್ತಿದ್ದಾರೆ. ಇದು ಕರ್ನಾಟಕದ ಆಸ್ತಿ. ಸ್ಥಳೀಯರ ಅಸ್ಮಿತೆಯ ಪ್ರಶ್ನೆಯಾಗಿರುವ ಈ ಕಾರ್ಖಾನೆಯನ್ನು ರಕ್ಷಿಸಲು ಪ್ರಯತ್ನಿಸುತ್ತಿಲ್ಲ. ಯಡಿಯೂರಪ್ಪ ಕುಟುಂಬದವ ರೇನಾದರೂ ಕಾರ್ಖಾನೆಯ ಭೂಮಿ ಲಪಟಾಯಿಸಲು ಸಂಚು ನಡೆಸುತ್ತಿರಬಹುದೇ ಎಂಬ ಸಂಶಯ ಕಾಡುತ್ತಿದೆ. ಸರ್ಕಾರಿ ಭೂಮಿ ಲಪಟಾಯಿಸುವುದರಲ್ಲಿ ನೀವು ನಿಸ್ಸೀಮರು. ಮೋದಿ, ಅಮಿತ್ ಷಾ ಸೇರಿಕೊಂಡು ಕರ್ನಾಟಕದ ಎಲ್ಲಾ ಆಸ್ತಿಗಳನ್ನು ಒಂದೊಂದಾಗಿ ಗುಜರಾತ್‌ನ ಮಾರ್ವಾಡಿಗಳಿಗೆ ಕೊಡುತ್ತಿದ್ದಾರೆ ಎಂದು ಕಿಡಿಕಾರಿದರು.

**ಜನ ಪ್ರಶ್ನಿಸಬೇಕು:** ಶಿವಮೊಗ್ಗದಲ್ಲಿನ ವಿಮಾನ ನಿಲ್ದಾಣದ ಉದ್ಘಾಟನೆಗೆ ಪ್ರಧಾನಿ ನರೇಂದ್ರ ಮೋದಿ ಫೆ.27ಕ್ಕೆ ಆಗಮಿಸುತ್ತಿದ್ದಾರೆ. ಆ ಸಂದರ್ಭದಲ್ಲಿ ಭದ್ರಾವತಿಯ ಜನರು ಸಾವಿರಾರು ಸಂಖ್ಯೆಯಲ್ಲಿ ಸೇರಿ, ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯನ್ನು ಮುಚ್ಚದಂತೆ, ಮಾರಾಟ ಮಾಡದಂತೆ ಆಗ್ರಹಿಸಬೇಕು.

### ಸಿಡಿ ಬಗ್ಗೆ ವಿಶ್ವನಾಥ್ ಸಿಡಿಮಿಡಿ

ಮೈಸೂರು, ಫೆ.5(ಎಂಟಿವೈ)– ಪ್ರತಿಯೊಬ್ಬರ ಜೀವನದಲ್ಲೂ ಗೌಪ್ಯತೆ ಎನ್ನುವುದು ಇರುತ್ತದೆ ಅದನ್ನು ಬಹಿರಂಗಪಡಿಸುತ್ತೇನೆ ಎನ್ನುವುದು ನಾಚಿಕೇಡಿನ ಸಂಗತಿ ಎಂದು ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಕಿಡಿಕಾರಿದ್ದಾರೆ.

ರಾಜ್ಯದಲ್ಲಿ ಸದ್ದು ಮಾಡುತ್ತಿರುವ ಸಿಡಿ ಪ್ರಕರಣದ ಬಗ್ಗೆ ಪ್ರತಿಕ್ರಿಯಿಸಿದ ಅವರು, ಸಿಡಿ ಇದೆ, ಸಿಡಿ ಇದೆ ಎಂದು ಹೇಳಿಕೊಂಡು ತೇಜೋವಧೆ ಮಾಡುವುದು ಸರಿಯಲ್ಲ ಸಿಡಿ ಗಲಾಟೆ ರಾಜಕಾರಣಕ್ಕೆ ಶೋಭೆ ತರುವುದಿಲ್ಲ. ರಾಜಕಾರಣವೇ ಬೇರೆ, ಅಂತರಂಗವೇ ಬೇರೆ. ಎಲ್ಲರಿಗೂ ಅವರದೇ ಆದ ಗೌಪ್ಯತೆ ಇರುತ್ತದೆ. ನಿನ್ನ ಅವಧಿಯಲ್ಲಿ ಏನು ಅಭಿವೃದ್ಧಿ ಮಾಡಿದ್ದೀಯಾ ಎಂದು ಪ್ರಶ್ನಿಸಬೇಕು. ಅದನ್ನು ಬಿಟ್ಟು ಎಲ್ಲಿ ಮಲಗಿದ್ದೆ, ಯಾರೊಂದಿಗೆ ಮಲಗಿದ್ದೆ ಎಂದು ಪ್ರಶ್ನಿಸುವುದು ಮೂರ್ಖತನದ ಪರಮಾವಧಿ. ಯಾರೊಬ್ಬರ ಗೌಪ್ಯತೆ ಬಗ್ಗೆ ಮಾತನಾಡಬಾರದು. ಅದನ್ನು ಬಹಿರಂಗಪಡಿಸುತ್ತೇನೆ ಎಂದರೆ ಅವರಂತಹ ಮೂರ್ಖ ಇನ್ನೊಬ್ಬ ಇಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

**ಬಿಜೆಪಿಯಿಂದ ಹಣ ಪಡೆದಿಲ್ಲ:** ಕೆಲವರು ಗಾಳಿಯಲ್ಲಿ ಗುಂಡು ಹೊಡೆದಂತೆ ಬಿಜೆಪಿಯಿಂದ ಹಣ ಪಡೆದಿರುವ ಆರೋಪ ಮಾಡುತ್ತಿದ್ದಾರೆ. ನಾನು ಬಿಜೆಪಿಯಿಂದ ಹಣ ಪಡೆದಿಲ್ಲ. ಒಂದು ವೇಳೆ ಹಣ ಪಡೆದಿದ್ದರೆ, ಯಡಿಯೂರಪ್ಪ ಅವರ ಭ್ರಷ್ಟಾಚಾರದ ಬಗ್ಗೆ ಬಹಿರಂಗವಾಗಿ ಹೇಳಲು ಸಾಧ್ಯವಾಗುತ್ತಿರಲಿಲ್ಲ. ಸಿಎಂ ಸ್ಥಾನದಿಂದ ಕೆಳಗಿಳಿಯುವ ಮುನ್ನ ಯಡಿಯೂರಪ್ಪ 3500 ಎಕರೆ ಭೂಮಿಯನ್ನು ಕಂಪನಿಯೊಂದಕ್ಕೆ ಮಾರಾಟ ಮಾಡಲು ಮುಂದಾಗಿದ್ದರು. ಅದನ್ನು ಸಭೆಯಲ್ಲೇ ನಾನು ಎದ್ದು ನಿಂತು ವಿರೋಧಿಸಿದ್ದೆ. ದೆಹಲಿಯ ಆರ್‌ಎಸ್‌ಎಸ್ ಮುಖಂಡರು ಹಾಗೂ ಪಕ್ಷದ ವರಿಷ್ಠರ ಗಮನಕ್ಕೂ ತಂದಿದ್ದೆ. ರಾಜ್ಯಕ್ಕೆ ಬಂದಿದ್ದ ದೆಹಲಿ ವರಿಷ್ಠರ ಮುಂದೆಯೇ ಯಡಿಯೂರಪ್ಪ ಅವರನ್ನು ನೀವೊಬ್ಬರು ಭ್ರಷ್ಟರು ಎಂದು ಜರಿದಿದ್ದೆ. ಇಂತಹ ಗಟ್ಟಿತನ ಯಾರಿಗೆ ಇದೆ. ನಾನು ಚಮಚಾಗಿರಿ ಮಾಡಿಕೊಂಡು ರಾಜಕಾರಣ ಮಾಡುವವನಲ್ಲ ಎಂದರು.

ಭರತ ಹುಣ್ಣಿಮೆ, ಮಾಘಸ್ನಾನ ಹಿನ್ನೆಲೆ

# ಶ್ರೀಕಂಠೇಶ್ವರ ದೇವಾಲಯಕ್ಕೆ ಹರಿದು ಬಂದ ಭಕ್ತಸಾಗರ



ನಂಜನಗೂಡು, ಫೆ.5– ಭರತ ಹುಣ್ಣಿಮೆ ಹಿನ್ನೆಲೆ ಯಲ್ಲಿ ದಕ್ಷಿಣ ಕಾಶಿ ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯಕ್ಕೆ ಭಾನುವಾರ ರಾಜ್ಯದ ನಾನಾ ಭಾಗಗಳಿಂದ ಸಾವಿರಾರು ಭಕ್ತರು ಆಗಮಿಸಿ ವಿಶೇಷ ಪೂಜೆ ಸಲ್ಲಿಸಿ ದೇವರ ದರ್ಶನ ಪಡೆದರು.

ಭರತ ಪೂರ್ಣಿಮೆ, ಮಾಘಸ್ನಾನ ಪ್ರಯುಕ್ತ ಶನಿವಾರ ಸಂಜೆಯಿಂದಲೇ ರಾಜ್ಯದ ವಿವಿಧ ಮೂಲೆಗಳಿಂದ ದೇವಾಲಯದತ್ತ ಸಾಗರೋಪಾದಿಯಲ್ಲಿ ಹರಿದು ಬಂದ ಭಕ್ತರು, ಮುಂಜಾನೆ 4 ಗಂಟೆಯಿಂದಲೇ ಇಲ್ಲಿನ ಕಪಿಲಾ ನದಿಯಲ್ಲಿ ಮಿಂದು, ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದರು. ಅಲ್ಲದೇ ತುಲಾಭಾರ, ಉರುಳುಸೇವೆ, ಈಡುಗಾಯಿ ಸೇವೆ, ಧೂಪದ ಸೇವೆ, ದೇವಿಗೆ ಕುಂಕುಮಾರ್ಚನೆ, ಶ್ರೀಕಂಠೇಶ್ವರಸ್ವಾಮಿಗೆ ಬೆಳ್ಳಿ ಅಂಗಾಂಗಳ ಹರಕೆಯನ್ನು ಹುಂಡಿಗೆ ಹಾಕಿ ಶ್ರದ್ಧಾಭಕ್ತಿಗಳಿಂದ ಸೇವೆ ಸಲ್ಲಿಸಿ ಭಕ್ತಿಭಾವ ಮೆರೆದರು.

ಹುಣ್ಣಿಮೆ ಅಂಗವಾಗಿ ಶ್ರೀಕಂಠೇಶ್ವರಸ್ವಾಮಿ ಅವರಿಗೆ ಚಿನ್ನದ ಕೊಳಗ ತೊಡಿಸಿ, ವಿವಿಧ ಪುಷ್ಪಗಳಿಂದ ಅಲಂಕರಿಸಲಾಗಿತ್ತು. ಶ್ರೀಕಂಠೇಶ್ವರ ಸ್ವಾಮಿ ಅವರಿಗೆ ಮುಂಜಾನೆ ಪಂಚ ತೀರ್ಥಗಳ ವಿಶೇಷವಾದ ಅಭಿಷೇಕ ಪೂಜೆ, ಬಿಲ್ವಾರ್ಚನೆ, ಪಂಚಾಮೃತ ಅಭಿಷೇಕ, ಕ್ಷೀರಾಭಿಷೇಕ, ಶಾಲ್ಯಾನ್ನ ಅರ್ಚನೆ, ಕಲ್ಲು-ಸಕ್ಕರೆ ಪೂಜೆಗಳನ್ನು ಸಾಂಗೋಪವಾಗಿ ನೆರವೇರಿಸಲಾಯಿತು. ನಂತರ ಮಹಾಮಂಗಳಾರತಿ ನೆರವೇರಿಸಿ ಭಕ್ತರ ದರ್ಶನಕ್ಕೆ ಅನುವು ಮಾಡಿಕೊಡಲಾಯಿತು.

ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸಿದ್ದರಿಂದ ಜನರನ್ನು ನಿಯಂತ್ರಿಸಲು ಪೊಲೀಸರು ಹರಸಾಹಸ ಪಟ್ಟರು. ದೇವಾಲಯದ ಇಓ ಜಗದೀಶ್, ಎಇಓ ವೆಂಕಟೇಶ್ ಪ್ರಸಾದ್ ಸ್ಥಳದಲ್ಲೇ ಹಾಜರಿದ್ದು, ಭಕ್ತರ ದರ್ಶನಕ್ಕೆ ಅನುವು ಮಾಡಿಕೊಟ್ಟರು. ದೇವಾಲಯಕ್ಕೆ ಆಗಮಿಸಿದ್ದ ಭಕ್ತರಿಗೆ ವಿಶೇಷವಾಗಿ ಅನ್ನ, ಸಾಂಬಾರ್, ಪಾಯಸ, ಪಲ್ಯದ ಭೋಜನದ ವ್ಯವಸ್ಥೆ ಮಾಡಲಾಗಿತ್ತು.

## ಗುಣಮಟ್ಟದ ಹಾಲು ಉತ್ಪಾದನೆಗೆ ಒತ್ತು ನೀಡಿ

ಉತ್ಪಾದಕರಿಗೆ ಶಾಸಕ ಅನಿಲ್ ಚಿಕ್ಕಮಾದು ಕರೆ



ಸರಗೂರು, ಫೆ.5– ಹಾಲು ಉತ್ಪಾದಕರು ಗುಣಮಟ್ಟದ ಹಾಲು ಉತ್ಪಾದನೆಗೆ ಒತ್ತು ನೀಡಬೇಕು ಎಂದು ಶಾಸಕ ಅನಿಲ್ ಚಿಕ್ಕಮಾದು ಕರೆ ನೀಡಿದರು.

ತಾಲೂಕಿನ ಬಡಗಲಪುರದಲ್ಲಿ ಭಾನುವಾರ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ನೂತನ ಕಟ್ಟಡ, ಒಕ್ಕೂಟದ 174ನೇ ಬಿಎಂಸಿ ಕೇಂದ್ರ ಉದ್ಘಾಟಿಸಿ ಅವರು ಮಾತನಾಡಿದರು. ಹೆಚ್.ಡಿ.ಕೋಟೆಯಲ್ಲಿ ಮೊದಲು 29 ಡೈರಿಗಳಿದ್ದವು. ಮೈಮುಲ್ ನಿರ್ದೇಶಕ ಕೆ.ಈರೇಗೌಡರು ಕ್ಷೇತ್ರದಲ್ಲಿ 161ಕ್ಕೂ ಹೆಚ್ಚು ಡೈರಿ ಸ್ಥಾಪನೆ ಮಾಡುವ ಮೂಲಕ ಸಹಕಾರ ಕ್ಷೇತ್ರದಲ್ಲಿ ಸಾಧನೆ ಮಾಡುತ್ತಿದ್ದಾರೆ. ಹೀಗಾಗಿ ಹಾಲು ಉತ್ಪಾದಕರು ಗುಣಮಟ್ಟದ ಹಾಲು ಉತ್ಪಾದನೆಗೆ ಮುಂದಾಗಬೇಕು ಎಂದು ಸಲಹೆ ನೀಡಿದರು.

ಮೈಮುಲ್ ನಿರ್ದೇಶಕ ಕೆ.ಈರೇಗೌಡ ಮಾತನಾಡಿ, 2006ರಲ್ಲಿ ಗ್ರಾಮದಲ್ಲಿ ಸ್ಥಾಪನೆಯಾದ ಡೈರಿಗೆ ಸ್ವಂತ ಕಟ್ಟಡವಿರಲಿಲ್ಲ. ದಾನಿಗಳು ನಿವೇಶನ ನೀಡಿದ್ದು, ಕಟ್ಟಡ ನಿರ್ಮಾಣಗೊಂಡಿದೆ. ಹಾಲು ಉತ್ಪಾದಕರು ಮೈಮುಲ್‌ನಿಂದ ಸಿಗುವ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಕೃಷಿಯೊಂದಿಗೆ ಹೈನುಗಾರಿಕೆಯಲ್ಲೂ ಹೆಚ್ಚಾಗಿ ತೊಡಗಿಸಿಕೊಳ್ಳಬೇಕು ಎಂದರು.

ಮೈಮುಲ್ ವ್ಯವಸ್ಥಾಪಕ ಡಾ.ಸಣ್ಣತಮ್ಮೇಗೌಡ ಮಾತನಾಡಿದರು. ಮೈಮುಲ್ ನಿರ್ದೇಶಕಿ ದಾಕ್ಷಾಯಿಣಿ, ಸಂಘದ ಅಧ್ಯಕ್ಷೆ ಶೋಭಾ, ಉಪ ವ್ಯವಸ್ಥಾಪಕ ಸಂತೋಷ್, ಹಿರಿಯ ವಿಸ್ತರಣಾಧಿಕಾರಿ ಆರೀಫ್ ಇಕ್ಬಾಲ್, ವಿಸ್ತಾರಣಾಧಿಕಾರಿ ಎಂ.ಅವಿನಾಶ್, ಸಂಘದ ಉಪಾಧ್ಯಕ್ಷೆ ಪ್ರೇಮ, ನಿರ್ದೇಶಕರಾದ ಎಚ್.ಎಸ್.ಸರಿತಾ, ಸರೋಜಮ್ಮ, ಶಿವಮ್ಮ, ರತ್ನಮ್ಮ, ಮಂಗಳಮ್ಮ, ಕಾರ್ಯದರ್ಶಿ ಎನ್.ಸಿ.ರತ್ನಮ್ಮ, ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನಾಧಿಕಾರಿ ಗಣೇಶ್, ಪ್ರಾಂಶುಪಾಲ ಬಿ.ಟಿ.ವಿಜಯ್, ಜಿಪಂ ಮಾಜಿ ಸದಸ್ಯ ಭಾಗ್ಯಲಕ್ಷ್ಮಿ, ಎಂ.ಕೆಂಡಗಣ್ಣಸ್ವಾಮಿ, ಹಾದನೂರು ಗ್ರಾಪಂ ಉಪಾಧ್ಯಕ್ಷೆ ಜ್ಯೋತಿ, ಸದಸ್ಯರಾದ ಬಿ.ಎಸ್.ಗಂಗಾಧರ್, ಮಂಜುಳಾ, ಪ್ರಕಾಶ್, ಶಿವಲಿಂಗಯ್ಯ, ಶಿವರಾಜು, ವೆಂಕಟರಾಮು, ಲಿಂಗರಾಜು, ಸೇವಾದಳ ಅಧ್ಯಕ್ಷ ಮಣಿಕಂಠ, ಪ್ರಕಾಶ್ ಸೇರಿದಂತೆ ಹಾಲು ಉತ್ಪಾದಕರು, ಗ್ರಾಮಸ್ಥರು ಹಾಜರಿದ್ದರು.

## ತಹಸೀಲ್ದಾರ್‌ರಿಂದ ಗ್ರಾಮ ಸಹಾಯಕರ ಅಕ್ರಮ ನೇಮಕ

ಕ್ರಮಕ್ಕೆ ಆಗ್ರಹಿಸಿ ಡಿಸಿಗೆ ದಸಂಸ ಜಿಲ್ಲಾ ಸಂಚಾಲಕ ಶಿವಕುಮಾರ್ ಮನವಿ



ತಿ.ನರಸೀಪುರ, ಫೆ.5– ನಿಯಮ ಉಲ್ಲಂಘಿಸಿ ತಹಸೀಲ್ದಾರ್ ಗ್ರಾಮ ಸಹಾಯಕರನ್ನು ಅಕ್ರಮವಾಗಿ ನೇಮಕ ಮಾಡಿಕೊಂಡಿದ್ದಾರೆ. ನಾಲ್ಕು ವೃತ್ತಗಳಿಗೆ ಖಾಯಂ, ಒಂದು ಹೆಚ್ಚುವರಿ ಹುದ್ದೆ ಸೇರಿ 5 ಹುದ್ದೆಗಳಿಗೂ ತರಾತುರಿ ಸಂದರ್ಶನ ನಡೆದಿದ್ದು, ಆಯ್ಕೆ ಪ್ರಕ್ರಿಯೆಯಲ್ಲಿ ಭಾರೀ ಭ್ರಷ್ಟಾಚಾರ ನಡೆದಿದೆ ಎಂದು ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್ ಆರೋಪಿಸಿದರು.

ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೂಡಲೇ ಗ್ರಾಮ ಸಹಾಯಕರ ಅಕ್ರಮ ನೇಮಕಾತಿ ರದ್ದುಪಡಿಸಬೇಕು. ಈ ಬಗ್ಗೆ ತನಿಖೆ ನಡೆಸಿ, ತಹಸೀಲ್ದಾರ್ ವಿರುದ್ಧ ಜಿಲ್ಲಾಧಿಕಾರಿಗಳು ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದರು.

ಬನ್ನೂರು ಟೌನ್ ವೃತ್ತದಲ್ಲಿ ದಶಕಗಳಿಂದ ಸೇವೆ ಸಲ್ಲಿಸಿದ್ದ ಹೊಂಬಾಳಯ್ಯ ನಿವೃತ್ತಿ ನಂತರ ಆತನ ಮನವಿಯಂತೆ ಮಗ ರಾಜೇಂದ್ರ ಪ್ರಸಾದ್‌ಗೆ ಗ್ರಾಮ ಸಹಾಯಕರಾಗಿ ಸೇವೆ ಸಲ್ಲಿಸಲು ಅಂದಿನ ಆರ್‌ಐ ಮತ್ತು ಉಪ ತಹಸೀಲ್ದಾರ್ ಶಿಫಾರಸಿನಂತೆ ಹಿಂದಿನ ತಹಸೀಲ್ದಾರರು 2022 ಜೂ.22 ರಂದು ನೀಡಿದ್ದ ಆದೇಶ ರದ್ದುಪಡಿಸಿರುವ ಈಗಿನ ತಹಸೀಲ್ದಾರ್ ಅಕ್ರಮ ನೇಮಕ ಮಾಡಿ ಸರ್ವಾಧಿಕಾರಿಯಂತೆ ವರ್ತಿಸುತ್ತಿದ್ದಾರೆ. ತಲಕಾಡು ವೃತ್ತದಲ್ಲಿ 30 ವರ್ಷ ದುಡಿದು ಸಾವನ್ನಪ್ಪಿದ ಮಹದೇವ ಎಂಬುವರ ಕುಟುಂಬಕ್ಕೆ ಅನುಕಂಪದ ನೌಕರಿ ಕೊಡುವ ಬದಲು ಅನ್ಯ ವ್ಯಕ್ತಿಗೆ ಅದರಲ್ಲಿಯೂ ತಹಸೀಲ್ದಾರ್ ಖಾಸಗಿ ವಾಹನ ಚಾಲಕನಿಗೆ ಹುದ್ದೆ ಕೊಟ್ಟು ಕರ್ತವ್ಯ ಲೋಪವೆಸಗಿದ್ದಾರೆ ಎಂದು ದೂರಿದರು.

ನೇಮಕಾತಿ ಆದೇಶವನ್ನು 2022ರ ಡಿ.20 ರಂದು ಪ್ರಕಟಿಸಿ, ಅರ್ಜಿಗಳ ಸ್ವೀಕಾರಕ್ಕೆ ಡಿ.31ರ ಅವಕಾಶ ಕೊಟ್ಟು, ನಂತರ ಬಂದ ಅರ್ಜಿಗಳನ್ನೂ ಪರಿಗಣಿಸುವ ನಿಯಮಗಳನ್ನು ಉಲ್ಲಂಘಿಸಿದ್ದಾರೆ. ಚಾಮನಹಳ್ಳಿ ವೃತ್ತದಲ್ಲಿ 3 ದಶಕಗಳ ಕಾಲ ಸೇವೆ ಸಲ್ಲಿಸಿ ಕೋವಿಡ್‌ನಿಂದ ಮೃತಪಟ್ಟ ರಂಗನಾಥಯ್ಯ ಅವರ ಮಗನಿಗೆ ಹುದ್ದೆಯಲ್ಲಿ ಮುಂದುವರೆಯಲು ಮನವಿಯನ್ವಯ ಕಂದಾಯ ಇಲಾಖೆ ಅಧಿಕಾರಿಗಳು ಶಿಫಾರಸು ಮಾಡಿದ್ದರೂ ಅವರ ಅರ್ಜಿಯನ್ನು ಈಗಿನ ತಹಸೀಲ್ದಾರ್ ವಜಾಗೊಳಿಸಿ ಅವರಿಷ್ಟ ಬಂದಂತೆ ನೇಮಕ ಮಾಡಿಕೊಂಡಿದ್ದಾರೆ. ತುರುಗನೂರು ವೃತ್ತ ನೇಮಕಾತಿ ಕೂಡ ಸಮಂಜಸವಾಗಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪತ್ರಿಕಾಗೋಷ್ಠಿಯಲ್ಲಿ ತಾಲೂಕು ಸಂಚಾಲಕ ಕುಕ್ಕೂರು ರಾಜು, ಮುಖಂಡರಾದ ಹಿರಿಯೂರು ಸೋಮಣ್ಣ, ನಾಗರಾಜ ಮೂರ್ತಿ, ಬನ್ನಹಳ್ಳಿಹುಂಡಿ ಉಮೇಶ ಇನ್ನಿತರರಿದ್ದರು.

## ಮುಂಬರುವ ಚುನಾವಣೆಯಲ್ಲಿ ಶಾಸಕನಾಗಿ ಆಯ್ಕೆ ಮಾಡಿ

ಮಾಜಿ ಶಾಸಕ ಕೆ.ವೆಂಕಟೇಶ್ ಮನವಿ



ಬೆಟ್ಟದಪುರ, ಫೆ.5– ಮುಂಬರುವ ಚುನಾವಣೆಯಲ್ಲಿ ನನ್ನನ್ನು ಶಾಸಕನಾಗಿ ಆಯ್ಕೆ ಮಾಡಿ ಎಂದು ಮನವಿ ಮಾಡಿದ ಮಾಜಿ ಶಾಸಕ ಕೆ.ವೆಂಕಟೇಶ್, ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ನಾಲ್ಕು ಸಾವಿರ ಕೋಟಿ ಅನುದಾನ ತಂದು ತಾಲೂಕನ್ನು ಅಭಿವೃದ್ಧಿ ಪಡಿಸಲಾಗುವುದು ಎಂದು ಭರವಸೆ ನೀಡಿದರು.

ಪಿರಿಯಾಪಟ್ಟಣ ತಾಲೂಕಿನ ಕಣಗಾಲು ಗ್ರಾಮದಲ್ಲಿ ಕಾಂಗ್ರೆಸ್‌ನಿಂದ ಆಯೋಜಿಸಿದ್ದ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ಖಚಿತ. ಅದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ ಎಂದ ಅವರು, ಚುನಾವಣೆಯಲ್ಲಿ ತಾಲೂಕಿನ ಜನತೆ ನನ್ನನ್ನು ಬೆಂಬಲಿಸಿ ಆಯ್ಕೆಗೊಳಿಸಿದರೆ, ತಾಲೂಕನ್ನು ಸಂಪೂರ್ಣ ನೀರಾವರಿ ಪ್ರದೇಶವನ್ನಾಗಿ ಮಾಡುವ ಜೊತೆಗೆ ಸಮಗ್ರವಾಗಿ ಅಭಿವೃದ್ಧಿಗೊಳಿಸಲಾಗುವುದು. ತಾಲೂಕಿನ ಅಭಿವೃದ್ಧಿಗೆ ನೀಲನಕ್ಷೆ ರೂಪಿಸಿದ್ದು, ಹಂತ ಹಂತವಾಗಿ ಅಭಿವೃದ್ಧಿಪಡಿಸಿ ರಾಜ್ಯದಲ್ಲೇ ಪಿರಿಯಾಪಟ್ಟಣ ತಾಲೂಕನ್ನು ಮಾದರಿ ಕ್ಷೇತ್ರವಾಗಿ ಮಾಡಲು ಪಣ ತೊಟ್ಟಿರುವುದಾಗಿ ತಿಳಿಸಿದರು.

ಕೆಲವರು ನಿಮಗೆ ಆಸೆ ಆಮಿಷ ತೋರಿಸುತ್ತಿದ್ದಾರೆ. ಅವರಿಂದ ಅಭಿವೃದ್ಧಿ ಅಸಾಧ್ಯ. ಕೇವಲ ರಸ್ತೆ, ಚರಂಡಿ ಮಾಡುವುದರಿಂದ ತಾಲೂಕು ಅಭಿವೃದ್ಧಿಯಾಗುವುದಿಲ್ಲ. ದೊಡ್ಡ ಪ್ರಮಾಣದಲ್ಲಿ ಯೋಜನೆ ಕೈಗೊಳ್ಳುವುದರಿಂದ ತಾಲೂಕಿನ ಅಭಿವೃದ್ಧಿ ಸಾಧ್ಯ. ಹೀಗಾಗಿ ಮುಂಬರುವ ಚುನಾವಣೆಯಲ್ಲಿ ನನ್ನನ್ನು ಆಯ್ಕೆ ಮಾಡುವ ಮೂಲಕ ನಿಮ್ಮ ಸೇವೆ ಮಾಡಲು ಅವಕಾಶ ಮಾಡಿಕೊಡಬೇಕು ಎಂದು ಮನವಿ ಮಾಡಿದರು.

ಇದಕ್ಕೂ ಮುನ್ನಾ, ತಾಲೂಕಿನ ಹಲಗನಹಳ್ಳಿಯಲ್ಲಿ ಆರಂಭವಾದ ಬೈಕ್ ರ‍್ಯಾಲಿ ರಾಜನಬಿಳಗುಲಿ, ಸುಬ್ಬಯ್ಯನಕೊಪ್ಪಲು, ಐಚನಹಳ್ಳಿ, ಕಣಗಾಲು ಗ್ರಾಮ ತಲುಪಿತು. ಕಾರ್ಯಕ್ರಮದಲ್ಲಿ ಕೆಪಿಸಿಸಿ ಸದಸ್ಯ ನಿತಿನ್ ವೆಂಕಟೇಶ್, ಬೆಟ್ಟದಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರೆಹಮತ್ ಜಾನ್‌ಬಾಬು, ಮಾಜಿ ಜಿಪಂ ಉಪಾಧ್ಯಕ್ಷ ಕೆ.ಸಿ.ಕೃಷ್ಣಪ್ಪ, ಮಾಜಿ ತಾಪಂ ಅಧ್ಯಕ್ಷ ಗೋವಿಂದೇಗೌಡ, ಮುಖಂಡರಾದ ಕರಿಗೌಡ, ಕುಂಜಪ್ಪ ಕಾರ್ನಾಡ್, ಶಂಕರೇಗೌಡ, ನಿವೃತ್ತ ಶಿಕ್ಷಕ ಸಣ್ಣಸ್ವಾಮಿಗೌಡ, ಬೆಟ್ಟದಪುರ ಗ್ರಾಪಂ ಮಾಜಿ ಅಧ್ಯಕ್ಷ ಚನ್ನಕೇಶವ, ಮಾಜಿ ಉಪಾಧ್ಯಕ್ಷ ರಮೇಶ್, ಹಲಗನಹಳ್ಳಿ ಗ್ರಾಪಂ ಸದಸ್ಯ ಸುಹೇಲ್ ಪಾಷಾ ಇದ್ದರು.

## ರಸ್ತೆ, ಚರಂಡಿ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ



ನಂಜನಗೂಡು, ಫೆ.5– ನಗರದ ದೇವಿನಗರ ಬಡಾವಣೆಗೆ ಮೂಲಸೌಕರ್ಯ ಕಲ್ಪಿಸುವ ಸಲುವಾಗಿ ನಗರಸಭೆ ಸಾಮಾನ್ಯ ಅನುದಾನದಲ್ಲಿ 10 ಲಕ್ಷ ವೆಚ್ಚದ ಸಿಸಿ ರಸ್ತೆ, ಚರಂಡಿ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲಾಗಿದೆ ಎಂದು ನಗರ ಸಭಾಧ್ಯಕ್ಷ ಹೆಚ್.ಎಸ್.ಮಹದೇವಸ್ವಾಮಿ ತಿಳಿಸಿದರು.

ನಗರದ ದೇವಿನಗರ ಬಡಾವಣೆಯಲ್ಲಿ ಸಿಸಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿಪೂಜೆ ನೆರವೇರಿಸಿ ಮಾತನಾಡಿದ ಅವರು, ದೇವಿರಮ್ಮನಹಳ್ಳಿ ಬಡಾವಣೆಯಲ್ಲಿ ಚರಂಡಿ, ರಸ್ತೆ, ಮೂಲ ಸೌಕರ್ಯಗಳಿಲ್ಲದೆ ಜನರು ಪರಿತಪಿಸುವಂತಾಗಿತ್ತು. ಈ ಬಡಾವಣೆಗಳು ಹೊಸದಾಗಿ ನಗರಸಭೆಗೆ ಹಸ್ತಾಂತರವಾದ ನಂತರ ಮೂಲ ಸೌಕರ್ಯ ಒದಗಿಸುವ ಸಲುವಾಗಿ ಈಗಾಗಲೇ 20 ಲಕ್ಷ ವೆಚ್ಚದಲ್ಲಿ ರಸ್ತೆ, ಚರಂಡಿ ನಿರ್ಮಿಸಲಾಗಿದೆ. ಈಗ 10 ಲಕ್ಷ ಅನುದಾನದಲ್ಲಿ ರಸ್ತೆ, ಚರಂಡಿ ಅಭಿವೃದ್ಧಿಗೆ ಚಾಲನೆ ನೀಡಲಾಗಿದೆ. ಜೊತೆಗೆ ಬಡಾವಣೆಗೆ 22 ಲಕ್ಷ ಹೆಚ್ಚುವರಿ ಅನುದಾನ ನಿಯೋಜಿಸಲಾಗಿದ್ದು, ಮುಂದಿನ 2 ವಾರಗಳಲ್ಲಿ ಕಾಮಗಾರಿ ಪ್ರಾರಂಭವಾಗಲಿದೆ. ನಗರೋತ್ಥಾನ ಅನುದಾನದಲ್ಲಿ ಸಹ ಅನುದಾನ ನೀಡುವ ಮೂಲಕ ಬಡಾವಣೆಗೆ ಮೂಲ ಸೌಕರ್ಯ ಒದಗಿಸಲಾಗುವುದು ಎಂದರು.

ಈ ವೇಳೆ ನಗರಸಭಾ ಸದಸ್ಯ ಬಾಲಚಂದ್ರ, ನಗರಸಭಾ ಅಧಿಕಾರಿಗಳಾದ ಶ್ರೀನಿವಾಸ್, ಕುಮಾರ್, ಮುಖಂಡರಾದ ಶ್ರೀಕಂಠ, ವೆಂಕಟೇಶ್ ಸೇರಿದಂತೆ ಇತರರಿದ್ದರು.

## ಕೋಟೆ ಪ್ರಥಮ ದರ್ಜೆ ಕಾಲೇಜಿಗೆ ನ್ಯಾಕ್ ಟೀಂ ಭೇಟಿ



ಹೆಚ್.ಡಿ.ಕೋಟೆ, ಫೆ.5– ಪಟ್ಟಣದ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳಲ್ಲಿ ಕರ್ನಾಟಕ ಕಲೆ, ಸಂಸ್ಕೃತಿಯನ್ನು ನೋಡಿ ಕಣ್ತುಂಬಿಕೊಂಡೆವು ಎಂದು ನ್ಯಾಕ್ ಪೀರ್ ಟೀಂನ ಸದಸ್ಯ ದೆಹಲಿಯ ಡಾ.ಬಿ.ಆರ್.ಅಂಬೇಡ್ಕರ್ ವಿಶ್ವವಿದ್ಯಾಲಯದ ಪ್ರೊ.ಕಾರ್ತಿಕ್ ದಾವೆ ತಿಳಿಸಿದರು.

ಪಟ್ಟಣದ ಪ್ರಥಮ ದರ್ಜೆ ಕಾಲೇಜಿಗೆ ಆಗಮಿಸಿದ್ದ ನ್ಯಾಕ್ ಟೀಮ್ ಸದಸ್ಯರು ಕಾಲೇಜಿನಲ್ಲಿ ಇಡೀ ದಿನ ಇಲ್ಲಿನ ಆಗು ಹೋಗುಗಳನ್ನು ವೀಕ್ಷಣೆ ಮಾಡಿ ಸಂಜೆ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ರಾಜ್ಯದಲ್ಲಿ ನಾವು ಇದುವರೆಗೂ ಹಲವು ಕಾಲೇಜುಗಳಿಗೆ ಭೇಟಿ ನೀಡಿದ್ದೇವೆ. ಆದರೆ ನಮಗೆ ಹೆಚ್.ಡಿ.ಕೋಟೆಯಲ್ಲಿ ಸಿಕ್ಕ ಸ್ವಾಗತ ಎಲ್ಲೂ ಸಿಕ್ಕಿರಲಿಲ್ಲ. ಅಲ್ಲದೇ ಈ ಕಾಲೇಜಿನಲ್ಲಿ ಜಾನಪದ ಸೇರಿದಂತೆ ವಿವಿಧ ಕಲೆ ಮತ್ತು ಸಂಸ್ಕೃತಿಗೆ ಬೆಲೆ ನೀಡಲಾಗುತ್ತಿದೆ. ಇದನ್ನು ನೋಡಿ ಕಾಲೇಜಿನ ಬಗ್ಗೆ ನಮ್ಮಲ್ಲಿ ಗೌರವ ಹೆಚ್ಚಾಯಿತು ಎಂದರು.

**ಪೂರ್ಣಕುಂಭ ಸ್ವಾಗತ:** ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಆಗಮಿಸಿದ ನ್ಯಾಕ್ ತಂಡಕ್ಕೆ ವಿದ್ಯಾರ್ಥಿಗಳು ಅದ್ದೂರಿ ಸ್ವಾಗತ ಕೋರಿದರು. ನ್ಯಾಕ್‌ನ ಮೂವರು ಸದಸ್ಯರ ತಂಡ ಕಾಲೇಜು ಆವರಣಕ್ಕೆ ಬರುತ್ತಿದ್ದಂತೆ, ಸ್ಕೌಟ್ಸ್ ಮತ್ತು ಗೈಡ್ ತಂಡ ಆತ್ಮೀಯವಾಗಿ ಬರಮಾಡಿಕೊಂಡಿತು. ನಂತರ 50ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪೂರ್ಣಕುಂಭ ಸ್ವಾಗತ ಕೋರಿದರು.

**ಸಾಂಸ್ಕೃತಿಕ ಕಾರ್ಯಕ್ರಮ:** ವಿದ್ಯಾರ್ಥಿಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿದವು. ವೀರಗಾಸೆ ಕುಣಿತ, ಕಂಸಾಳೆ ನೋಡಿ ನ್ಯಾಕ್ ಸದಸ್ಯರು ಸಂತಸಪಟ್ಟರು.

ಈ ವೇಳೆ ನ್ಯಾಕ್ ಪೀರ್ ಸದಸ್ಯ ಉತ್ತರ ಪ್ರದೇಶದ ಮಹಾತ್ಮ ಗಾಂಧಿ ಸೆಂಟ್ರಲ್ ವಿಶ್ವವಿದ್ಯಾಲಯದ ಡಾ. ಸಂಜೀವಕುಮಾರ್ ಶರ್ಮಾ, ಅಸ್ಸಾಂನ ತಿನುಸ್ಕಿಯಾ ವಾಣಿಜ್ಯ ಕಾಲೇಜಿನ ಡಾ.ಚೈತನ್ಯ ಬೋರಾ, ಪ್ರಾಂಶುಪಾಲರಾದ ಡಾ.ಪ್ರಸನ್ನ, ಉಪನ್ಯಾಸಕರಾದ ಸಂತೋಷ್, ವೇಣುಗೋಪಾಲ್, ಸವಿತಾ, ಕಾತ್ಯಾಯಿನಿ, ಪೂರ್ಣಿಮಾ, ಬೋರಮ್ಮ ಅರುಣ್ ಕುಮಾರ್, ಅಜಿತ್ ಕುಮಾರ್, ಮಮತರಾಣಿ, ಮಹೇಶ್, ಗೌತಮ್, ಮಂಜುನಾಥ್, ರಾಘವೇಂದ್ರ ಶಿವಕುಮಾರ್, ನಾಗರಾಜನಾಯಕ, ವಿನುತಾ, ಸಿಂಧು, ಲಕ್ಷ್ಮಿ, ಪುಟ್ಟರಾಜು, ರಘು, ವಿಶ್ವನಾಥ್ ಇದ್ದರು.

## ಗಿರೀಶ್‌ಗೆ ಪಿಹೆಚ್.ಡಿ ಪದವಿ



ಮೈಸೂರು, ಫೆ.5– ಡಾ. ಪದ್ಮಶೇಖರ್ ಅವರ ಮಾರ್ಗದರ್ಶನದಲ್ಲಿ ಎಚ್.ಎಂ. ಗಿರೀಶ್ ಅವರು ಕನ್ನಡ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

# ರಾಜ್ಯದಲ್ಲಿ ಜೆಡಿಎಸ್ ಅಧಿಕಾರಕ್ಕೆ ಬಂದರೆ ಮಾಜಿ ಸಿಎಂ ಕುಮಾರಸ್ವಾಮಿ ಪಂಚರತ್ನ ಕನಸು ಅನುಷ್ಠಾನ

ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ, ನಟ ನಿಖಿಲ್ ಕುಮಾರಸ್ವಾಮಿ



ತಿ.ನರಸೀಪುರ, ಫೆ.5– ಆಡಳಿತದಲ್ಲಿ ಕನ್ನಡ ಭಾಷೆ ಜಾರಿ ಬಗ್ಗೆ ದೃಢ ನಿರ್ಧಾರ ಕೈಗೊಳ್ಳಲು ಕನ್ನಡಿಗರ ಪಕ್ಷ ಜೆಡಿಎಸ್ ರಾಜ್ಯದಲ್ಲಿ ಅಧಿಕಾರಕ್ಕೆ ಬರಬೇಕು. ಕಲಿಕಾ ಮಾಧ್ಯಮ ತಾರತಮ್ಯ ನಿವಾರಣೆಯಾಗಿ, ಖಾಸಗಿ ಸಂಸ್ಥೆಗಳಲ್ಲಿ ದೊರೆಯುವ ಶಿಕ್ಷಣ ಸರ್ಕಾರಿ ಶಾಲೆಯಲ್ಲಿ ಸಿಗಬೇಕಾದರೆ ಹಾಗೂ ಕುಮಾರಣ್ಣನವರ ಪಂಚರತ್ನ ಕನಸು ಅನುಷ್ಠಾನಗೊಳ್ಳಲು ಜೆಡಿಎಸ್ ಸ್ವತಂತ್ರವಾಗಿ ಸರ್ಕಾರ ರಚಿಸಬೇಕು ಎಂದು ಜೆಡಿಎಸ್ ಯುವ ರಾಜ್ಯಾಧ್ಯಕ್ಷ, ನಟ ನಿಖಿಲ್ ಕುಮಾರಸ್ವಾಮಿ ತಿಳಿಸಿದರು.

ಪಟ್ಟಣದ ಶ್ರೀಗುಂಜಾ ನರಸಿಂಹಸ್ವಾಮಿ ದೇವಾಲಯದ ಆವರಣದಲ್ಲಿ ನಡೆದ ಸಭೆಯಲ್ಲಿ ಮುಖಂಡ ಸಂಪತ್ ಕುಮಾರ್ ಹಾಗೂ ಅವರ 500ಕ್ಕೂ ಹೆಚ್ಚು ಗೆಳೆಯರನ್ನು ಜೆಡಿಎಸ್‌ಗೆ ಬರಮಾಡಿಕೊಂಡು ಮಾತನಾಡಿದ ಅವರು, ಬಡವರು ಮತ್ತು ಮಧ್ಯಮ ವರ್ಗದ ಜನರ ಜೀವನ ಸುಧಾರಿಸಲು ರಾಜ್ಯದಲ್ಲಿ ಜೆಡಿಎಸ್ ಪ್ರಣಾಳಿಕೆ ಪಂಚರತ್ನ ಯೋಜನೆ ಜಾರಿಯಾಗಬೇಕು. ಅದಕ್ಕಾಗಿ ಕುಮಾರಣ್ಣನಿಗೆ ಅಧಿಕಾರ ನೀಡುವಂತೆ ಮನವಿ ಮಾಡಿದರು.

ವರಿಷ್ಠರ ಸೂಚನೆ ಮೇರೆಗೆ ರಾಜ್ಯದಲ್ಲಿ ಪಕ್ಷ ಸಂಘಟಿಸಲು ಯುವಕರನ್ನು ಪಕ್ಷದ ಮುಖ್ಯವಾಹಿನಿಗೆ ತರುವ ಕೆಲಸ ಮಾಡುತ್ತಿದ್ದೇನೆ. ಶಾಸಕ ಎಂ.ಅಶ್ವಿನ್ ಕುಮಾರ್ ಕಾರ್ಯವೈಖರಿ ಮೆಚ್ಚಿ ಸಂಪತ್ ಕುಮಾರ್ ಹಾಗೂ ಅವರ ನೂರಾರು ಗೆಳೆಯರು ಪಕ್ಷ ಸೇರ್ಪಡೆಯಾಗಿದ್ದಾರೆ. ಮುಂಬರುವ ಚುನಾವಣೆಯಲ್ಲಿ ಬಿಜೆಪಿ– ಕಾಂಗ್ರೆಸ್ ಆಮಿಷಕ್ಕೆ ಒಳಗಾಗದೇ ಪ್ರಾದೇಶಿಕ ಪಕ್ಷ ಬೆಂಬಲಿಸುವಂತೆ ಮನವಿ ಮಾಡಿದರು. ಶಾಸಕ ಎಂ.ಅಶ್ವಿನ್‌ಕುಮಾರ್ ಮಾತನಾಡಿ, ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ನಾಯಕತ್ವ ಮೆಚ್ಚಿ, ಯುವ ನಾಯಕ ನಿಖಿಲ್ ಸಮ್ಮುಖದಲ್ಲಿ ಸಂಪತ್ ಕುಮಾರ್ ಹಾಗೂ ಸ್ನೇಹಿತರ ತಂಡ ಜೆಡಿಎಸ್ ಸೇರ್ಪಡೆಯಾಗುತ್ತಿದ್ದಾರೆ ಎಂದರು.

ಇದಕ್ಕೂ ಮುನ್ನಾ, ಪಟ್ಟಣದ ಎಪಿಎಂಸಿಯಿಂದ ಶ್ರೀಗುಂಜಾ ನರಸಿಂಹಸ್ವಾಮಿ ದೇವಾಲಯದವರೆಗೆ ಯುವಕರು ಬೈಕ್ ರ‍್ಯಾಲಿ ನಡೆಸಿದರು. ಇದೇ ವೇಳೆ ನಿಖಿಲ್ ಕುಮಾರಸ್ವಾಮಿ ಅವರಿಗೆ ಕ್ರೇನ್ ಮೂಲಕ 150 ಕೆಜಿ ತೂಕದ ಸೇಬಿನ ಹಾರ ಹಾಕಿ ಪುಷ್ಪವೃಷ್ಟಿಗೈದು ಅದ್ದೂರಿ ಸ್ವಾಗತ ಕೋರಿದರು.

> 6 ತಿ.ನರಸೀಪುರದಲ್ಲಿ ಮತ್ತೊಮ್ಮೆ ಎಂ.ಅಶ್ವಿನ್ ಕುಮಾರ್ ಅವರನ್ನು ಆಯ್ಕೆ ಮಾಡುವ ಹಂಬಲದೊಂದಿಗೆ ಯುವ ಚೈತನ್ಯಯಾತ್ರೆಗೆ ಬಲ ತುಂಬಲು ಜೆಡಿಎಸ್ ಪಕ್ಷ ಸೇರ್ಪಡೆಯಾಗುತ್ತಿದ್ದೇನೆ ಪಕ್ಷ ಸಂಘಟನೆಗೆ ಯುವಕರ ಜೊತೆ ನಿರಂತರವಾಗಿ ಶ್ರಮಿಸುತ್ತೇನೆ.
> –ಸಂಪತ್ ಕುಮಾರ್, ಜೆಡಿಎಸ್ ಯುವ ಮುಖಂಡ.

ಈ ವೇಳೆ ಎಂಎಲ್‌ಸಿ ಸಿ.ಎನ್.ಮಂಜೇಗೌಡ, ಜಿಲ್ಲಾಧ್ಯಕ್ಷ ಎನ್.ನರಸಿಂಹಸ್ವಾಮಿ, ಕ್ಷೇತ್ರಾಧ್ಯಕ್ಷ ಸಿ.ಬಿ.ಹುಂಡಿ ಚಿನ್ನಸ್ವಾಮಿ, ವಕ್ತಾರ ಕಟ್ಟೇಪುರ ಸಿದ್ದಪ್ಪ, ಎಂ.ಕೆ.ಅಡಿಗೆ ಗ್ರೂಪ್ ಎಂ.ಕುಮಾರ್, ಕುರುಬ ಸಮುದಾಯದ ಮುಖಂಡ ಎಂ.ಆರ್.ಶಿವಮೂರ್ತಿ, ಜಿಪಂ ಮಾಜಿ ಸದಸ್ಯ ಎಸ್.ವಿ.ಜಯಪಾಲ ಭರಣಿ, ಸೇವಾಶ್ರಯ ಫೌಂಡೇಷನ್ ಅಧ್ಯಕ್ಷ ಆರ್.ಮಣಿಕಂಠರಾಜ್ ಗೌಡ, ಕೀರ್ತಿ ಸೌಂಡ್ಸ್ ಮುದ್ದಣ್ಣ, ಮುಖಂಡರಾದ ತಿರುಮಕೂಡಲು ಶ್ರೀನಿವಾಸ್, ಜಯರಾಮು, ಸೋಮುದಾದ, ಚೇತನ್ ಶೆಟ್ಟಿ, ರಾಜೇಶ್, ದ್ವಾರಕೀಶ್, ಮಹದೇವಸ್ವಾಮಿ, ನಿಖಿಲ್ ಇನ್ನಿತರರಿದ್ದರು.



## ದಲಿತ ಮುಖಂಡರಿಂದಲೇ ದಲಿತರಿಗೆ ಶೋಷಣೆ: ವಿಷಾದ



ತಿ.ನರಸೀಪುರ, ಫೆ.5– ದಲಿತ ಸಂಘರ್ಷ ಸಮಿತಿ ಹೆಸರಲ್ಲಿ ಕೆಲವು ದಲಿತ ಮುಖಂಡರು ದಲಿತರನ್ನೇ ಶೋಷಣೆ ಮಾಡುತ್ತಿರುವುದು ವಿಷಾದಕರ ಸಂಗತಿ ಎಂದು ತಾಲೂಕು ದಲಿತ ಸಂಘಟನೆಗಳ ಒಕ್ಕೂಟದ ಸಂಚಾಲಕ ಸೋಸಲೆ ಶಶಿಕಾಂತ್ ವಿಷಾದಿಸಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಲೂಕಿನಲ್ಲಿ ಇತ್ತೀಚೆಗೆ ಆಯ್ಕೆಯಾದ ಗ್ರಾಮ ಸಹಾಯಕರ ನೇಮಕ ಕ್ರಮಬದ್ಧವಾಗಿಲ್ಲ. ತಹಸೀಲ್ದಾರ್ ಸಿ.ಜಿ.ಗೀತಾ ನಿಯಮ ಪಾಲನೆ ಮಾಡಿಲ್ಲ ಎಂದು ದಲಿತ ಸಂಘಟನೆ ಮುಖಂಡರು ಹೇಳಿಕೆ ನೀಡುವ ಮೂಲಕ ಗ್ರಾಮ ಸಹಾಯಕರಾಗಿ ಆಯ್ಕೆಯಾಗಿರುವ ಬಡ ದಲಿತರಿಗೆ ಅನ್ಯಾಯ ಮಾಡಲು ಮುಂದಾಗಿದ್ದಾರೆ ಎಂದು ಕಿಡಿಕಾರಿದರು.

ತಹಸೀಲ್ದಾರ್ ಗೀತಾ ಅವರು ಗ್ರಾಮ ಸಹಾಯಕರ ಹುದ್ದೆ ನೇಮಕ ಮಾಡುವಾಗ ನಿಯಮ ಅನುಸರಿಸಿಲ್ಲ. ಇಚ್ಛಾನುಸಾರ ಹುದ್ದೆ ತುಂಬಿದ್ದಾರೆ. ಸವರ್ಣೀಯರನ್ನು ಈ ಹುದ್ದೆಗೆ ನೇಮಕ ಮಾಡಿದ್ದಾರೆ ಎಂದು ಹೇಳುವ ಮೂಲಕ ಸಮಾಜದಲ್ಲಿ ಗೊಂದಲ ಸೃಷ್ಟಿಸುವ ಹುನ್ನಾರವನ್ನು ದಸಂಸ ಮುಖಂಡರು ಮಾಡುತ್ತಿದ್ದಾರೆ. ಹಾಗಾದರೆ ಗ್ರಾಮ ಸಹಾಯಕರ ಹುದ್ದೆಗೆ ಈಗ ನೇಮಕವಾಗಿರುವವರು ದಲಿತರಲ್ಲವೇ? ಈ ಬಡ ದಲಿತರ ಹೊಟ್ಟೆ ಮೇಲೆ ಬರೆ ಎಳೆಯುವ ಮನಸ್ಥಿತಿ ಅವರಿಗೇಕೆ ಎಂದು ಅವರು ಪ್ರಶ್ನಿಸಿದರು.

ದಲಿತರಿಗೆ ನ್ಯಾಯ ಕೊಡಿಸಬೇಕಾದ ದಲಿತ ಮುಖಂಡರು ತಾವು ಹೇಳಿದವರಿಗೆ ಗ್ರಾಮ ಸಹಾಯಕರ ಹುದ್ದೆ ನೀಡಿಲ್ಲ ಎಂಬ ಕಾರಣಕ್ಕೆ ಆರೋಪ ಮಾಡುವುದು ಸರಿಯಲ್ಲ ಎಂದರು.


ವಕೀಲ ಶಿವಮೂರ್ತಿ ಮಾತನಾಡಿ, ದಸಂಸ ಮುಖಂಡ ಆಲಗೂಡು ಶಿವಕುಮಾರ್ ಅವರು ದಲಿತರ ಪರವೋ ಅಥವಾ ದಲಿತರ ವಿರುದ್ಧವೋ ಎಂಬುದು ಗೊತ್ತಾಗುತ್ತಿಲ್ಲ. ತಹಸೀಲ್ದಾರ್ ಗ್ರಾಮ ಸಹಾಯಕರ ಹುದ್ದೆಗಳನ್ನು ಕ್ರಮಬದ್ಧವಾಗಿ ಭರ್ತಿ ಮಾಡಿದ್ದಾರೆ. ಸುಖಸುಮ್ಮನೆ ತಹಸೀಲ್ದಾರ್ ವಿರುದ್ಧ ಹೇಳಿಕೆ ನೀಡಿರುವ ದಸಂಸ ಮುಖಂಡರ ಮಾತಿಗೆ ಜಿಲ್ಲಾಡಳಿತ ಬೆಲೆ ಕೊಡಬಾರದು ಎಂದರು. ವಿಚಾರವಾದಿ ಕರುಹಟ್ಟಿ ಪ್ರಭುಸ್ವಾಮಿ ಮಾತನಾಡಿದರು. ತುಂಬಲ ಮಂಜುನಾಥ್, ರಾಜಶೇಖರ, ಅಮರನಾಥ್, ನಂಜುಂಡಯ್ಯ, ಸುರೇಶ್, ಎಂ.ರಾಜು, ಮಂಜುನಾಥ್, ರಾಜೇಶ್, ಅರವಿಂದ್, ಕುಮಾರ, ವಾಸು ಜಯರಾಮು ಇದ್ದರು.



ಹುಲ್ಲಹಳ್ಳಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿ ಕೆ.ಆರ್.ನಗರ ಪ್ರಥಮ ದರ್ಜೆ ಕಾಲೇಜಿಗೆ ವರ್ಗಾವಣೆಗೊಂಡ ಡಾ.ಪ್ರೊ.ಬಿ.ಎಸ್.ಜಯ ಹಾಗೂ ಉಪನ್ಯಾಸಕರಾದ ರಮೇಶ್, ಹೆಚ್.ಬಿ.ರವಿಕುಮಾರ್, ಹೆಚ್.ಎಲ್.ವಿಷಕಂಠ ಅವರನ್ನು ಆತ್ಮೀಯವಾಗಿ ಬೀಳ್ಕೊಡಲಾಯಿತು.

# ರಾಜಕಾರಣಿಗಳು ರೈತರ ಕೃಷಿ ಭೂಮಿ ಕಬಳಿಸುವ ರಿಯಲ್ ಎಸ್ಟೇಟ್ ಏಜೆಂಟರು

## 'ಭೂ ಸ್ವಾಧೀನ ಒಳ ಸುಳಿಗಳು' ಕೃತಿ ಬಿಡುಗಡೆ ಸಮಾರಂಭದಲ್ಲಿ ಬಡಗಲಪುರ ನಾಗೇಂದ್ರ ಆಕ್ರೋಶ



ಮೈಸೂರು, ಫೆ.5(ಎಂಟಿವೈ)– ರಾಜಕಾರಣಿಗಳು, ಪುಡಿ ರಾಜಕಾರಣಿಗಳೇ ರೈತರ ಕೃಷಿ ಭೂಮಿಯನ್ನು ಕಬಳಿಸುವ ರಿಯಲ್ ಎಸ್ಟೇಟ್ ಏಜೆಂಟರಾಗಿದ್ದಾರೆ ಎಂದು ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಗಂಭೀರ ಆರೋಪ ಮಾಡಿದ್ದಾರೆ.

ಮೈಸೂರಿನ ಬೋಗಾದಿ ರಸ್ತೆಯಲ್ಲಿರುವ ಧ್ವನ್ಯಾಲೋಕದಲ್ಲಿ ಭಾನುವಾರ ಆಯೋಜಿಸಿದ್ದ 'ಕೃಷಿಯ ಸುತ್ತ ಒಂದು ಚರ್ಚೆ' ಕಾರ್ಯಕ್ರಮದಲ್ಲಿ 'ನಮ್ಮೂರ ಭೂಮಿ ನಮಗಿರಲಿ; ಅನ್ಯರಿಗಲ್ಲ' ಬಳಗದಿಂದ ಪ್ರಕಟಿಸಿರುವ 'ಭೂಸ್ವಾಧೀನ ಒಳಸುಳಿಗಳು' ಕೃತಿಯನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ರೈತ ಕುಟುಂಬದಿಂದ ಬಂದಿರುವ ಜನಪ್ರತಿನಿಧಿಗಳೇ ಕೃಷಿಕರ ಕುಟುಂಬಗಳನ್ನು ಬೀದಿಪಾಲು ಮಾಡುತ್ತಿದ್ದಾರೆ. ಕೃಷಿ ಭೂಮಿಯನ್ನು ಕಿತ್ತುಕೊಂಡು ರೈತರನ್ನು ಬೀದಿಗೆ ಬೀಳುವಂತೆ ಮಾಡುತ್ತಿದ್ದಾರೆ. ಭೂಸ್ವಾಧೀನ ವಿರುದ್ಧ ದೊಡ್ಡಮಟ್ಟದ ಹೋರಾಟ ಮಾಡುವ ಅನಿವಾರ್ಯತೆ ಇದೆ. ಸ್ವಾಧೀನಪಡಿಸಿಕೊಂಡ ಭೂಮಿಯನ್ನು ಶೇ.70ರಷ್ಟು ಅನ್ಯ ಉದ್ದೇಶಕ್ಕೆ ಬಳಸಿಕೊಳ್ಳಲಾಗುತ್ತಿದೆ. 5 ವರ್ಷದಲ್ಲಿ ಉದ್ದೇಶಿತ ಕಾರ್ಯ ಜಾರಿಯಾಗದಿದ್ದರೆ ಭೂಮಿಯನ್ನು ರೈತರಿಗೆ ಮರಳಿಸಬೇಕು ಎಂಬ ಕಾಯ್ದೆ ಆಶಯವನ್ನೇ ಕೈಬಿಡಲಾಗಿದೆ ಎಂದರು.

ಇದರಿಂದಾಗಿ ರೈತರಿಂದ ಪ್ರತಿ ಎಕರೆಗೆ 40 ಲಕ್ಷ ರೂಪಾಯಿಯಂತೆ ಖರೀದಿಸಿ, 5 ವರ್ಷದ ಬಳಿಕ ಅದೇ ಭೂಮಿಯನ್ನು ಇನ್ನೊಬ್ಬ ಉದ್ದಿಮೆಗೆ 5 ಕೋಟಿ ರೂ.ಗೆ ಮಾರಲಾಗುತ್ತಿದೆ. ಕೈಗಾರಿಕೋದ್ಯಮಿಗಳು ದುಡ್ಡು ಮಾಡಿಕೊಳ್ಳಲು ಸರ್ಕಾರವೇ ಅವಕಾಶ ನೀಡುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ವರುಣಾ ಬಳಿ ಕಂಪನಿಯೊಂದು ರೈತರಿಂದ ಪ್ರತಿ ಎಕರೆಗೆ 2 ಲಕ್ಷ ರೂಪಾಯಿಯಂತೆ ಭೂಮಿ ಖರೀದಿ ಮಾಡಿತ್ತು. ಅದೇ ಭೂಮಿಯನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ (ಕೆಐಎಡಿಬಿ) 47 ಲಕ್ಷ ರೂ.ಗೆ ಮಾರಲಾಗಿದೆ. ಇದೀಗ ಕೆಐಎಡಿಬಿ ರಿಯಲ್ ಎಸ್ಟೇಟ್‌ನ ಬ್ರೋಕರ್ ಸಂಸ್ಥೆಯಾಗಿದೆ. ಕೃಷಿ ಭೂಮಿ ಸ್ವಾಧೀನದಲ್ಲಿ ಶಾಸಕರು, ಸಂಸದರು ಸಹ ಕಮಿಷನ್ ಪಡೆಯುತ್ತಾರೆ. ಬ್ರಿಟಿಷರ ಕಾಲಕ್ಕಿಂತ ಕೆಟ್ಟ ವ್ಯವಸ್ಥೆ ನಿರ್ಮಾಣವಾಗಿದೆ ಎಂದು ಅವರು ಕಿಡಿಕಾರಿದರು.

ಕೃಷಿ ಭೂಮಿ ಸ್ವಾಧೀನ ಪಡಿಸಿಕೊಂಡು ನಿರ್ಮಾಣವಾಗುವ ರಾಷ್ಟ್ರೀಯ ಹೆದ್ದಾರಿಗಳು ಅಸಮಾನತೆ ಸೃಷ್ಟಿಸುವ ರಹದಾರಿ ಆಗಿದೆ. ಸಾಮಾಜಿಕ ತಾರತಮ್ಯವನ್ನು ಇನ್ನಷ್ಟು ಹೆಚ್ಚಿಸುತ್ತಿದೆ. ಬಂಡವಾಳದಾರರಿಗೆ ಕೈಗಾರಿಕೆ ಸ್ಥಾಪಿಸಲು ಭೂಮಿ, ನೀರು, ತೆರಿಗೆಯಲ್ಲಿ ರಿಯಾಯಿತಿಯಷ್ಟೇ ನೀಡುತ್ತಿಲ್ಲ. ಅವರಿಗೆ ಮೂಲ ಸೌಕರ್ಯ ಕಲ್ಪಿಸಲು ಸಹ ಭೂಮಿಯನ್ನು ಕಿತ್ತುಕೊಳ್ಳಲಾಗುತ್ತಿದೆ. ಅವರಿಗಾಗಿ ರಸ್ತೆ, ವಿಮಾನ ನಿಲ್ದಾಣ ನಿರ್ಮಿಸುವುದೇ ಅಭಿವೃದ್ಧಿಯಾಗಿದೆ. ರೈತರ, ಬಡವರ ಬದುಕು ಬುಡಮೇಲು ಮಾಡುವುದೇ ಅಭಿವೃದ್ಧಿಯೇ? ಇದು ರಾಕ್ಷಸ ಅಭಿವೃದ್ಧಿಯೇ ಸರಿ ಎಂದು ಬೇಸರ ವ್ಯಕ್ತಪಡಿಸಿದರು.

ಚಿಂತಕ ಕೆ.ಪಿ.ಸುರೇಶ್ ಮಾತನಾಡಿ, ಭೂ ಸುಧಾರಣಾ ತಿದ್ದುಪಡಿ ಕಾಯ್ದೆ ಹಲ್ಲು ಇಲ್ಲದ ಹಾವಿನಂತಾಗಿದೆ ಭೂಸ್ವಾಧೀನದಲ್ಲಿ ಪಾಲನೆಯಾಗಬೇಕಿದ್ದ ಸಾಮಾಜಿಕ ಉದ್ದೇಶವನ್ನೇ ಹಾಳುಗೆಡವಲಾಗಿದೆ. ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಪಿಪಿಪಿ) ಯೋಜನೆಗಳು ಸರ್ಕಾರದಿಂದ ಖಾಸಗಿಯವರಿಗೆ ಮಾಡುವ ಅನುಕೂಲಕರ ಯೋಜನೆಯಾಗಿದೆ. ಕಾನೂನಗಳನ್ನೇ ಅಸಹಾಯಕತೆಯ ಸ್ಥಿತಿಗೆ ತಂದು ನಿಲ್ಲಿಸಿ, ರೈತರಿಗೆ ನೆರವು ಸಿಗದಂತೆ ಮಾಡಲಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಕೃಷಿ ಬೆಲೆ ಆಯೋಗದ ಮಾಜಿ ಅಧ್ಯಕ್ಷ ಪ್ರಕಾಶ್ ಕಮ್ಮರಡಿ, ಕೃತಿಯ ಲೇಖಕಿ ಗಾಯಿತ್ರಿ ಚಿಂತಕೂದ ಯತಿರಾಜ್, ಸಂತೋಷ್ ಕೌಜಲಗಿ, ಜಲ ತಜ್ಞ ರವಿಕುಮಾರ್, ರೈತ ಮುಖಂಡ ಹೊಸಕೋಟೆ ಬಸವರಾಜು, ಕಾರ್ಯಕ್ರಮದ ಸಂಯೋಜಕ ಟಿ.ಜಿ.ಎಸ್.ಅವಿನಾಶ್ ಇನ್ನಿತರರು ಇದ್ದರು.

# ಮೈಸೂರು ಸಂಸ್ಥಾನದಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿತ್ತು

## ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್



ಮೈಸೂರು, ಫೆ.5(ಎಸ್‌ಪಿಎನ್)– ಮೈಸೂರು ಸಂಸ್ಥಾನದಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದರಿಂದ, ಇಂದು ಮೈಸೂರಿನಲ್ಲಿ ಕರ್ನಾಟಕ ಸಂಗೀತ ಕಲಿಯುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿದೆ ಎಂದು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅಭಿಪ್ರಾಯಪಟ್ಟರು.

ಮೈಸೂರು ಕುವೆಂಪುನಗರದ ಆದಿಚುಂಚನಗಿರಿ ರಸ್ತೆಯ ಗಾನಭಾರತಿ ಸಭಾಂಗಣದಲ್ಲಿ ಲಯ ವಿದ್ಯಾ ಪ್ರತಿಷ್ಠಾನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಆಯೋಜಿಸಿದ್ದ ಎರಡು ದಿನದ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದ ಸಾಧಕರನ್ನು ಸನ್ಮಾನಿಸುವ ಹಾಗೂ 'ವಿಶೇಷ ತಾಳ ವಾದ್ಯಗಳ ಕಾರ್ಯಕ್ರಮ –'ಲಯಲಹರಿ' ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಮೈಸೂರು ಸಂಸ್ಥಾನದಲ್ಲಿ ಕಲೆಯನ್ನು ಪ್ರೋತ್ಸಾಹಿಸಿದ್ದು ರಾಜಧರ್ಮದಿಂದಾಗಿ. ಹಾಗಾಗಿ ನಾನು ಚಿಕ್ಕವನಿದ್ದಾಗ ನಮ್ಮ ಮನೆಯ ಪಕ್ಕದಲ್ಲಿ ಭಜನೆಯನ್ನು ಹಾಡುತ್ತಿದ್ದರು. ವಾರಾಂತ್ಯದಲ್ಲಿ ಭಜನೆ ಮಾಡುತ್ತಿದ್ದರಿಂದ ಆಟವಾಡಲು ಸಾಧ್ಯವಾಗದಿದ್ದಕ್ಕೆ ಬೇಸರವಾಗುತ್ತಿತ್ತು. ಆದರೆ, ದೊಡ್ಡವನಾದ ಮೇಲೆ ಸಂಗೀತದ ಮಹತ್ವ ತಿಳಿದು ಇದೀಗ ಮತ್ತಷ್ಟು ವ್ಯಾಮೋಹ ಹೆಚ್ಚಾಯಿತು ಎಂದರು.

ವಿದೇಶಗಳಲ್ಲಿ ಕಲೆಯಲ್ಲಿ ತೊಡಗಿದವರು ವೃತ್ತಿ ಎಂದು ಭಾವಿಸುತ್ತಾರೆ. ಆದರೆ, ನಮ್ಮಲ್ಲಿ ಕಲೆಯನ್ನು ಸೇವೆ ಎಂದು ಭಾವಿಸುತ್ತಾರೆ. ಹಾಗಾಗಿ ಕಲಾವಿದರನ್ನು ಸೂಕ್ತ ವೇದಿಕೆಗಳಲ್ಲಿ ಗೌರವಿಸಿ, ಅವರನ್ನು ಗೌರವಯುತವಾಗಿ ನಡೆಸಿಕೊಳ್ಳುವುದು ನಮ್ಮ–ನಿಮ್ಮೆಲ್ಲರ ಕರ್ತವ್ಯ. ಈ ನಿಟ್ಟಿನಲ್ಲಿ ಮೈಸೂರು ಸಂಸ್ಥಾನವು ಕಲೆಯನ್ನು ಗೌರವಿಸುವುದರ ಜೊತೆಗೆ ಕಲಾವಿದರನ್ನು ಗೌರವದಿಂದ ನಡೆಸಿಕೊಳ್ಳುತ್ತಿದ್ದರು. ರಾಜರ ಆಳ್ವಿಕೆ ಕೊನೆಗೊಂಡ ನಂತರ ಈ ಕೆಲಸವನ್ನು ಸರ್ಕಾರ, ಪ್ರಜೆಗಳು ನಿರ್ವಹಿಸುತ್ತಿರುವುದು ಸಂತೋಷ ಸಂಗತಿ ಎಂದರು.

ಮೈಸೂರು ಸಂಸ್ಥಾನ ಆಡಳಿತ ನಡೆಸುತ್ತಿದ್ದಾಗ ಕರ್ನಾಟಕ ಸಂಗೀತಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿತ್ತು. ಅದಕ್ಕಾಗಿ ಕರ್ನಾಟಕ ಸಂಗೀತ ಮೈಸೂರಲ್ಲಿ ಅರಳಿತು ಎಂದರೆ ತಪ್ಪಾಗಲಾರದು. ರಾಜರ ಆಳ್ವಿಕೆ ಕೊನೆಗೊಂಡ ನಂತರ ಬೇರೆ ಬೇರೆ ಕಾರಣಗಳಿಗಾಗಿ ಕರ್ನಾಟಕ ಸಂಗೀತಕ್ಕೆ ಹೆಚ್ಚು ಪ್ರೋತ್ಸಾಹ ಇಲ್ಲದ ಕಾರಣ ಕಲಾವಿದರು ಬೇರೆಬೇರೆ ಕಡೆ ಚದುರಿ ಹೋಗಿದ್ದಾರೆ ಎಂದರು.

**ಸನ್ಮಾನ:** ಈ ವೇಳೆ ಸುಗಮ ಸಂಗೀತ ಕ್ಷೇತ್ರದಿಂದ ವಿದುಷಿ ಹೆಚ್.ಆರ್. ಲೀಲಾವತಿ, ಭರತನಾಟ್ಯ ಕ್ಷೇತ್ರದಿಂದ ಡಾ.ವಸುಂಧರಾ ದೊರೆಸ್ವಾಮಿ, ಮೃದಂಗ ವಾದಕ ವಿದ್ವಾನ್ ಆನೂರು ಅನಂತಕೃಷ್ಣ ಶರ್ಮ, ತಬಲ ವಾದಕ ವಿದ್ವಾನ್ ಬಿ.ಎಸ್.ವೇಣು ಗೋಪಾಲರಾಜು ಅವರನ್ನು ಸನ್ಮಾನಿಸಲಾಯಿತು.

ಈ ವೇಳೆ ಸ್ವರ್ಣ ನೃಸಿಂಹ ದತ್ತಸಾಯಿ ಪೀಠಕ ಸೇವಾ ಟ್ರಸ್ಟ್‌ನ ಶ್ರೀ ಅರ್ಜುನ ಗುರೂಜಿ, ಗಾನಭಾರತಿ ಅಧ್ಯಕ್ಷ ಹಾಗೂ ಸರ್ಜನ್ ಡಾ.ಸಿ.ಟಿ. ನರಸಿಂಹನ್, ಕನ್ನಡ ಮತ್ತು ಸಂಸ್ಕೃತಿ ಸಹಾಯಕ ನಿರ್ದೇಶಕ ಡಾ.ಸುದರ್ಶನ್ ಸೇರಿದಂತೆ ಇತರರಿದ್ದರು.

# ಬಜೆಟ್‌ನಲ್ಲಿ ವಿಶ್ವಕರ್ಮ ಸಮುದಾಯದ ಅಭಿವೃದ್ಧಿಗೆ 300 ಕೋಟಿ ಮೀಸಲಿಡಲು ಮನವಿ

ಮೈಸೂರು, ಫೆ.5(ಎಂಟಿವೈ)– ರಾಜ್ಯದ ಈ ಬಾರಿಯ ಬಜೆಟ್‌ನಲ್ಲಿ ವಿಶ್ವಕರ್ಮ ಸಮುದಾಯ ಅಭಿವೃದ್ಧಿಗಾಗಿ 300 ಕೋಟಿ ಮೀಸಲಿರಿಸಬೇಕು ಎಂದು ಜಿಲ್ಲಾ ವಿಶ್ವಕರ್ಮ ಯುವ ಜಾಗೃತಿ ವೇದಿಕೆ ಅಧ್ಯಕ್ಷ ಕೆ. ಕೆಂಡಗಣ್ಣ ವಿಶ್ವಕರ್ಮ ಮನವಿ ಮಾಡಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಬಿಜೆಪಿ ಸರ್ಕಾರ ವಿಶ್ವಕರ್ಮ ಸಮುದಾಯವನ್ನು ಕಡೆಗಣಿಸುತ್ತಿದೆ. ಕೊರೊನಾ ವೇಳೆ ನಲುಗಿದ ಹಲವಾರು ಸಮುದಾಯಗಳಿಗೆ ಪ್ಯಾಕೇಜ್ ಘೋಷಣೆ ಮಾಡಿದ್ದರೂ ವಿಶ್ವಕರ್ಮ ಸಮುದಾಯವನ್ನು ಕಡೆಗಣಿಸಲಾಗಿದೆ. ನಿಗಮದಿಂದ ಸಾಲ ಪಡೆದವರು ಕೊರೊನಾ ವೇಳೆಯ ಸಂಕಷ್ಟದಿಂದ ಸಾಲ ಮರುಪಾವತಿಸಲು ಆಗಿಲ್ಲ. ಆದ್ದರಿಂದ ಅಂತಹ ಸಾಲ ಮನ್ನಾ ಮಾಡಬೇಕು. ಘೋಷಿಸಿರುವ ಜಕಣಾಚಾರಿ ವಿವಿ ತೆರೆಯಬೇಕು. ವಿಶ್ವಕರ್ಮರ ಸಮಸ್ಯೆ ಅರ್ಥ ಮಾಡಿಕೊಂಡು ಅಭಿವೃದ್ಧಿ ಕ್ರಮ ಕೈಗೊಳ್ಳಬೇಕು. ಈಗಲಾದರೂ ಎಚ್ಚೆತ್ತುಕೊಳ್ಳದಿದ್ದರೆ ಮುಂಬರುವ ವಿಧಾನಸಭಾ ಚುನಾವಣೆ ವೇಳೆ ಸಮುದಾಯ ಕಠಿಣ ನಿರ್ಧಾರ ಕೈಗೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದರು.

# ಚಾಮುಂಡೇಶ್ವರಿ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿ ಬಿಜೆಪಿಯಿಂದ ಮಾತ್ರ ಸಾಧ್ಯ



ಮೈಸೂರು, ಫೆ.5–ಚಾಮುಂಡೇಶ್ವರಿ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿ ಬಿಜೆಪಿಯಿಂದ ಮಾತ್ರ ಸಾಧ್ಯ ಎಂದು ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ನಿಕಟಪೂರ್ವ ಅಧ್ಯಕ್ಷ ಹಾಗೂ ಮುಖಂಡರಾದ ಎನ್.ಅರುಣ್ ಕುಮಾರ್ ಗೌಡ ಹೇಳಿದರು.

ಚಾಮುಂಡೇಶ್ವರಿ ಕ್ಷೇತ್ರದ ಮುರುಡಗಳ್ಳಿ ಗ್ರಾಮದಲ್ಲಿ ಆಯೋಜಿಸಿದ್ದ ಯುವ ಕಾರ್ಯಕರ್ತರು ಬಿಜೆಪಿ ಪಕ್ಷಕ್ಕೆ ಸೇರ್ಪಡೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರ ಹಾಗೂ ರಾಜ್ಯದಲ್ಲಿ ಯಡಿಯೂರಪ್ಪ ಮತ್ತು ಬಸವರಾಜ್ ಬೊಮ್ಮಾಯಿ ನೇತೃತ್ವದ ರಾಜ್ಯ ಸರ್ಕಾರವು ನೀಡಿರುವ ಅನೇಕ ಜನಪರ ಕಾರ್ಯಕ್ರಮಗಳನ್ನು ಮೆಚ್ಚಿ ರಾಜ್ಯದ ಜನತೆ ಬಿಜೆಪಿಯತ್ತ ವಾಲಿರುವುದು ಸ್ಪಷ್ಟವಾಗಿದ್ದು, ರಾಜ್ಯದಲ್ಲಿ ಮತ್ತೊಮ್ಮೆ ಬಿಜೆಪಿ ಬಹುಮತ ಪಡೆದು ಸರ್ಕಾರ ರಚನೆ ಮಾಡುವುದು ನಿಶ್ಚಿತವಾಗಿದೆ ಎಂದರು.

ಮತ್ತೊಮ್ಮೆ ಕೇಂದ್ರ ಹಾಗೂ ರಾಜ್ಯದಲ್ಲಿ ಡಬಲ್ ಇಂಜಿನ್ ಸರ್ಕಾರ ಆಡಳಿತ ನಡೆಸುವುದು ಖಾತ್ರಿಯಾಗಿದ್ದು, ಇಂತಹ ಸಂದರ್ಭದಲ್ಲಿ ಚಾಮುಂಡೇಶ್ವರಿ ಕ್ಷೇತ್ರದಲ್ಲೂ ಬಿಜೆಪಿ ಅಭ್ಯರ್ಥಿಯನ್ನು ಆಯ್ಕೆ ಮಾಡುವುದು ನಮ್ಮ ನಿಮ್ಮೆಲ್ಲರ ಕರ್ತವ್ಯವಾಗಿದೆ. ಹಾಗೇ ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಾಧನೆಗಳನ್ನು ಮನೆ ಮನೆಗೆ ತಲುಪಿಸುವುದರ ಮೂಲಕ ಜನರಲ್ಲಿ ಜಾಗೃತಿ ಮೂಡಿಸಬೇಕೆಂದು ಕರೆ ನೀಡಿದರು.

ಇದೇ ಸಂದರ್ಭದಲ್ಲಿ ಮುರುಡಗಳ್ಳಿ ಗ್ರಾಮದ ಯುವ ಮುಖಂಡರುಗಳಾದ ಸುದೀಪ್, ಚಾಮರಾಜು, ಮಹೇಶ್, ಪುನೀತ್, ಸತೀಶ್, ಮಹೇಶ ಸೇರಿದಂತೆ ಹಲವು ಯುವಕರು ಅರುಣ್ ಕುಮಾರ್ ಗೌಡರ ನೇತೃತ್ವದಲ್ಲಿ ಬಿಜೆಪಿ ಪಕ್ಷ ಸೇರ್ಪಡೆಗೊಂಡರು. ಈ ಸಂದರ್ಭದಲ್ಲಿ ಪಕ್ಷದ ಮುಖಂಡರಾದ ಗೋಪಾಲ್ ಗೌಡ, ವಿಜಯ್ ಗೌಡ, ಎನ್.ಕೆ.ರವಿಕುಮಾರ್, ಮೂಗನಹುಂಡಿ ಮಂಜು, ಪ್ರಭು, ಕೋಟೆಹುಂಡಿ ಮಾಲೆಗೌಡ ಮತ್ತಿತರರಿದ್ದರು.

# ಕ್ಯಾನ್ಸರ್ ಜಾಗೃತಿ ಜಾಥಾ




ಮೈಸೂರು, ಫೆ.5(ಆರ್‌ಕೆಬಿ)– ವಿಶ್ವ ಕ್ಯಾನ್ಸರ್ ದಿನದ ಅಂಗವಾಗಿ ಸಿಎಸ್‌ಐ ಹೋಲ್ಡ್ಸ್‌ವರ್ತ್ ಮೆಮೋರಿಯಲ್ (ಮಿಷನ್) ಆಸ್ಪತ್ರೆ ವತಿಯಿಂದ ಶನಿವಾರ ಕ್ಯಾನ್ಸರ್ ಜಾಗೃತಿ ಜಾಥಾ ನಡೆಸಲಾಯಿತು.

ಆಸ್ಪತ್ರೆಯ ನರ್ಸಿಂಗ್ ವಿದ್ಯಾರ್ಥಿಗಳು, ಸಿಬ್ಬಂದಿ ಮೈಸೂರಿನ ರೈಲ್ವೆ ನಿಲ್ದಾಣದ ಮಾರ್ಗವಾಗಿ ಆಯುರ್ವೇದ ವೃತ್ತ (ಕೆ.ಆರ್.ಆಸ್ಪತ್ರೆ ವೃತ್ತ)ದವರೆಗೆ ಜಾಥಾದಲ್ಲಿ ಪಾಲ್ಗೊಂಡು ಸಾರ್ವಜನಿಕರಿಗೆ ಕ್ಯಾನ್ಸರ್ ರೋಗದ ಕುರಿತು ಜಾಗೃತಿ ಮೂಡಿಸಿದರು. ವಿದ್ಯಾರ್ಥಿಗಳು ಕ್ಯಾನ್ಸರ್ ಕುರಿತ ಕಿರುನಾಟಕ, ಹಾಡಿನ ಮೂಲಕ ಕ್ಯಾನ್ಸರ್ ಬರದಂತೆ ವಹಿಸಬೇಕಾದ ಮುನ್ನೆಚ್ಚರಿಕೆ ಕುರಿತು ಜನರಲ್ಲಿ ಜಾಗೃತಿ ಉಂಟು ಮಾಡಿದರು.